"JANAPADA" Monthly - June 2017
"ಜನಪದ" ಮಾಸಿಕ – ಜೂನ್ 2017

Page No. -52
RNI No. KAR/KAN/2010/20676

Regd No. KA/BG/GPO-2526/2015-2017 License to post without prepayment WPP 34, Published on 27th
Dt. 29th & 30th Posted at (Every month), Bangalore PSO, Mysore Road, Bangalore - 26

## ಗಿಡ ಬೆಳೆಸಿ; ಪರಿಸರ ಉಳಿಸಿ



4 ನುಡಿದಂತೆ ನಡೆಯುತ್ತಿದ್ದೇವೆ...
ಸಾಧನೆಯ ನಾಲ್ಕು ವರ್ಷಗಳು

ವಾರ್ಷಿಕ ಚಂದಾ ರೂ.25/-

# ಜನಪದ

ಜೂನ್ 2017



## ಜನಮನನ ಜನನಮನ

ಸೌಲಭ್ಯಗಳ ವಿತರಣೆಯೇ ಸಂಭ್ರಮ





ಚಿತ್ರದುರ್ಗದ ಸಮಾರಂಭದಲ್ಲಿ ಪುಸ್ತಕ ಬಿಡುಗಡೆ

## ಚಿತ್ರದುರ್ಗದಲ್ಲಿ ನಡೆದ ಜನಮನನ–ಜನನಮನ ಕಾರ್ಯಕ್ರಮದಲ್ಲಿ
## ಮಾನ್ಯ ಮುಖ್ಯಮಂತ್ರಿಗಳಿಂದ ಫಲಾನುಭವಿಗಳಿಗೆ ಸೌಲಭ್ಯ ವಿತರಣೆ






05 ಜನಮನನ ಜನನಮನ

12 ನಾಲ್ಕು ವರ್ಷ ; ನಾನಾ ಹರ್ಷ
(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ)

17 ಸರ್ವರಿಗೂ ಸೂರು

20 ಮೂಲಸೌಲಭ್ಯ ಅಭಿವೃದ್ಧಿ
• ರಾಜು ಅಡಕಹಳ್ಳಿ

24 ಧಾರವಾಡ ಜಿಲ್ಲೆಯ 9 ಕೆರೆಗಳಿಗೆ ತುಪ್ಪರಿಹಳ್ಳದ ನೀರು
• ಮಂಜುನಾಥ್ ಡಿ ಡೊಳ್ಳಿನ

26 ನಮ್ಮ ಪರಿಸರ ಶುದ್ಧವಾಗಿರಲಿ
• ಡಾ. ಗುರುಲಿಂಗಪ್ಪ ಅಂಕದ

29 ಕೋಲಾರದಲ್ಲಿ ಬೃಹತ್ ಉದ್ಯೋಗ ಮೇಳ
• ಎಸ್. ಆರ್. ರಾಕೇಶ್ ಕೋಲಾರ

34 ಗ್ರಾಮೀಣಾಭಿವೃದ್ಧಿಯ ಉತ್ತಮ ಮಾದರಿ
• ಎಸ್ ಸಿ ದೇವರಮನಿ

38 ತಣ್ಣೀರುಬಾವಿ ಟ್ರೀಪಾರ್ಕ್
• ಡಾ. ಎಸ್. ಎನ್. ಅಮೃತ ಮಲ್ಲ

41 ಮೈಸೂರು ಬ್ಯಾಂಕ್ – ಇನ್ನು ಬರೀ ನೆನಪು
• ಕೆ. ಎಸ್. ಸೋಮೇಶ್ವರ

44 ಕನ್ನಡ ಪ್ರೇಮಿ ಡಾ. ಮೋಗ್ಲಿಂಗ್
• ಸುರೇಶ ಗೋವಿಂದರಾವ್ ದೇಸಾಯಿ

46 ಯೋಗ ಮತ್ತು ಆರೋಗ್ಯ
• ಡಾ. ಪ್ರಕಾಶ ಪಿ. ಪವಾಡಶೆಟ್ಟಿ

ಪ್ರಧಾನ ಸಂಪಾದಕರು
ಎನ್. ಆರ್. ವಿಶುಕುಮಾರ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಎಂ. ರವಿಕುಮಾರ್
ಜಂಟಿ ನಿರ್ದೇಶಕರು
ಬಸವರಾಜ ಕಂಬಿ
ಉಪ ನಿರ್ದೇಶಕರು

ಉಪ ಸಂಪಾದಕರು
ಸಿ. ರೂಪಾ
ಸಹಾಯಕ ನಿರ್ದೇಶಕರು

ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 01
email : varthajanapada@yahoo.co.in

ಮುದ್ರಕರು
ಲಾವಣ್ಯ ಮುದ್ರಣ
#19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು – 50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

# ಓದುಗರಿಂದ...

### ರೈತರ ಬೆನ್ನಿಗೆ ನಿಂತ ಸರ್ಕಾರ


'ರೈತರ ಬೆನ್ನಿಗೆ ನಿಂತ ಸರ್ಕಾರ' ಲೇಖನ ಮನ ಮುಟ್ಟುವಂತಿದೆ. ಅನ್ನದಾತನ ಕಲ್ಯಾಣಕ್ಕಾಗಿ ಕೃಷಿ ಇಲಾಖೆ ಎಷ್ಟೆಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸರ್ಕಾರ ರೈತ ಪರ ಕಾಳಜಿಯಿಂದ ಎಷ್ಟೆಲ್ಲ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ರೈತ ಬಾಂಧವರು ಸಕಾಲದಲ್ಲಿ ರೈತ ಕೇಂದ್ರಗಳನ್ನು ಸಂಪರ್ಕಿಸಿ ನೆರವು ಪಡೆದುಕೊಳ್ಳುವುದು ಸೂಕ್ತ. ರೈತರ ಹಿತ ಕಾಪಾಡಲು ಕೃಷಿ ಹೊಂಡಗಳು, ಹನಿ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ಸರ್ಕಾರ ನೆರವು ನೀಡುತ್ತಿದೆ. ಇದರ ಸಂಪೂರ್ಣ ಪ್ರಯೋಜನ ಪಡೆದುಕೊಂಡು ಹೊಸ ಕೃಷಿ ಪ್ರಯೋಗಗಳನ್ನು ಮಾಡುವುದು ಸೂಕ್ತ .

–ಎನ್. ಮಹಾದೇವ್
ಹೊಳೆ ನರಸೀಪುರ

ಮುಖಪುಟ ಲೇಖನ ಬಹಳ ಅರ್ಥವತ್ತಾಗಿದೆ. ಕೃಷಿಕರಿಗಾಗಿ ಸರ್ಕಾರ ನೀಡುವ ಸವಲತ್ತುಗಳ ಸಂಪೂರ್ಣ ಸದ್ಬಳಕೆ ಆಗಬೇಕು. ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆಗೆ ನೀಡುವ ಕಾರ್ಯಕ್ರಮ ಬಹಳಷ್ಟು ಸಹಕಾರಿಯಾಗಿದೆ. ಕೃಷಿಕರು ಎದೆಗುಂದದೆ ಯೋಜನೆಗಳ ನೆರವು ಪಡೆದು ಬದುಕನ್ನು ಸಾಕಾರ ಮಾಡಿಕೊಳ್ಳಬೇಕು. ನೀರಿನ ಮಿತವ್ಯಯ ಸಾಧಿಸಲು ಹನಿ ನೀರಾವರಿ ಪದ್ಧತಿ ಅಳವಡಿಸಿಕೊಳ್ಳಬೇಕು. ಮಳೆ ನೀರನ್ನು ಶೇಖರಿಸಲು ಅನುಕೂಲವಾಗುವಂತೆ ಕೃಷಿಹೊಂಡಗಳನ್ನು ನಿರ್ಮಿಸಿಕೊಳ್ಳಬೇಕು.

**ಬಿ. ಸೋಮಶೇಖರ,** ಮಾಲೂರು

**'ಜನಪದ' ಮಾಸಿಕ ಈಗ www.kanaja.inನಲ್ಲಿ ಲಭ್ಯ**




### ಅಭಿನಂದನೆ

'ಗ್ರಾಮ ಸ್ವರಾಜ್ಯ ಕರ್ನಾಟಕದ ಸಾಧನೆ' ಲೇಖನ ಗ್ರಾಮೀಣಾಭಿವೃದ್ಧಿಯ ಸಕಲ ಸಾಧನೆಗಳನ್ನು ಓದುಗರಿಗೆ ತೆರೆದಿಟ್ಟಿದೆ. ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸತತ ಮೂರು ವರ್ಷಗಳಿಂದ ಕೇಂದ್ರ ಸರ್ಕಾರದ ಪುರಸ್ಕಾರ ಸಂದಿರುವುದು ಹೆಮ್ಮೆಯ ವಿಷಯ. ಈ ವರ್ಷದ ಡಿಸೆಂಬರ್ ಒಳಗೆ ನಾಡನ್ನು ಬಯಲು ಶೌಚ ಮುಕ್ತ ಮಾಡುವ ಸರ್ಕಾರದ ನಿರ್ಧಾರಕ್ಕೆ ಜನತೆಯೂ ಕೈ ಜೋಡಿಸಬೇಕಿದೆ. ಸಮುದಾಯವೂ ಸರ್ಕಾರದೊಂದಿಗೆ ಭಾಗವಹಿಸಿ ಈ ಯೋಜನೆಯನ್ನು ಯಶಸ್ವಿಗೊಳಿಸಬೇಕಿದೆ.

**ಎ. ನಾಗರಾಜ್** ಚಿಕ್ಕಮಗಳೂರು

**'ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/– ಅನ್ನು ಕಡ್ಡಾಯವಾಗಿ ಡಿ.ಡಿ. ಮುಖಾಂತರವೇ ಕಳಿಸಬೇಕು. ಮನಿ ಆರ್ಡರ್ ಹಣವನ್ನು ಸ್ವೀಕರಿಸುವುದಿಲ್ಲ.**

ವಾರ್ಷಿಕ ಚಂದಾ ರೂ.25/–

### ರೈತಸ್ನೇಹಿ ಯೋಜನೆಗಳು

ಲೇಖನ ಬಹಳ ಮಾಹಿತಿಪೂರ್ಣವಾಗಿದೆ. ಕೃಷಿ ಯೋಜನೆಗಳನ್ನು/ ಕಾರ್ಯಕ್ರಮಗಳನ್ನು ತಿಳಿಸಿಕೊಟ್ಟಿದ್ದಕ್ಕೆ ಧನ್ಯವಾದಗಳು. ಕೃಷಿ ಯಂತ್ರಧಾರೆ, ಸಾವಯವ ಕೃಷಿ ಯೋಜನೆ, ಕೃಷಿ ಅಭಿಯಾನ ಕಾರ್ಯಕ್ರಮಗಳು, ಪಾಲಿಹೌಸ್ ನಿರ್ಮಾಣ, ಮಣ್ಣು ಆರೋಗ್ಯ ಅಭಿಯಾನದಂಥ ಕಾರ್ಯಕ್ರಮಗಳು ರೈತ ಸ್ನೇಹಿಯಾಗಿವೆ.

**ಕೆ. ಚೇತನಾ ಕುಮಾರಿ,** ದಾವಣಗೆರೆ

'ಅನ್ನಭಾಗ್ಯ' ಯೋಜನೆಯ ಲೇಖನ ಯೋಜನೆಯ ಮಹತ್ವವನ್ನು ಚೆನ್ನಾಗಿ ನಿರೂಪಿಸಿದೆ. 'ಹಸಿದವರಿಗೆ ಮಾತ್ರ ಅನ್ನದ ಮಹತ್ವ ಅರಿವಾಗುತ್ತದೆ' ಎಂಬ ಮಾತು ಸತ್ಯ. 'ಹಸಿವು ಮುಕ್ತ ಸಮಾಜದ ಕಲ್ಪನೆಯೇ ಒಂದು ಸಮಗ್ರ ಯೋಜನೆ' ಎನ್ನುವುದು ನಿಸ್ಸಂದೇಹವಾಗಿ ಸತ್ಯ. ಈ ಕಲ್ಪನೆ ನೆರೆ ರಾಜ್ಯಗಳಿಗೂ ಹಬ್ಬಿ ಅಲ್ಲೂ ಕಾರ್ಯಾರಂಭಗೊಳ್ಳಲಿ ಎಂದು ಆಶಿಸುತ್ತೇವೆ.

**ಪಿ ರವೀಂದ್ರ,**
ಹುಬ್ಬಳ್ಳಿ

ಯೋಜನೆಯ ಸಂಪೂರ್ಣ ಮಾಹಿತಿಯನ್ನು. ಅದರ ಹಿಂದಿನ ಮಾನ್ಯ ಮುಖ್ಯಮಂತ್ರಿಗಳ ಸಾಮಾಜಿಕ ಕಳಕಳಿಯನ್ನು ತೆರೆದಿಟ್ಟ ಲೇಖನಕ್ಕೆ ನಮ್ಮ ನಮನಗಳು. ಪ್ರಮಾಣ ವಚನ ಸ್ವೀಕರಿಸಿದ ದಿನವೇ ಇಂಥದೊಂದು ನಿರ್ಧಾರ ತೆಗೆದುಕೊಂಡ ಮಾನ್ಯ ಮುಖ್ಯಮಂತ್ರಿಗಳು ಅಭಿನಂದನಾರ್ಹರು.

**ಕೆ. ಮಂಜುನಾಥ,**
ಶ್ರೀನಿವಾಸಪುರ

ಹೋ ಶ್ರೀನಿವಾಸಯ್ಯ ಅವರ ಕುರಿತಾದ ಲೇಖನ ಓದಿ ಕಣ್ಣು ಹನಿಗೂಡಿತು. ಗಾಂಧಿ ತತ್ವಗಳ ನೆರಳಲ್ಲೇ ನಡೆದ ಹಿರಿಯ ಗಾಂಧಿವಾದಿಗಳು ಅವರು. ಅವರ ಜೀವನ ಕಿರಿಯರಿಗೆ ಮಾದರಿಯಂತಿದೆ.

**ಎನ್ ಎಸ್ ಕುಮಾರ್**
ಬೆಂಗಳೂರು







## ಸಾಧನೆಯ ಹಾದಿಯಲ್ಲಿ ಐದನೇ ವರ್ಷದೆಡೆಗೆ;

# ಜನಮನನ ಜನನಮನ

## ಸೌಲಭ್ಯಗಳ ವಿತರಣೆಯೇ ಸಂಭ್ರಮ

**ಧನಂಜಯ ಬಿ**

**ಸ**ರ್ಕಾರ ಮೇ 13 ಕ್ಕೆ ನಾಲ್ಕು ವರ್ಷಗಳನ್ನು ಪೂರೈಸಿ ಐದನೇ ವರ್ಷದೆಡೆಗೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ಯಾವುದೇ ವಿಜೃಂಭಣೆಗೆ ಮುಂದಾಗದೇ ಜನರಿಗೆ ಸೌಲಭ್ಯಗಳನ್ನು ವಿತರಣೆ ಮಾಡುವ ಮೂಲಕ ಜನರ ಸಂಕಷ್ಟಕ್ಕೆ ಭಾಗಿಯಾಗಲು 2017 ರ ಮೇ 13 ರಂದು ಚಿತ್ರದುರ್ಗದಲ್ಲಿ ಜನಮನನ–ಜನನಮನ ಸೌಲಭ್ಯಗಳ ವಿತರಣೆಯೇ ಸಂಭ್ರಮ ಕಾರ್ಯಕ್ರಮವನ್ನು ಏರ್ಪಡಿಸುವ ಮೂಲಕ 25 ಸಾವಿರಕ್ಕಿಂತ ಹೆಚ್ಚು ಫಲಾನುಭವಿಗಳಿಗೆ ವಿವಿಧ ಇಲಾಖೆಗಳಿಂದ ಸೌಲಭ್ಯಗಳನ್ನು ವಿತರಣೆ ಮಾಡಲಾಯಿತು.

ಸರ್ಕಾರ ಪ್ರಮುಖವಾಗಿ ಎಲ್ಲಾ ವರ್ಗದ ಬಡವರಿಗೂ ಅನುಕೂಲವಾಗುವಂತಹ ಅನೇಕ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಸಂವಿಧಾನದ ಆಶಯದಂತೆ

## ಮಾನ್ಯ ಮುಖ್ಯಮಂತ್ರಿಗಳ ಭಾಷಣದ ಪ್ರಮುಖ ಅಂಶಗಳು

ಅಧಿಕಾರಕ್ಕೆ ಬಂದು ನಾಲ್ಕು ವರ್ಷಗಳನ್ನು ಪೂರೈಸಲಾಗಿದೆ. ಈ ಸಂದರ್ಭದಲ್ಲಿ ನಾವು ಜನರಿಗೆ ಕೊಟ್ಟ 165 ಭರವಸೆಗಳಲ್ಲಿ 155 ಭರವಸೆಗಳನ್ನು ಈಡೇರಿಸಲಾಗಿದೆ. ನೀರಾವರಿಗೆ ಐದು ವರ್ಷಗಳಲ್ಲಿ ಪ್ರತಿ ವರ್ಷ 10 ಸಾವಿರದಂತೆ ವೆಚ್ಚ ಮಾಡಿ ರಾಜ್ಯದಲ್ಲಿನ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿತ್ತು. ಈಗಾಗಲೇ 4 ವರ್ಷಗಳಲ್ಲಿ 42 ಸಾವಿರ ಕೋಟಿ ವೆಚ್ಚ ಮಾಡಲಾಗಿದೆ. ಐದು ವರ್ಷಗಳಲ್ಲಿ ಇದು 62 ಸಾವಿರ ಕೋಟಿ ತಲುಪಲಿದೆ.

ಚಿತ್ರದುರ್ಗ ಜಿಲ್ಲೆಯು ಸೇರಿದಂತೆ ತುಮಕೂರು, ಚಿಕ್ಕಮಗಳೂರು ಜಿಲ್ಲೆಗೆ ನೀರಾವರಿ ಕಲ್ಪಿಸುವ ಭದ್ರಾ ಮೇಲ್ದಂಡೆ ಯೋಜನೆಗೆ 12500 ಕೋಟಿ ವೆಚ್ಚ ಮಾಡಲಾಗುತ್ತಿದ್ದು ಈಗಾಗಲೇ 1893 ಕೋಟಿ ವೆಚ್ಚ ಮಾಡಲಾಗಿದೆ. ಬರುವ ಡಿಸೆಂಬರ್ ಒಳಗಾಗಿ ಭದ್ರಾ ಮೇಲ್ದಂಡೆ ಯೋಜನೆಯಡಿ ಚಿತ್ರದುರ್ಗಕ್ಕೆ ನೀರು ಕೊಡಲಾಗುತ್ತದೆ. ಮತ್ತು ಎತ್ತಿನಹೊಳೆ ಯೋಜನೆಯನ್ನು ತ್ವರಿತಗತಿಯಲ್ಲಿ ಕೈಗೊಳ್ಳಲಾಗುತ್ತಿದ್ದು ಯಾವುದೇ ಕಾರಣಕ್ಕೂ ಈ ಯೋಜನೆ ನಿಲ್ಲದು. ಈಗಾಗಲೇ 2 ಸಾವಿರ ಕೋಟಿ ವೆಚ್ಚಮಾಡಲಾಗಿದ್ದು ಮುಂದಿನ ಒಂದು ವರ್ಷದಲ್ಲಿ ಇನ್ನೂ ಒಂದು ಸಾವಿರ ಕೋಟಿ ಎತ್ತಿನಹೊಳೆಗೆ ಖರ್ಚಾಗಲಿದೆ. ಮಧ್ಯ ಕರ್ನಾಟಕ, ಬಯಲುಸೀಮೆ ಜಿಲ್ಲೆಗಳಿಗೆ ನೀರನ್ನು ಒದಗಿಸಲು ಸರ್ಕಾರ ಬದ್ಧವಾಗಿದೆ, ಇವು ನಮ್ಮ ಆದ್ಯತಾ ಕೆಲಸಗಳಾಗಿವೆ ಎಂದರು.





ರಾಜ್ಯದಲ್ಲಿನ ರೈತರಿಗೆ 10 ಹೆಚ್.ಪಿ.ವರೆಗೆ ರೈತರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಲಾಗುತ್ತಿದೆ. 25 ಲಕ್ಷ ಪಂಪ್‌ಸೆಟ್‌ಗಳಿದ್ದು ಇದರ ವಿದ್ಯುತ್ ವೆಚ್ಚವಾಗಿ ಸರ್ಕಾರ 9 ಸಾವಿರಕೋಟಿ ಖರ್ಚು ಮಾಡುತ್ತಿದೆ. ಭೀಕರ ಬರಗಾಲದಲ್ಲಿಯು ಸಹ ವಿದ್ಯುತ್ ಸಮಸ್ಯೆಯಾಗದಂತೆ 7 ಗಂಟೆ ತ್ರೀಫೇಸ್ ಪಂಪ್‌ಸೆಟ್‌ಗಳಿಗೆ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯನ್ನಿಟ್ಟುಕೊಂಡು ಲೋಡ್ ಶೆಡ್ಡಿಂಗ್ ಮಾಡದೇ ವಿದ್ಯುತ್ ನೀಡಲಾಗುತ್ತದೆ. ಮತ್ತು ಭೀಕರ ಬರಗಾಲದಿಂದ ಕುಡಿಯುವ ನೀರಿನ ಸಮಸ್ಯೆಯು ತೀವ್ರತರವಾಗಿದ್ದು ತೊಂದರೆಯಾಗದಂತೆ ಕುಡಿಯುವ ನೀರು ಪೂರೈಕೆ ಮತ್ತು ಜಾನುವಾರುಗಳ ರಕ್ಷಣೆಗೆ ಮೇವು ಬ್ಯಾಂಕ್, ಗೋಶಾಲೆಗಳನ್ನು ತೆರೆಯಲಾಗಿದೆ ಎಂದರು.

ಮತ್ತು ಹಸಿವು ಮುಕ್ತ ಕರ್ನಾಟಕವನ್ನು ಮಾಡಲು ಬಡವರಿಗೆ ಪ್ರತಿ ತಿಂಗಳು ಒಬ್ಬರಿಗೆ 7 ಕೆ.ಜಿ.ಉಚಿತ ಅಕ್ಕಿಯನ್ನು ಅವರ ಮನೆಯಲ್ಲಿ ಎಷ್ಟೇ ಸದಸ್ಯರಿದ್ದರೂ ಅಷ್ಟೂ ಜನರಿಗೆ ಅಕ್ಕಿಯನ್ನು ನೀಡಲಾಗುತ್ತದೆ. ನಾವು ಯಾರನ್ನು ಸೋಮಾರಿಗಳನ್ನಾಗಿ ಮಾಡಲು ಅಕ್ಕಿ ವಿತರಣೆ ಮಾಡುತ್ತಿಲ್ಲ, ಹಸಿವಿನಿಂದ ಯಾರು ಸಹ ಬಳಲಬಾರದು ಎನ್ನುವುದು ನಮ್ಮ ಉದ್ದೇಶವಾಗಿದೆ ಎಂದರು.

ವಸತಿಭಾಗ್ಯ; ಐದು ವರ್ಷಗಳಲ್ಲಿ 15 ಲಕ್ಷ ಮನೆಗಳನ್ನು ನಿರ್ಮಾಣ ಮಾಡಬೇಕೆಂದು ಗುರಿ ಹೊಂದಲಾಗಿದ್ದು ಈಗಾಗಲೇ 11 ಲಕ್ಷ ಮನೆಗಳನ್ನು ನಿರ್ಮಾಣ ಮಾಡಲಾಗಿದೆ. ಮುಂದಿನ ಒಂದು ವರ್ಷದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ 4 ಲಕ್ಷ ಹಾಗೂ ಬೆಂಗಳೂರಿನಲ್ಲಿ 1 ಲಕ್ಷ ಮನೆಗಳನ್ನು ನಿರ್ಮಾಣ ಮಾಡಿ ಬಡವರಿಗೆ ನೀಡಲಾಗುತ್ತದೆ. ಪರಿಶಿಷ್ಟ ಜಾತಿ, ಪಂಗಡದವರಿಗೆ ನಿವೇಶನ ಇದ್ದ ಎಲ್ಲರಿಗೂ ಮನೆಗಳನ್ನು ನೀಡಲಾಗುತ್ತದೆ. ಈ ನಾಲ್ಕು ವರ್ಷಗಳು ಸೇರಿದಂತೆ ಐದು ವರ್ಷಗಳ ಅವಧಿಯಲ್ಲಿ 82 ಸಾವಿರ ಕೋಟಿಯನ್ನು ವಿಶೇಷ ಘಟಕ ಹಾಗೂ ಗಿರಿಜನ ಉಪಯೋಜನೆಯಡಿ ವೆಚ್ಚ ಮಾಡಲಾಗುತ್ತದೆ.

ನಿರುದ್ಯೋಗಿಗಳಿಗೆ ಉದ್ಯೋಗ; ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಸಾಕಷ್ಟು ಉದ್ಯೋಗಾವಕಾಶಗಳಿದ್ದರೂ ಸಹ ಕೌಶಲ್ಯತೆಯ ಕೊರತೆಯಿಂದ ನಿರುದ್ಯೋಗಿಗಳಾಗಿದ್ದಾರೆ. ಇಂತಹ ನಿರುದ್ಯೋಗಿ ಯುವಕ, ಯುವತಿಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ ಉದ್ಯೋಗ ಒದಗಿಸಲು 5 ಲಕ್ಷ ಜನರಿಗೆ ತರಬೇತಿ ನೀಡಲು ನೊಂದಣಿ ಪ್ರಾರಂಭಿಸಲಾಗಿದೆ. ಇದರ ಉಪಯೋಗ ಯುವ ಜನಾಂಗ ಪಡೆದುಕೊಳ್ಳಬೇಕೆಂದರು.

### 49 ಸಾವಿರ ಫಲಾನುಭವಿಗಳು

ಕಾರ್ಯಕ್ರಮದಲ್ಲಿ ಚಿತ್ರದುರ್ಗದ 29 ಸಾವಿರ ಜನ ಫಲಾನುಭವಿಗಳು ಸೇರಿದಂತೆ 9 ಜಿಲ್ಲೆಗಳಿಂದ ವಿವಿಧ ಯೋಜನೆಗಳ 49 ಸಾವಿರ ಫಲಾನುಭವಿಗಳು ಈ ಸುಂದರ ಸಮಾರಂಭಕ್ಕೆ ಸಾಕ್ಷಿಯಾದರು.

ಮೂರು ಸಾವಿರ ಚೆಕ್‌ನಿಂದ ಹಿಡಿದು 20 ಲಕ್ಷದವರೆಗಿನ ಚೆಕ್‌ಗಳನ್ನು ಸ್ವೀಕರಿಸಿದ ಫಲಾನುಭವಿಗಳು ಮುಖ್ಯಮಂತ್ರಿಗಳಿಗೆ ನಮನ ಸಲ್ಲಿಸುವುದನ್ನು ಮರೆಯಲಿಲ್ಲ.

### ಮನಸೆಳೆದ ಮಾಹಿತಿ ಹಾಗೂ ವಸ್ತು ಪ್ರದರ್ಶನ ಮಳಿಗೆಗಳು

ಮುಖ್ಯ ವೇದಿಕೆಯ ಎರಡೂ ಬದಿ ವಿವಿಧ ಇಲಾಖೆಗಳು ತಮ್ಮ ಇಲಾಖೆಯಲ್ಲಿ ಸಿಗುವ ಸವಲತ್ತುಗಳ ಹಾಗೂ ಇಲಾಖೆಯಲ್ಲಿ ಮಾಡಿರುವ ಸಾಧನೆಗಳನ್ನು ಅನಾವರಣಗೊಳಿಸಲು ಮಾಹಿತಿ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ಹಾಗೂ ವಾರ್ತಾ ಇಲಾಖೆಯಿಂದ ಹಾಕಲಾಗಿದ್ದ ವಿಶೇಷ ಮಾಹಿತಿ ಮಳಿಗೆ ಸಭಾಂಗಣ ನೋಡುಗರ ಕಣ್ಣಿಗೆ ಹಬ್ಬದಂತಿತ್ತು.

ಒಂಬತ್ತು ಜಿಲ್ಲೆಗಳಿಗೆ ಪ್ರತ್ಯೇಕವಾಗಿ ಮಳಿಗೆಗಳನ್ನು ನೀಡಲಾಗಿತ್ತು. ವಾರ್ತಾ ಇಲಾಖೆಯ ನೇತೃತ್ವದ ಈ ಮಳಿಗೆಗಳಲ್ಲಿ ಜಿಲ್ಲೆಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಆಗಿರುವ ಕಣ್ಣಿಗೆ ಕಟ್ಟುವಂತ ಕಾಮಗಾರಿಗಳು ಹಾಗೂ ಜಿಲ್ಲೆಯ ಪ್ರಗತಿಯ ಭರಪೂರ ಮಾಹಿತಿಗಳನ್ನೊಳಗೊಂಡ ಮಳಿಗೆಗಳಿಗೆ ಮಹಿಳೆಯರು, ಮಕ್ಕಳು, ಅಧಿಕಾರಿಗಳು ಗುಂಪು ಗುಂಪಾಗಿ ಬಂದು ಮಾಹಿತಿ ಕೇಳಿ ತಿಳಿದುಕೊಳ್ಳುವುದು ಹಲವಾರು ಮಳಿಗೆಗಳ ಮುಂದೆ ಸೆಲ್ಫಿ ಕ್ಲಿಕ್ಕಿಸಿಕೊಂಡು ಕುತೂಹಲದಿಂದ ಮಾಹಿತಿ ಕೇಳಿ ತಿಳಿದುಕೊಳ್ಳುವುದು ವಿಶೇಷವಾಗಿತ್ತು.

# ವಾರ್ತಾ ಇಲಾಖೆಯಿಂದ ವಿನೂತನ ಮಾಹಿತಿ ಉತ್ಸವ; ಯೋಜನೆ, ಅರಿವು, ಮನರಂಜನೆ

ಸರ್ಕಾರವು ಮೇ 13 ಕ್ಕೆ ನಾಲ್ಕು ವರ್ಷಗಳನ್ನು ಪೂರೈಸಿ ಐದನೇ ವರ್ಷದೆಡೆಗೆ ಕಾಲಿಡುತ್ತಿರುವ ಸಂದರ್ಭದಲ್ಲಿ ಬೆಂಗಳೂರು ವಿಭಾಗದ ಜಿಲ್ಲೆಗಳ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸವಲತ್ತು ವಿತರಣೆಯನ್ನು ಮಾಡುವ ಮೂಲಕ ನಾಲ್ಕನೇ ವರ್ಷಾಚರಣೆಯನ್ನು ಮಾಡಲಾಗಿದ್ದು ಈ ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಮಾಹಿತಿ ಉತ್ಸವವನ್ನು ಮೇ 13 ರಿಂದ 15 ರ ವರೆಗೆ ಚಿತ್ರದುರ್ಗದ ಸೈನ್ಸ್ ಕಾಲೇಜು ಮೈದಾನದಲ್ಲಿ ಏರ್ಪಡಿಸಲಾಗಿತ್ತು.

ಬರಗಾಲದ ಹಿನ್ನೆಲೆಯಲ್ಲಿ ಯಾವುದೇ ಅದ್ದೂರಿ ಆಚರಣೆಗೆ ಮುಂದಾಗದೇ ವಿವಿಧ ಯೋಜನೆಗಳಡಿ ಫಲಾನುಭವಿಗಳಿಗೆ ಸವಲತ್ತು ವಿತರಣೆ ಮಾಡುವ ಮೂಲಕ ಇಂತಹ ಸಂಕಷ್ಟದ ಸಂದರ್ಭದಲ್ಲಿ ನೈತಿಕಸ್ಥೈರ್ಯ ತುಂಬಿದಂತಾಗುತ್ತದೆ ಎನ್ನುವುದು ಕಾರ್ಯಕ್ರಮದ ಉದ್ದೇಶವಾಗಿತ್ತು.






ಬೆಂಗಳೂರು ವಿಭಾಗದ 9 ಜಿಲ್ಲೆಗಳ ಫಲಾನುಭವಿಗಳ ಸಮಾವೇಶವನ್ನು ಚಿತ್ರದುರ್ಗದ ಸೈನ್ಸ್ ಕಾಲೇಜು ಮೈದಾನದಲ್ಲಿ ಮೇ 13 ರಂದು ಏರ್ಪಡಿಸಿ 25 ಸಾವಿರಕ್ಕಿಂತಲೂ ಹೆಚ್ಚಿನ ಜನರಿಗೆ ಸರ್ಕಾರದ ಸವಲತ್ತುಗಳನ್ನು ವಿತರಣೆ ಮಾಡಲಾಯಿತು.

ಈ ಸಮಾವೇಶದಲ್ಲಿ ಮುಖ್ಯಮಂತ್ರಿಗಳು ಸೇರಿದಂತೆ ಅನೇಕ ಹಿರಿಯ ಸಚಿವರು, ಶಾಸಕರು, ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಸಂಸದರು ಸೇರಿದಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಭಾಗವಹಿಸಿದ್ದರು. ಒಂಬತ್ತು ಜಿಲ್ಲೆಗಳಿಂದ ಸುಮಾರು 50 ಸಾವಿರಕ್ಕೂ ಹೆಚ್ಚು ಜನರು ಸಮಾವೇಶದಲ್ಲಿ ಭಾಗವಹಿಸಿದ್ದರು. ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್‌ನಿಂದ ಅಷ್ಟೂ ಜನರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

**ಮಾಹಿತಿ ಉತ್ಸವ** : ಸರ್ವರಿಗೂ ಸಮಪಾಲು, ಸಮಬಾಳು ನೀಡುವುದೇ ಕಲ್ಯಾಣ ಸರ್ಕಾರದ ಉದ್ದೇಶವಾಗಿದ್ದು ಇಂತಹ ಯೋಜನೆಗಳೇನು ಎನ್ನುವುದನ್ನು ತನ್ನ ಜನರಿಗೆ ತಿಳಿಸುವುದು ಸಹ ಬಹುಮುಖ್ಯವಾಗಿರುತ್ತದೆ. ಸರ್ಕಾರದ ಯೋಜನೆಗಳು, ಸವಲತ್ತುಗಳ ಮಾಹಿತಿ ನೀಡುವ ಉದ್ದೇಶದಿಂದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಮಾಹಿತಿ ಉತ್ಸವವನ್ನು ಮೇ 13, 14, 15 ರಂದು ಏರ್ಪಡಿಸಲಾಗಿತ್ತು. ಮಾಹಿತಿ, ಅರಿವು, ಕಲೆ, ಸಾಂಸ್ಕೃತಿಕತೆ ಜಾಗೃತಿಯ ಜೊತೆಗೆ ಜನರಲ್ಲಿ ಉತ್ಸಾಹ ತುಂಬಲು ಗಾಯನ ಕಾರ್ಯಕ್ರಮಗಳ ಮೂಲಕ ಜಾಗೃತಿ ಆಧಾರಿತ ಮನರಂಜನೆ ಈ ಪ್ರಮುಖ ಅಂಶಗಳನ್ನಿಟ್ಟುಕೊಂಡು ಮಾಹಿತಿ ಉತ್ಸವವನ್ನು ಏರ್ಪಡಿಸಲಾಗಿತ್ತು.

ಜನರ ಒಳಿತಿಗಾಗಿ ಏನೆಲ್ಲಾ ಯೋಜನೆಗಳನ್ನು ಸರ್ಕಾರ ರೂಪಿಸುತ್ತದೆ, ಆದರೆ ಇಂತಹ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ತಲುಪಿದಾಗ ಇದರ ಉದ್ದೇಶ ಸಾಕಾರವಾಗುತ್ತದೆ. ಇದಕ್ಕಾಗಿ ವಿವಿಧ ಇಲಾಖೆಗಳಿಂದ ವಸ್ತುಪ್ರದರ್ಶನವನ್ನು ಏರ್ಪಡಿಸಿ ಇಲಾಖೆಗಳಿಂದ ಕೈಗೊಳ್ಳಲಾದ ಯೋಜನೆಗಳು, ಪ್ರಗತಿಯ ವಿವರ ಸೇರಿದಂತೆ ಪ್ರಮುಖ ಮಾದರಿಗಳನ್ನು ಪ್ರದರ್ಶನ ಮಾಡಲಾಗಿತ್ತು. ಬೆಂಗಳೂರು ವಿಭಾಗದ ಒಂಬತ್ತು ಜಿಲ್ಲೆಗಳು ಸೇರಿದಂತೆ ಇಲಾಖೆಗಳು, ನಿಗಮಗಳಿಂದಲೂ ವಸ್ತುಪ್ರದರ್ಶನ ಏರ್ಪಡಿಸಲಾಗಿತ್ತು. ಕೃಷಿ ಇಲಾಖೆಯಿಂದ ಕೃಷಿಹೊಂಡ, ಸೋಲಾರ್ ಪಂಪ್‌ಸೆಟ್ ಮಾದರಿ, ತೋಟಗಾರಿಕೆ ಬೆಳೆಗಳು, ಪಶುಸಂಗೋಪನಾ ಇಲಾಖೆಯಿಂದ ವಾರದಲ್ಲಿ ಹಸಿರುಮೇವು ಬೆಳವಣಿಗೆ ಮಾಡುವುದು, ಆರೋಗ್ಯ ಇಲಾಖೆಯಿಂದ ಆರೋಗ್ಯ ಸಂರಕ್ಷಣೆಗೆ ಲಭ್ಯವಿರುವ ಯೋಜನೆಗಳು, ಲಸಿಕೆಗಳ ಕುರಿತು ಹಾಗೂ ಆಗಮಿಸುವ ಸಾರ್ವಜನಿಕರಿಗೆ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು. ಮತ್ತು ಆಯುಷ್, ಅರಣ್ಯ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ, ಅಭಿವೃದ್ಧಿ ನಿಗಮಗಳಿಂದ ನೀಡಲಾಗುವ ಗಂಗಾ ಕಲ್ಯಾಣ, ಕೈಮಗ್ಗ ಮತ್ತು ಜವಳಿ ಇಲಾಖೆ, ಕಾರ್ಮಿಕ ಇಲಾಖೆಯಿಂದ ಕಾರ್ಮಿಕರಿಗಿರುವ ಯೋಜನೆಗಳು, ಸಾರಿಗೆ ಇಲಾಖೆಯಿಂದ ರಸ್ತೆ ಸುರಕ್ಷತಾ ನಿಯಮಗಳ ಪ್ರದರ್ಶನ, ಡಾ; ಬಾಬು ಜಗಜೀವನ್‌ರಾಂ ಚರ್ಮ ಅಭಿವೃದ್ಧಿ ನಿಗಮದ ಉತ್ಪನ್ನಗಳು, ಗ್ರಂಥಾಲಯಗಳಲ್ಲಿನ ಸ್ಪರ್ಧಾತ್ಮಕ ಪರೀಕ್ಷೆ ಪುಸ್ತಕಗಳು, ಸಾಹಿತ್ಯ ಕುರಿತ ಪುಸ್ತಕಗಳ ಪ್ರದರ್ಶನದ ಜೊತೆಗೆ ಬೆಂಗಳೂರು ವಿಭಾಗದ ಬೆಂಗಳೂರು ನಗರ, ಗ್ರಾಮಾಂತರ ಜಿಲ್ಲೆಗಳು, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ ಜಿಲ್ಲೆಯನ್ನು ಪ್ರತಿನಿಧಿಸುವ ಮಳಿಗೆಗಳು ವಸ್ತುಪ್ರದರ್ಶನದಲ್ಲಿದ್ದವು.

ಜನರಿಗೆ ಬರೀ ಮಾಹಿತಿ ನೀಡುವುದು ಮಾತ್ರ ಸಾಲದು ವಿವಿಧ ಮಾಧ್ಯಮಗಳ ಮೂಲಕ ಯಾವ ರೀತಿ ಯೋಜನೆಗಳ ಅರಿವು ಮೂಡಿಸಬಹುದೆಂದು ಹೊಸ ಪ್ರಚಾರದ ಆಯಾಮದ ಉಪಯೋಗ ಮಾಡಿದ್ದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ. ಚಿತ್ರದುರ್ಗದ ಸೈನ್ಸ್ ಕಾಲೇಜು ಮೈದಾನದಲ್ಲಿ ಮೇ 13 ರಿಂದ 15 ರ ವರೆಗೆ ಏರ್ಪಡಿಸಿದ ಮಾಹಿತಿ ಉತ್ಸವದಲ್ಲಿ ಪ್ರತಿದಿನ ಸಂಜೆ 7 ಗಂಟೆಯಿಂದ ಖ್ಯಾತ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಿ ಹಾಡು, ನೃತ್ಯದ ಮೂಲಕ ಯೋಜನೆಗಳ ಪ್ರಚಾರ, ಮನರಂಜನೆಯನ್ನು ಕೈಗೊಳ್ಳಲಾಯಿತು.

ಮೇ 13 ರಂದು ಸಂಜೆ 7 ಗಂಟೆಯಿಂದ ಚಲನಚಿತ್ರನಟಿ ರಿಷಿಕಾಸಿಂಗ್ ಮತ್ತು ತಂಡದವರಿಂದ ಗಾಯನ, ನೃತ್ಯ, ಹಾಸ್ಯ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಮೇ 14 ರಂದು ಬೆಳಗ್ಗೆ ರಾಜ್ಯ ಮಟ್ಟದ ಚಿತ್ರಕಲಾ ಶಿಬಿರ ಏರ್ಪಡಿಸಿ ಸುಮಾರು 100 ಕ್ಕೂ ಹೆಚ್ಚು ಚಿತ್ರಕಲಾವಿದರು ಇದರಲ್ಲಿ ಭಾಗವಹಿಸಿ ಯೋಜನೆಗಳನ್ನಾಧರಿಸಿದ ಚಿತ್ರಬಿಡಿಸಿದರು.



ಸಂಜೆಯ ಕಾರ್ಯಕ್ರಮದಲ್ಲಿ ಉದಯೋನ್ಮುಖ ಹಾಗೂ ಈ ತಲೆಮಾರಿನ ಹಿನ್ನೆಲೆಗಾಯಕ ಹಾಗೂ ಸಂಗೀತ ನಿರ್ದೇಶಕ ನವೀನ್ ಸಜ್ಜು ಇವರಿಂದ ಚಲನಚಿತ್ರಗೀತೆಗಳ ಆಧಾರಿತ ಹಾಡುಗಳ ಗಾಯನ ಹಾಗೂ ಜಾನಪದ ಗೀತೆ, ಮಾದೇಶ್ವರನ ಗೀತೆ, ಚೆಲ್ಲಿದರೂ ಮಲ್ಲಿಗೆಯೋ ಸೇರಿದಂತೆ ಅನೇಕ ಚಲನಚಿತ್ರಗೀತೆಗಳ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಮೇ 15 ರಂದು ಸಂಜೆ ಮೈಸೂರಿನ ರಘುಲೀಲಾ ಸಂಗೀತ ಶಾಲೆಯ ಸುನೀತ ಚಂದ್ರಕುಮಾರ್ ಇವರ ತಂಡದಿಂದ ಭಾವಗೀತೆಗಳ ಗಾಯನ, ನೃತ್ಯ ಕಾರ್ಯಕ್ರಮ ಮತ್ತು ಹಂಸಲೇಖ ತಂಡದವರಿಂದ ಚಲನಚಿತ್ರಗೀತೆಗಳ ಗಾಯನ ಕಾರ್ಯಕ್ರಮ ಹಾಗೂ ಝೀ ಕನ್ನಡ ವಾಹಿನಿಯ ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್ ಗೋಲ್ಡಾ ತಂಡದವರಿಂದ ಆಕರ್ಷಕ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಆಕರ್ಷಿತವಾದ ಲೇಸರ್ ಶೋ; ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಕರ್ನಾಟಕದ ಇತಿಹಾಸ, ಸಾಹಿತ್ಯ, ಅಭಿವೃದ್ಧಿ ಕುರಿತ ಸುವರ್ಣ ಕರ್ನಾಟಕ, ಗೋವಿನ ಹಾಡು, ಬಾರಿಸುವ ಕನ್ನಡ ಡಿಂಡಿಮವಾ ಕುರಿತು ಲೇಸರ್ ಶೋ ಜನರ ಮೆಚ್ಚುಗೆಗೆ ಪಾತ್ರವಾಯಿತು.

ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಹೆಚ್.ಆಂಜನೇಯವರು ಮೂರು ದಿನಗಳು ಸಹ ಸಂಜೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಖುದ್ದು ವೀಕ್ಷಣೆ ಮಾಡಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಲಾವಿದರಿಗೆ ಸನ್ಮಾನಿಸಿ ಪ್ರೋತ್ಸಾಹಿಸಿದರು.

ಇವರೊಂದಿಗೆ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಸೌಭಾಗ್ಯ ಬಸವರಾಜನ್, ಜಿಲ್ಲಾಧಿಕಾರಿ ಎಂ.ಕೆ.ಶ್ರೀರಂಗಯ್ಯ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನಿತೇಶ್ ಪಾಟೀಲ್, ಅಪರ ಜಿಲ್ಲಾಧಿಕಾರಿ ರವೀಂದ್ರ ಹಾಗೂ ಅನೇಕ ಚುನಾಯಿತ ಪ್ರತಿನಿಧಿಗಳು, ಮುಖಂಡರು ಭಾಗವಹಿಸಿದ್ದರು.

ಕಾರ್ಯಕ್ರಮಗಳಲ್ಲಿ ಸಾವಿರಾರು ಜನರು ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಸವಿದಿದ್ದು ವಿಶೇಷವಾಗಿತ್ತು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಧನಂಜಯ ಇವರು ಮಾಹಿತಿ ಉತ್ಸವ ಹಾಗೂ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮ ನಿರ್ವಹಣೆ ಮಾಡಿದರು.



ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಹಸಿವು ಮುಕ್ತ ಕರ್ನಾಟಕಕ್ಕೆ ಅನ್ನಭಾಗ್ಯ, ಓದುವ ಕನಸಿಗೆ ನೆರವು ವಿದ್ಯಾಸಿರಿ, ಆರೋಗ್ಯವಂತ ಮಕ್ಕಳಿಗಾಗಿ ಕ್ಷೀರಭಾಗ್ಯ, ಹೈನುಗಾರಿಕೆಗೆ ಪ್ರೋತ್ಸಾಹಿಸಲು ಕ್ಷೀರಧಾರೆ, ರೈತ ಸಮುದಾಯದ ಏಳಿಗೆಗೆ ಕೃಷಿಭಾಗ್ಯ, ಶುದ್ಧ ನೀರು ಆರೋಗ್ಯಕರ ಜೀವಜಲ, ಪಶುಭಾಗ್ಯ, ವಸತಿಭಾಗ್ಯ, ಮೈತ್ರಿ ಮನಸ್ವಿನಿ, ನಿರ್ಮಲ ಭಾಗ್ಯ ನೀಡುವ ಮೂಲಕ ಮನೆಗೊಂದು ಶೌಚಾಲಯ ನಿರ್ಮಾಣ ಮಾಡುವ ಮೂಲಕ ಬಹಿರ್ದೆಸೆ ಮುಕ್ತ ರಾಜ್ಯವನ್ನಾಗಿ ಮಾಡುವ ನಿಟ್ಟಿನಲ್ಲಿ ದಾಪುಗಾಲಿಟ್ಟಿದೆ.

ಇದಲ್ಲದೆ ಪೋಡಿಮುಕ್ತ ಗ್ರಾಮಗಳು, ಅರಣ್ಯ ಹಕ್ಕುಕಾಯಿದೆಯಡಿ ಹಕ್ಕುಪತ್ರ, ಬಗರ್‌ಹುಕ್ಕುಂ ಸಾಗುವಳಿ ಪತ್ರಗಳ ಮಂಜೂರಾತಿ, ಅಕ್ರಮ–ಸಕ್ರಮದಡಿ ನಿವೇಶನಗಳ ಮಂಜೂರಾತಿ ಸೇರಿದಂತೆ ಅನೇಕ ಜನಪರವಾದ ಯೋಜನೆಗಳನ್ನು ಜನರಿಗಾಗಿ ನೀಡಲಾಗಿದೆ. ಇಂತಹ ಹಲವು ಯೋಜನೆಗಳನ್ನು ಜನರಿಗೆ ತಿಳಿಸಿಕೊಡುವುದು ಜನಮನನ ಮತ್ತು ಜನರು ಸಹ ಸರ್ಕಾರದೊಂದಿಗೆ ಸಹಕಾರ ನೀಡಿದ್ದಕ್ಕಾಗಿ ಅಭಿನಂದನೆಗಳನ್ನು ತಿಳಿಸುವ ಉದ್ದೇಶದಿಂದ ಜನನಮನ ಕಾರ್ಯಕ್ರಮದ ಜೊತೆಗೆ ವಿವಿಧ ಇಲಾಖೆಗಳಿಂದ ನೀಡಲಾಗುವ ಸವಲತ್ತುಗಳನ್ನು ಜನರಿಗೆ ವಿತರಣೆ ಮಾಡುವುದೇ ಸೌಲಭ್ಯಗಳ ವಿತರಣೆಯೇ ಸಂಭ್ರಮ ಎನ್ನುವ ಕಲ್ಪನೆಯೊಂದಿಗೆ ಕಾರ್ಯಕ್ರಮ ಆಯೋಜಿಸುವ ಮೂಲಕ ರಾಜ್ಯದಲ್ಲಿ ಹಿಂದೆಂದು ಕಂಡರಿಯದ ಭೀಕರ ಬರಗಾಲದ ಈ ಸಂದರ್ಭದಲ್ಲಿ ಸಾವಿರಾರು ಜನರಿಗೆ ಸವಲತ್ತುಗಳನ್ನು ವಿತರಣೆ ಮಾಡುವ ಮೂಲಕ ಅವರಲ್ಲಿ ಆತ್ಮಸ್ಥೈರ್ಯ ಮೂಡಿಸುವುದು ಜನಮನನ–ಜನನಮನ ಸೌಲಭ್ಯ ವಿತರಣೆಯೇ ಸಂಭ್ರಮದ ಉದ್ದೇಶವಾಗಿತ್ತು.






ಬೆಂಗಳೂರು ವಿಭಾಗ ಮಟ್ಟದ 9 ಜಿಲ್ಲೆಗಳಿಂದ ಚಿತ್ರದುರ್ಗದಲ್ಲಿ ನಾಲ್ಕು ವರ್ಷದ ಪೂರೈಸಿದ ಹಿನ್ನೆಲೆಯಲ್ಲಿ ಸವಲತ್ತು ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಫಲಾನುಭವಿಗಳು ಭಾಗವಹಿಸಿದ್ದರು.

ಒಂಬತ್ತು ಜಿಲ್ಲೆಗಳಿಂದ ಮುವತ್ತು ಸಾವಿರಕ್ಕೂ ಹೆಚ್ಚು ಫಲಾನುಭವಿಗಳು ಹಾಗೂ ಇಪ್ಪತ್ತು ಸಾವಿರಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿದ್ದರು. ಪ್ರತಿ ಜಿಲ್ಲೆಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಿ ಕರೆತಂದು ಸವಲತ್ತು ವಿತರಣೆ ಮಾಡಲು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿ, ಜಿ.ಪಂ.ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಜವಾಬ್ದಾರಿ ವಹಿಸಲಾಗಿತ್ತು.

ಸಮಾವೇಶದಲ್ಲಿ ಕಂದಾಯ ಇಲಾಖೆಯಿಂದ ಬಗರ್‌ಹುಕ್ಕುಂ ಸಾಗುವಳಿ ಚೀಟಿ, ಮೈತ್ರಿ, ಮನಸ್ವಿನಿ, ಅರಣ್ಯ ಇಲಾಖೆಯಿಂದ ಅರಣ್ಯ ಹಕ್ಕು ಕಾಯ್ದೆಯಡಿ ಹಕ್ಕುಪತ್ರ, ಕುರಿ ಉಣ್ಣೆ ಅಭಿವೃದ್ಧಿ ನಿಗಮದಿಂದ ಸಹಾಯಧನದ ಚೆಕ್, ತೋಟಗಾರಿಕೆ ಇಲಾಖೆಯಿಂದ ಸಮುದಾಯ ಕೃಷಿ ಹೊಂಡ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಶಾದಿ ಭಾಗ್ಯ, ಡಾ; ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಭೂ ಒಡೆತನದ ಮಂಜೂರಾತಿ ಪತ್ರ, ವಾಹನಗಳ ಕೀ, ಆತ್ಮಹತ್ಯೆ ಮಾಡಿಕೊಂಡ ರೈತರಿಗೆ 5 ಲಕ್ಷದ ಚೆಕ್, ಅಕ್ರಮ–ಸಕ್ರಮದಡಿ ನಿವೇಶನ ಹಕ್ಕುಪತ್ರ, ಅಂಗವಿಕಲರ ತ್ರಿಚಕ್ರವಾಹನ, ಪಶುಭಾಗ್ಯ, ತೋಟಗಾರಿಕೆ ಇಲಾಖೆ ಸಹಾಯಧನ, ಕಾರ್ಮಿಕ ಇಲಾಖೆಯಿಂದ ಮದುವೆ ಸಹಾಯಧನ, ಮಿನಿ ಗಾರ್ಮೆಂಟ್ಸ್, ಪಶುಸಂಗೋಪನಾ ಇಲಾಖೆಯಿಂದ ಕುರಿ ಘಟಕ, ವಿದೇಶಿ ಶೈಕ್ಷಣಿಕ ಸಾಲ, ಅಂತರ್ಜಾತಿ ವಿವಾಹ ಪ್ರೋತ್ಸಾಹಧನ ಸೇರಿದಂತೆ ಅನೇಕ ಯೋಜನೆಗಳಡಿ ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಣೆ ಮಾಡಲಾಯಿತು.

ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ 695.22 ಕೋಟಿ ಮೌಲ್ಯಗಳ ವಿವಿಧ ಕಾಮಗಾರಿಗಳ ಉದ್ಘಾಟನೆ ಮತ್ತು 94.30 ಕೋಟಿ ಮೌಲ್ಯದ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಯಿತು.



ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

# ನಾಲ್ಕು ವರ್ಷ ನಾನಾ ಹರ್ಷ



## ಮಾತೃಪೂರ್ಣ

ಪೌಷ್ಠಿಕಾಂಶ ಕೊರತೆಯನ್ನು ನಿವಾರಿಸಲು ರಾಜ್ಯದ ಎಲ್ಲಾ 30 ಜಿಲ್ಲೆಗಳಿಗೂ "ಮಾತೃ ಪೂರ್ಣ" ಯೋಜನೆಯನ್ನು ವಿಸ್ತರಿಸಲು ಉದ್ದೇಶಿಸಲಾಗಿದ್ದು, ಜುಲೈ ತಿಂಗಳಿನಿಂದ ಗರ್ಭಿಣಿ ಮತ್ತು ಬಾಣಂತಿಯರಿಗೆ ಸಿದ್ಧಪಡಿಸಿದ ಬಿಸಿಯೂಟವನ್ನು ಒದಗಿಸಲಾಗುವುದು.

ಎಲ್ಲಾ ಅಂಗನವಾಡಿಯ ಮಕ್ಕಳಿಗೆ ಮುಂದಿನ ಜೂನ್ ತಿಂಗಳಿನಿಂದ ವಾರದಲ್ಲಿ ಎರಡು ದಿನ ಮೊಟ್ಟೆ ನೀಡಲಾಗುವುದು. ಕ್ಷೀರ ಭಾಗ್ಯ ಯೋಜನೆಯಡಿ ಪ್ರಸ್ತುತ 3 ದಿನಗಳು ವಿತರಿಸುತ್ತಿರುವ ಹಾಲನ್ನು ಜುಲೈ ತಿಂಗಳಿನಿಂದ 5 ದಿನಗಳಿಗೆ ಹೆಚ್ಚಿಸಿ ವಿತರಿಸಲಾಗುವುದು.

2013–14ನೇ ಸಾಲಿನಿಂದ 2016–17ನೇ ಸಾಲಿನವರೆಗೆ ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕರಿಗೆ ನೀಡುವ ಗೌರವಧನವನ್ನು ಅನುಕ್ರಮವಾಗಿ ರೂ.1,500/–ಗಳು ಮತ್ತು ರೂ.750/–ಗಳಷ್ಟು ಹೆಚ್ಚಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಈ ಮೊತ್ತವನ್ನು ಅನುಕ್ರಮವಾಗಿ ರೂ.1,000/– ಹಾಗೂ ರೂ. 500/–ಗಳಷ್ಟು ಹೆಚ್ಚಿಸಲಾಗುವುದು. ಇದಕ್ಕಾಗಿ ಆಯವ್ಯಯದಲ್ಲಿ ರೂ.115 ಕೋಟಿಗಳನ್ನು ಒದಗಿಸಲಾಗಿದೆ.

ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ರಕ್ಷಣೆ ಒದಗಿಸಲು ಕರ್ನಾಟಕ ಸರ್ಕಾರದಿಂದ ಅಪಘಾತ ವಿಮೆ ಯೋಜನೆಯನ್ನು ಸಹ ಜಾರಿಗೊಳಿಸಲಾಗುವುದು.

ಅತ್ಯಾಚಾರ ಮತ್ತು ವಿವಿಧ ದೌರ್ಜನ್ಯಗಳಿಗೊಳಗಾದ ಮಹಿಳೆಯರು ಮತ್ತು ಮಕ್ಕಳಿಗೆ ವಿಶೇಷ ಚಿಕಿತ್ಸೆ ನೀಡಲು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಸ್ಥಾಪಿಸಲಾದ ವಿಶೇಷ ಚಿಕಿತ್ಸಾ ಘಟಕದ ರೀತಿಯಲ್ಲಿ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ತಾಲ್ಲೂಕು ಆಸ್ಪತ್ರೆಗಳಲ್ಲಿ ಮುಂದಿನ 2 ವರ್ಷಗಳಲ್ಲಿ 145 ವಿಶೇಷ ಚಿಕಿತ್ಸಾ ಘಟಕಗಳನ್ನು ಸ್ಥಾಪಿಸಲಾಗುವುದು.

ಹೆಚ್.ಐ.ವಿ. ಸೋಂಕಿತ ಹಾಗೂ ಬಾಧಿತರಾದವರಿಗೆ ಪಾಲನೆ ಯೋಜನೆಯಡಿ 25000 ಮಕ್ಕಳಿಗೆ ನೀಡಲಾಗುವ ಧನ ಸಹಾಯವನ್ನು ಮಾಸಿಕ ರೂ.800/–ಗಳಿಂದ ರೂ.1,000/–ಗಳಿಗೆ ಹೆಚ್ಚಿಸಲಾಗುವುದು.

ಮಕ್ಕಳ ವಿಶೇಷ ನ್ಯಾಯಾಲಯವನ್ನು ಬಾಲ ಸ್ನೇಹಿಯಾಗಿಸಲು ಹಾಗೂ ಬೆಂಗಳೂರು ನಗರ ಜಿಲ್ಲೆಯಲ್ಲಿ ನ್ಯಾಯಾಲಯ ನಿರ್ಮಿಸಲು ರೂ.4 ಕೋಟಿಗಳನ್ನು ಒದಗಿಸಲಾಗುವುದು.

ಬಾಲ ಸ್ನೇಹಿ ಕೇಂದ್ರಗಳ ಯೋಜನೆ ಅಡಿ 10000 ಅಂಗನವಾಡಿ ಕೇಂದ್ರಗಳನ್ನು ಶಿಶು ಸ್ನೇಹಿ ಕೇಂದ್ರಗಳನ್ನಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ.

ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ ಭರಿಸುವ ಯೋಜನೆಯಡಿ ಪ್ರತಿ ಮಗುವಿಗೆ ನೀಡಲಾಗುತ್ತಿದ್ದ ಘಟಕ ವೆಚ್ಚವನ್ನು ರೂ.750/–ಗಳಿಗೆ ಬದಲಾಗಿ ರೂ.2,000/– ಗಳಿಗೆ ಹೆಚ್ಚಿಸಲಾಗಿದೆ.

ಸ್ತ್ರೀಶಕ್ತಿ ಸಮೃದ್ಧಿ ಯೋಜನೆಯಡಿಯಲ್ಲಿ, ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾ ಸ್ತ್ರೀಶಕ್ತಿ ಒಕ್ಕೂಟಗಳನ್ನು ರಚಿಸಿ, ನೊಂದಾಯಿಸಲಾಗಿದೆ. ಈ ಕುರಿತು, ಪ್ರತಿ ಜಿಲ್ಲೆಗೆ ರೂ.1.00 ಲಕ್ಷದಂತೆ 30 ಜಿಲ್ಲೆಗಳಿಗೆ ರೂ.30.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ನಿರ್ಗತಿಕ ಮಕ್ಕಳ ಕುಟೀರದಲ್ಲಿನ ಮಕ್ಕಳಿಗಾಗಿ ಮಾಹೆಯಾನ ನೀಡುತ್ತಿದ್ದ ಪ್ರತಿ ಮಗುವಿನ ನಿರ್ವಹಣಾ ವೆಚ್ಚವನ್ನು ಪರಿಷ್ಕೃತ ಮಾರ್ಗಸೂಚಿಯನ್ನೊಳಗೊಂಡಂತೆ ರೂ.400/–ರಿಂದ ರೂ. 1,000/–ಕ್ಕೆ ಹೆಚ್ಚಿಸಲಾಗಿದೆ.

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ಮಾದರಿಯಲ್ಲಿ ಜಿಲ್ಲಾ ಮಹಿಳಾ ಕಲ್ಯಾಣ ಸಮಿತಿಯನ್ನು ರಚಿಸುವ ಕಾರ್ಯ ಪ್ರಗತಿಯಲ್ಲಿದೆ.

ಸ್ತ್ರೀಶಕ್ತಿ ಕೌಶಲ್ಯ ಯೋಜನೆಯಡಿಯಲ್ಲಿ, ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮದಿಂದ ಸ್ತ್ರೀಶಕ್ತಿ ಗುಂಪುಗಳ ಸದಸ್ಯರಿಗೆ ವಿವಿಧ ರೀತಿಯ ತರಬೇತಿ ನೀಡಲು ರೂ.250.00 ಲಕ್ಷಗಳನ್ನು ಕೌಶಲ್ಯ ಅಭಿವೃದ್ಧಿ ನಿಗಮಕ್ಕೆ ನೀಡಲಾಗಿದೆ.

**ಸ್ತ್ರೀಶಕ್ತಿ ಯೋಜನೆ :** ಸ್ತ್ರೀಶಕ್ತಿ ಗುಂಪಿನ ಸದಸ್ಯರು ಆದಾಯೋತ್ಪನ್ನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಹಾಗೂ ಮಹಿಳೆಯರನ್ನು ಔದ್ಯಮಿಕವಾಗಿ ಸನ್ನದ್ದುಗೊಳಿಸಲು ಸುತ್ತುನಿಧಿಯನ್ನು ರೂ.5,000/–ರಿಂದ ರೂ.25,000/–ಗಳಿಗೆ ಹೆಚ್ಚಿಸಲಾಗಿದೆ. 2014–15ನೇ ಸಾಲಿನಿಂದ ಪ್ರತಿ ಸಾಲಿನಲ್ಲಿ ರೂ.5000/–ಗಳಂತೆ ಅರ್ಹ ಗುಂಪುಗಳಿಗೆ ಹೆಚ್ಚುವರಿ ಸುತ್ತು ನಿಧಿಯನ್ನು ಹಂತಹಂತವಾಗಿ 4 ವರ್ಷಗಳವರೆಗೆ ವಿತರಿಸಲಾಗುತ್ತಿದೆ. 2016–17ನೇ ಸಾಲಿನಲ್ಲಿ 117654 ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ ರೂ. 5875.20 ಲಕ್ಷ ಹೆಚ್ಚುವರಿ ಸುತ್ತುನಿಧಿಯನ್ನು ನೀಡಲಾಗಿದೆ.

**ಸ್ತ್ರೀಶಕ್ತಿ ಕೌಶಲ್ಯ ಯೋಜನೆ :** ಸ್ತ್ರೀಶಕ್ತಿ ಕೌಶಲ್ಯ ಯೋಜನೆಯನ್ನು 2016–17ನೇ ಸಾಲಿನಲ್ಲಿ ಜಾರಿಗೊಳಿಸಲಾಗಿದೆ. ಸ್ತ್ರೀಶಕ್ತಿ ಗುಂಪಿನ ಮಹಿಳೆಯರಿಗೆ ಕರ್ನಾಟಕ ರಾಜ್ಯ ಉದ್ಯೋಗ ಮತ್ತು ತರಬೇತಿ ಇಲಾಖೆಯ ಮೂಲಕ ತರಬೇತಿ ನೀಡಿ ಸ್ತ್ರೀಶಕ್ತಿ ಗುಂಪಿನ ಮಹಿಳೆಯರನ್ನು ಸ್ವತಂತ್ರ ಉದ್ಯೋಗಿಗಳನ್ನಾಗಿ ರೂಪಿಸಲು ಸ್ತ್ರೀಶಕ್ತಿ ಕೌಶಲ್ಯ ಯೋಜನೆಯನ್ನು ಜಾರಿಗೆ ತರಲಾಗಿದೆ.

**ಸ್ತ್ರೀ ಶಕ್ತಿ ಸಮೃದ್ಧಿ ಯೋಜನೆ :** ಮಹಿಳೆಯರ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಬಲೀಕರಣ

**ಸ್ತ್ರೀಶಕ್ತಿ ಸಮೃದ್ಧಿ ಯೋಜನೆಯ ಉದ್ಘಾಟನಾ ಸಮಾರಂಭ :** ಸ್ತ್ರೀಶಕ್ತಿ ಜಿಲ್ಲಾ ಒಕ್ಕೂಟವನ್ನು 30 ಜಿಲ್ಲೆಗಳಲ್ಲಿ ನೋಂದಣಿ ಮಾಡಿಸಿ ಕಳೆದ ಡಿಸೆಂಬರ್ ತಿಂಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಬಾಗಲಕೋಟೆ ಇವರ ಸಹಯೋಗದೊಂದಿಗೆ ಹೊಸ ಯೋಜನೆಯಾದ "ಸ್ತ್ರೀಶಕ್ತಿ ಸಮೃದ್ಧಿ ಯೋಜನೆ"ಯನ್ನು ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ಉದ್ಘಾಟಿಸಿದರು. ಸನ್ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀಮತಿ ಉಮಾಶ್ರೀ ರವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.





ಬೆಂಗಳೂರು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಇಲ್ಲಿ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮೇಲ್ವಿಚಾರಕಿಯರಿಗೆ, ಚುನಾಯಿತ ಸದಸ್ಯರಿಗೆ, ತಾಲ್ಲೂಕು ಒಕ್ಕೂಟದ ಹಾಗೂ ಸ್ತ್ರೀಶಕ್ತಿ ಗುಂಪಿನ ಸದಸ್ಯರಿಗೆ, ಪೌಢಶಲಾ ಶಿಕ್ಷಕರಿಗೆ, ಆಶಾ ಕಾರ್ಯಕರ್ತೆಯರಿಗೆ, ಆರೋಗ್ಯ ಸಹಾಯಕರಿಗೆ ಉಪಗ್ರಹ ಆಧಾರಿತ ತರಬೇತಿ.

ಉದ್ದೇಶದೊಂದಿಗೆ ಸ್ತ್ರೀಶಕ್ತಿ ಸಮೃದ್ಧಿ ಯೋಜನೆಯನ್ನು 2016–17ನೇ ಸಾಲಿನಲ್ಲಿ ಜಾರಿಗೊಳಿಸಿದೆ. ಸ್ತ್ರೀಶಕ್ತಿ ಗುಂಪುಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕೆಂಬುದು ಈ ಯೋಜನೆಯ ಉದ್ದೇಶ. 2016–17ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ 2838 ಮತ್ತು ಪರಿಶಿಷ್ಟ ಪಂಗಡದ 1162 ಒಟ್ಟು 4000 ಹೊಸ ಸ್ತ್ರೀಶಕ್ತಿ ಗುಂಪುಗಳನ್ನು ರಚಿಸಲಾಗಿದೆ.

**ಸ್ತ್ರೀಶಕ್ತಿ ಗುಂಪಿನ ಮಹಿಳೆಯರು ಹಾಗೂ ಮಹಿಳಾ ಉದ್ಯಮಿಗಳು ಉತ್ಪಾದಿಸುವ ವಸ್ತುಗಳ ರಾಜ್ಯಮಟ್ಟದ ಪ್ರದರ್ಶನ ಮತ್ತು ಮಾರಾಟ ಮೇಳ :** ಕಳೆದ ಅಕ್ಟೋಬರ್ ಮಾಹೆಯಲ್ಲಿ ಬೆಂಗಳೂರು ವಿಭಾಗೀಯ ಮಟ್ಟದ ತರಬೇತಿ ಕೇಂದ್ರ ಮಡಿವಾಳದಲ್ಲಿ ಸ್ತ್ರೀಶಕ್ತಿ ಮಹಿಳೆಯರು ಹಾಗೂ ಮಹಿಳಾ ಉದ್ಯಮಿಗಳು ಉತ್ಪಾದಿಸುವ ವಸ್ತುಗಳ ರಾಜ್ಯಮಟ್ಟದ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಏರ್ಪಡಿಸಲಾಗಿತ್ತು. ಈ ಮೇಳದಲ್ಲಿ ಸುಮಾರು 75 ಮಳಿಗೆಗಳಲ್ಲಿ ವಿಶೇಷ ವಸ್ತುಪ್ರದರ್ಶನ ಮತ್ತು ಮಾರಾಟಕ್ಕಾಗಿ ಅವಕಾಶ ಮಾಡಿಕೊಡಲಾಗಿತ್ತು.

### ತಾಲ್ಲೂಕು/ಜಿಲ್ಲಾ ಒಕ್ಕೂಟದ ಪದಾಧಿಕಾರಿಗಳಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಬೆಂಗಳೂರಿನ ಮಡಿವಾಳದಲ್ಲಿರುವ ವಿಭಾಗೀಯ ಮಟ್ಟದ ತರಬೇತಿ ಕೇಂದ್ರ, ಇಲ್ಲಿ ರಾಜ್ಯದ ಎಲ್ಲಾ ಸ್ತ್ರೀಶಕ್ತಿ ತಾಲ್ಲೂಕು/ಜಿಲ್ಲಾ ಒಕ್ಕೂಟದ ಪದಾಧಿಕಾರಿಗಳಿಗೆ ಆಧುನಿಕ ತಂತ್ರಜ್ಞಾನವನ್ನು ವೃದ್ಧಿಸಿಕೊಂಡು, ತಮ್ಮ ಕೌಶಲ್ಯವನ್ನು ಹೆಚ್ಚಿಸಿಕೊಳ್ಳಲು ತರಬೇತಿ ನೀಡಲಾಗಿದೆ.

ರಾಜ್ಯ ಮಹಿಳೆಯರ ಸಬಲೀಕರಣ ಕಾರ್ಯನೀತಿ–2016–17 : 2016–17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿದಂತೆ "ರಾಜ್ಯ ಮಹಿಳಾ ಸಬಲೀಕರಣ ಕಾರ್ಯನೀತಿಯನ್ನು" ರೂಪಿಸಲು ಶ್ರೀಮತಿ ಶಕುಂತಲಾ ಟಿ.ಶೆಟ್ಟಿ, ಇಲಾಖಾ ಸಚಿವರ ಸಂಸದೀಯ ಕಾರ್ಯದರ್ಶಿಗಳು, ಇವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಸಮಿತಿ ತಜ್ಞರುಗಳ ಸರಣಿ ಸಭೆಗಳನ್ನು ನಡೆಸಿ, ರಾಷ್ಟ್ರೀಯ ಮಹಿಳಾ ಸಬಲೀಕರಣ ಕರಡು ನೀತಿ ಹಾಗೂ 2014ರಲ್ಲಿ ರಾಜ್ಯ ಸರ್ಕಾರದಿಂದ ರಚಿಸಲ್ಪಟ್ಟ ಕರಡು ನೀತಿಯ ಬಗ್ಗೆ ವಿಶ್ಲೇಷಿಸಿ ಹೊಸದಾಗಿ ರಾಜ್ಯ ಮಹಿಳಾ ಸಬಲೀಕರಣ ಕಾರ್ಯನೀತಿಯ ಕರಡು 2016–17ರಲ್ಲಿ ರಚಿಸಲಾಗಿದೆ. ತಜ್ಞರ ಸಮಿತಿಯು ರಚಿಸಿರುವ ಈ ಕಾರ್ಯನೀತಿಯ ವಿವರಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಸಾರ್ವಜನಿಕರ ಅಭಿಪ್ರಾಯಕ್ಕಾಗಿ ಪ್ರಚಾರ ಪಡಿಸಲಾಗಿದೆ.

ಎಲ್ಲಾ ಜಿಲ್ಲೆಗಳಲ್ಲಿ ಕರಡು ನೀತಿಯ ಬಗ್ಗೆ ಸಭೆ ನಡೆಸಿ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ. ಹಾಗೂ ಕರಡಿನ ಬಗ್ಗೆ ವಿಷಯ ತಜ್ಞರು ಹಾಗೂ ಪರಿಣಿತರ ಅಭಿಪ್ರಾಯ ಸಂಗ್ರಹಿಸಲು 4 ವಿಭಾಗೀಯ ಮಟ್ಟದ ಕಾರ್ಯಾಗಾರಗಳನ್ನು ಜನವರಿ, ಫೆಬ್ರವರಿ 2017ರಲ್ಲಿ ಏರ್ಪಡಿಸಿ, ಅಭಿಪ್ರಾಯಗಳನ್ನು ಎಲ್ಲಾ ವಲಯಗಳಿಂದ ಪಡೆದು ಕರಡಿನಲ್ಲಿ ಸೇರ್ಪಡೆಗೊಳಿಸಲಾಗಿದೆ.



### ಸ್ಥೈರ್ಯನಿಧಿ

ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ಆರ್ಥಿಕ ಪರಿಹಾರ ನೀಡಲು ರಾಜ್ಯ ಮಟ್ಟದಲ್ಲಿ ರೂ.5.00 ಕೋಟಿಗಳ ಸ್ಥೈರ್ಯನಿಧಿಯನ್ನು 2015–16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸರ್ಕಾರ ಘೋಷಿಸಿದಂತೆ ಈ ಯೋಜನೆಯಡಿ ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ತುರ್ತು ಚಿಕಿತ್ಸೆಗಾಗಿ ಅರ್ಜಿ ಸ್ವೀಕರಿಸಿದ 24 ಗಂಟೆಗಳ ಒಳಗಾಗಿ ಪರಿಹಾರವಾಗಿ ರೂ.25,000/–ಗಳವರೆಗೆ ನೀಡಲು ಅವಕಾಶ ಕಲ್ಪಿಸಲಾಗಿದೆ.

ಅತ್ಯಾಚಾರ ಹಾಗೂ ತೀವ್ರತರ ಅತ್ಯಾಚಾರ ದೌರ್ಜನ್ಯಕ್ಕೊಳಪಟ್ಟ ಮಹಿಳೆಯರಿಗೆ ಗರಿಷ್ಠ ರೂ.2.00 ಲಕ್ಷ ಮಿತಿಗೆ ಒಳಪಟ್ಟು ಸಹಾಯ ಒದಗಿಸಲು ಅವಕಾಶವಿರುತ್ತದೆ. ಅತ್ಯಾಚಾರ ಹಾಗೂ ಆಸಿಡ್ ದಾಳಿಗೆ ಒಳಗಾದ ಮಹಿಳೆ ಮೃತಪಟ್ಟ ಸಂದರ್ಭದಲ್ಲಿ ಅವರ ಕುಟುಂಬದವರಿಗೆ ರೂ.1.00 ಲಕ್ಷ ಪರಿಹಾರ ನೀಡಲು ಅವಕಾಶ ಕಲ್ಪಿಸಲಾಗಿದೆ.

ಮೊದಲನೇ ಹಂತದಲ್ಲಿ ಎಲ್ಲಾ ಜಿಲ್ಲಾ ಮಟ್ಟದಲ್ಲಿ ರೂ.5.00 ಲಕ್ಷ ವೆಚ್ಚದಲ್ಲಿ ಜಿಲ್ಲಾ ಉಪನಿರ್ದೇಶಕರು ಮತ್ತು ಜಿಲ್ಲಾಧಿಕಾರಿಗಳ ಹೆಸರಿನಲ್ಲಿ ಜಂಟಿ ಖಾತೆ ಪ್ರಾರಂಭಿಸುವ ಮೂಲಕ ರೂ.150.00 ಲಕ್ಷಗಳಲ್ಲಿ ಸ್ಥೈರ್ಯನಿಧಿಯನ್ನು ಸ್ಥಾಪಿಸಲಾಗಿದೆ.

### ಮಹಿಳಾ ವಿಶೇಷ 'ಚಿಕಿತ್ಸಾ' ಘಟಕ

ದೌರ್ಜನ್ಯಕ್ಕೊಳಗಾದ ಮಹಿಳೆಯರು ಮತ್ತು ಮಕ್ಕಳಿಗೆ ವೈದ್ಯಕೀಯ ಚಿಕಿತ್ಸೆ, ಸಮಾಲೋಚನೆ, ಪೊಲೀಸ್ ನೆರವು, ಕಾನೂನು ನೆರವನ್ನು ಒಂದೇ ಸೂರಿನಡಿ ಒದಗಿಸಲು 33 ಮಹಿಳಾ ವಿಶೇಷ ಚಿಕಿತ್ಸೆ ಘಟಕಗಳನ್ನು ರಾಜಾದ್ಯಂತ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರಾರಂಭಿಸಲಾಗಿದೆ.

ಈ ಘಟಕಗಳು ದಿನದ 24*7 ಗಂಟೆಗಳು ಕಾರ್ಯನಿರ್ವಹಿಸುತ್ತಿದೆ. ಉಚಿತ ಸಹಾಯವಾಣಿ 181 ಸೌಲಭ್ಯವನ್ನು ಒದಗಿಸಲಾಗಿದ್ದು, ಪ್ರಕರಣ ಅಗತ್ಯತೆಗನುಗುಣವಾಗಿ ಸಹಾಯವನ್ನು ಒದಗಿಸಲಾಗುತ್ತದೆ. 2016–17ನೇ ಸಾಲಿನಲ್ಲಿ 2305 ಪ್ರಕರಣಗಳಿಗೆ ಸೌಲಭ್ಯ ಒದಗಿಸಲಾಗಿದೆ.

### ಸಮಗ್ರ ಶಿಶು ಅಭಿವೃದ್ಧಿ ಯೋಜನೆ

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ರಾಜ್ಯದಲ್ಲಿ ಒಟ್ಟು 62580 ಅಂಗನವಾಡಿ ಕೇಂದ್ರಗಳು ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಸುಮಾರು 55.31 ಲಕ್ಷ ಫಲಾನುಭವಿಗಳು ಈ ಯೋಜನೆಯ ಪ್ರಯೋಜನ ಪಡೆದುಕೊಂಡಿರುತ್ತಾರೆ.

ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆ/ ಸಹಾಯಕಿಯರ ಗೌರವಧನವನ್ನು 2012–13 ರಿಂದ ಸತತವಾಗಿ 3 ವರ್ಷಗಳ ಅವಧಿಯಲ್ಲಿ 3 ಬಾರಿಗೆ ಅಂಗನವಾಡಿ ಕಾರ್ಯಕರ್ತೆಯರಿಗೆ ಪ್ರತೀ ವರ್ಷ ರೂ.500/– ಹಾಗೂ ಸಹಾಯಕಿಯರಿಗೆ ರೂ. 250/–ಗಳನ್ನು ಹೆಚ್ಚು ಮಾಡಲಾಗಿರುತ್ತದೆ. 2017–18ನೇ ಸಾಲಿನಿಂದ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ. 1000/– ಮತ್ತು ಅಂಗನವಾಡಿ ಸಹಾಯಕಿಯರಿಗೆ ರೂ.500/– ಗಳನ್ನು ಹೆಚ್ಚಿಸಲಾಗಿರುತ್ತದೆ. ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ರೂ. 1,000/– ಮತ್ತು ಅಂಗನವಾಡಿ ಸಹಾಯಕಿಯರಿಗೆ ರೂ. 500/–ಗಳನ್ನು ಅಧಿಕವಾಗಿ ಹೆಚ್ಚಿಸಲು ತೀರ್ಮಾನಿಸಲಾಗಿದೆ.

ಭಾರತ ಸರ್ಕಾರದಿಂದ 1393 ಹೊಸ ಅಂಗನವಾಡಿ ಕೇಂದ್ರಗಳು ಮಂಜೂರಾಗಿರುತ್ತವೆ. ಮಂಜೂರಾಗಿರುವ ಎಲ್ಲಾ ಅಂಗನವಾಡಿ ಕೇಂದ್ರಗಳು ಫಲಾನುಭವಿಗಳಿಗೆ ಐಸಿಡಿಎಸ್ ಸೇವೆಗಳನ್ನು ಸಮರ್ಪಕವಾಗಿ ನೀಡಲಾಗುತ್ತಿದೆ.

2016–17ನೇ ಸಾಲಿನಲ್ಲಿ ಮರಣ ಪರಿಹಾರ ಯೋಜನೆಯಡಿ 157 ಅಂಗನವಾಡಿ ಕಾರ್ಯಕರ್ತೆಯರು ಹಾಗೂ 225 ಸಹಾಯಕಿಯರ ಕುಟುಂಬದವರಿಗೆ ಪರಿಹಾರ ರೂ.94.49 ಲಕ್ಷಗಳ ಧನವನ್ನು ಮಂಜೂರು ಮಾಡಲಾಗಿದೆ.

ಬಾಲಸಂಜೀವಿನಿ ಮತ್ತು ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ ಯೋಜನೆಯಡಿ ರೂ.3703.14 ಲಕ್ಷಗಳ ವೆಚ್ಚದಲ್ಲಿ 6159 ಮಕ್ಕಳಿಗೆ ಯೋಜನೆಯಡಿ ಸೌಲಭ್ಯವನ್ನು ಒದಗಿಸಲಾಗಿದೆ.





ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಠಿಕ ಬಿಸಿಯೂಟ ನೀಡುವ "ಮಾತೃಪೂರ್ಣ" ಕಾರ್ಯಕ್ರಮವನ್ನು 4 ತಾಲ್ಲೂಕಿನ 5 ಯೋಜನೆಗಳಾದ ಹೆಚ್.ಡಿ ಕೋಟೆ, ಜಮಖಂಡಿ, ಮಧುಗಿರಿ, ಮಾನ್ವಿ ಮತ್ತು ಸಿರಿವಾರ ಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

ಭಾಗ್ಯಲಕ್ಷ್ಮಿ ಯೋಜನೆಯ ಮಾರ್ಗ ಸೂಚಿಗಳನ್ನು ಇನ್ನಷ್ಟು ಸರಳೀಕಣಗೊಳಿಸಿದೆ. ಬಡತನ ರೇಖೆಗಿಂತ ಕೆಳಗಿನ ಕುಟುಂಬದಲ್ಲಿ ಜನಿಸಿದ 2 ಹೆಣ್ಣುಮಕ್ಕಳಿಗೆ ಯೋಜನೆಯಡಿ ನೋಂದಣಿ ಮಾಡಲು ಅರ್ಹತೆ ಪಡೆದಿರುತ್ತಾರೆ. ಮೊದಲನೇ ಹೆರಿಗೆಯಲ್ಲಿ ಅವಳಿ/ತ್ರಿವಳಿ ಹೆಣ್ಣುಮಕ್ಕಳು ಜನಿಸಿದ್ದಲ್ಲಿ ಹಾಗೂ ಮೊದಲನೇ ಹೆರಿಗೆಯಲ್ಲಿ 1 ಹೆಣ್ಣುಮಗು ಸೌಲಭ್ಯ ಪಡೆದು ನಂತರ 2 ಹೆರಿಗೆಯಲ್ಲಿ ಅವಳಿ/ತ್ರಿವಳಿ ಹೆಣ್ಣುಮಕ್ಕಳು ಜನಿಸಿದಲ್ಲಿ ಈ ಮಕ್ಕಳಿಗೂ ಯೋಜನೆಯ ಸೌಲಭ್ಯ ವಿಸ್ತರಿಸಲಾಗಿದೆ.

ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಶೌರ್ಯ ಪ್ರಶಸ್ತಿ ಹಾಗೂ ಅಸಾಧಾರಣ ಸಾಧನೆ ಮಾಡಿದ ಮಕ್ಕಳಿಗೆ ನೀಡುವ ಪ್ರಶಸ್ತಿ ಯೋಜನೆಯಡಿ ಒಟ್ಟು 420 ಮಕ್ಕಳಿಗೆ ಪ್ರಶಸ್ತಿಯನ್ನು ನೀಡಲಾಗಿದೆ.

ಮಕ್ಕಳ ಕಲ್ಯಾಣ ಕ್ಷೇತ್ರದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಒಟ್ಟು 4 ವ್ಯಕ್ತಿಗಳು ಮತ್ತು 4 ಸಂಸ್ಥೆಗಳಿಗೆ ರಾಜ್ಯ ಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

2016–17ನೇ ಸಾಲಿನಲ್ಲಿ ಮಕ್ಕಳ ದಿನಾಚರಣೆಯನ್ನು ವಿಶಿಷ್ಟವಾಗಿ ಆಚರಿಸಲಾಯಿತು. ಮಕ್ಕಳಿಗಾಗಿ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ಮಕ್ಕಳ ಹಬ್ಬ, ಗ್ರಾಮೀಣ /



ಸಾಹಸ ಕ್ರೀಡೆಗಳು, ಮಲ್ಲಕಂಬ ಮತ್ತು ವಸ್ತು ಪ್ರದರ್ಶನ, ವಿಜ್ಞಾನ ಮಳಿಗೆ, ಸಶಸ್ತ್ರ ಪಡೆಗಳ ಮಳಿಗೆ, ಚಿತ್ರಕಲೆ ಸ್ಪರ್ಧೆ ಇತ್ಯಾದಿ ಕಾರ್ಯಕ್ರಮಗಳನ್ನು ವಿಶೇಷವಾಗಿ ಹಮ್ಮಿಕೊಂಡು ಮಕ್ಕಳನ್ನು ಆಕರ್ಷಿಸುವಲ್ಲಿ ಅರ್ಥಪೂರ್ಣವಾಗಿ ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು.

ಮಹಿಳೆಯರ ಮತ್ತು ಮಕ್ಕಳ ಸಾಗಣೆಯು ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದ್ದು ಇದು ಆತಂಕಕಾರಿಯಾದ ಬೆಳವಣಿಗೆಯಾಗಿರುತ್ತದೆ. ಈ ಪಿಡುಗನ್ನು ಸ್ಥಳೀಯ ಮಟ್ಟದಲ್ಲಿ ತಡೆಯುವುದು ಅನಿವಾರ್ಯವಾಗಿರುತ್ತದೆ. ಈ ವ್ಯವಸ್ಥಿತ ಪಿಡುಗನ್ನು ನಿಯಂತ್ರಿಸಲು ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ಸಾರ್ವಜನಿಕರಲ್ಲಿ ವಿವಿಧ ಕಾರ್ಯಕ್ರಮಗಳ ಮೂಲಕ ಜಾಗೃತಿಯನ್ನು ಮೂಡಿಸಲಾಗುತ್ತಿದೆ.

### ಬಾಲ್ಯ ವಿವಾಹ ನಿಷೇಧ

2016–17ನೇ ಸಾಲಿನಲ್ಲಿ 1073 ಬಾಲ್ಯ ವಿವಾಹಗಳನ್ನು ತಡೆಗಟ್ಟಲಾಗಿದೆ.ವಿವಿಧ ಇಲಾಖೆಗಳ ಬಾಲ್ಯ ವಿವಾಹ ನಿಷೇಧಾಧಿಕಾರಿಗಳ ಸಮನ್ವಯತೆ ಮತ್ತು ಸಹಕಾರದ ಬಗ್ಗೆ ಕಾರ್ಯಾಗಾರವನ್ನು 30 ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಹಮ್ಮಿಕೊಳ್ಳಲಾಗಿದೆ.

ಆಕಾಶವಾಣಿಯಲ್ಲಿ ಬಾಲ್ಯ ವಿವಾಹ ನಿಷೇಧ ಕುರಿತು



"ಅಮ್ಮಾ ನನಗೆ ಮದುವೆ ಬೇಡಮ್ಮ" ಎಂಬ ಶೀರ್ಷಿಕೆಯಡಿಯಲ್ಲಿ 2016–17ನೇ ಸಾಲಿನಲ್ಲಿ 13 ಎಪಿಸೋಡ್‌ಗಳಲ್ಲಿ ಕಾರ್ಯಕ್ರಮ ಪ್ರಸಾರ ಮಾಡಲಾಗಿದೆ.

ಕಲ್ಬುರ್ಗಿ, ಮೈಸೂರು, ಚಾಮರಾಜನಗರ, ಕೊಡಗು, ತುಮಕೂರು, ಚಿಕ್ಕಬಳ್ಳಾಪುರ, ಜಿಲ್ಲೆಗಳ ಹಾಡಿಗಳು ಮತ್ತು ತಾಂಡಾಗಳಲ್ಲಿ ಸಮುದಾಯಕ್ಕೆ ಬಾಲ್ಯ ವಿವಾಹ ನಿಷೇಧದ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಬೆಂಗಳೂರು ನಗರ, ರಾಮನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಕಲ್ಬುರ್ಗಿ, ಹಾಸನ, ಮಂಡ್ಯ, ಮೈಸೂರು, ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳ 256 ಹೋಬಳಿಗಳಲ್ಲಿ ಬಾಲ್ಯವಿವಾಹ ನಿಷೇಧ ಕುರಿತು ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಬಾಲ್ಯ ವಿವಾಹ ನಿಷೇಧ ಕುರಿತಂತೆ ತಾಲ್ಲೂಕು ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರ ಸಭೆ ಮತ್ತು ನಗರ ಸಭೆಯ 10031 ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ರಾಜ್ಯದ ಶಿಕ್ಷಣ ಇಲಾಖೆಯ ಪ್ರೌಢಶಾಲೆಗಳ ಶಾಲಾಭಿವೃದ್ಧಿ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರು, ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಮತ್ತು ಇಲಾಖೆಯ ಮೇಲ್ವಿಚಾರಕಿಯರಿಗೆ ಬಾಲ್ಯವಿವಾಹ ನಿಷೇಧ ಕುರಿತು ಉಪಗ್ರಹ ಆಧಾರಿತ ಅರಿವು ಕಾರ್ಯಕ್ರಮವನ್ನು 175 ತಾಲ್ಲೂಕುಗಳಲ್ಲಿ ನಡೆಸಲಾಗಿದೆ.

ಈ ವರ್ಷದಲ್ಲಿ ಹೊಸದಾಗಿ ಚಿತ್ರದುರ್ಗ ಹಾಗೂ ಶಿವಮೊಗ್ಗ ಜಿಲ್ಲೆಗಳಿಗಲ್ಲಿ ಸರ್ಕಾರಿ ಬಾಲಕಿಯರ ಬಾಲಮಂದಿರವನ್ನು ತುಮಕೂರು ಜಿಲ್ಲೆಯಲ್ಲಿ ಬಾಲಕರ ಬಾಲಮಂದಿರವನ್ನು ಹಾಗೂ ಬೀದರ್ ಜಿಲ್ಲೆಯಲ್ಲಿ ವೀಕ್ಷಣಾಲಯ ಮಂಜೂರು ಮಾಡಲಾಗಿದೆ.

ಕಾನೂನು ಸಂಘರ್ಷಕ್ಕೊಳಗಾದ ಮಕ್ಕಳಿಗೆ ಪುನರ್ವಸತಿ ಮತ್ತು ರಕ್ಷಣೆಗಾಗಿ ಬೆಂಗಳೂರು ನಗರದಲ್ಲಿ 'Place of Safety' ಮಂಜೂರು ಮಾಡಲಾಗಿದೆ.

2016–17ನೇ ಸಾಲಿನಲ್ಲಿ 151 ಅನಾಥ ಪರಿತ್ಯಕ್ತ ಮಕ್ಕಳನ್ನು ರಕ್ಷಣೆ ಮಾಡಲಾಗಿದೆ, ಪೋಷಕರಿಂದ ಒಪ್ಪಿಸಲ್ಪಟ್ಟ 218 ಮಕ್ಕಳನ್ನು ಸ್ವೀಕರಿಸಲಾಗಿದೆ. ಒಟ್ಟು 263 ಮಕ್ಕಳನ್ನು ಸ್ವದೇಶಿ ದತ್ತು ಹಾಗೂ 19 ಮಕ್ಕಳನ್ನು ವಿದೇಶಿ ದತ್ತು ನೀಡಲಾಗಿದೆ.

ಬಾಲ ನ್ಯಾಯ ಕಾಯ್ದೆಯನ್ನು ವಿಸ್ತರಿಸಲಾಗಿದ್ದು ಅದರನ್ವಯ 335 ಸಂಸ್ಥೆಗಳನ್ನು ಬಾಲ ನ್ಯಾಯ ಕಾಯ್ದೆಯಡಿ ನೋಂದಣೀಕರಿಸಲಾಗಿದೆ.

ರಾಜ್ಯದ ಬಾಲಮಂದಿರಗಳಲ್ಲಿ ಹಾಗೂ ವಿಶೇಷ ದತ್ತು ಕೇಂದ್ರಗಳಲ್ಲಿ ಪರಿತ್ಯಕ್ತ ಮಕ್ಕಳನ್ನು ಸ್ವೀಕರಿಸಲು "ಮಮತೆಯ ತೊಟ್ಟಿಲು"ಗಳನ್ನು ಇಡುವ ವ್ಯವಸ್ಥೆ ಮಾಡಲಾಗಿದೆ.

33 ಮಕ್ಕಳ ಕಲ್ಯಾಣ ಸಮಿತಿಗಳ ಮೂಲಕ ರಕ್ಷಣೆ, ಪೋಷಣೆ ಅವಶ್ಯವಿರುವ 9839 ಮಕ್ಕಳಿಗೆ ಪುನರ್ವಸತಿ ಕಲ್ಪಿಸಲಾಗಿದೆ.

30 ಬಾಲ ನ್ಯಾಯ ಮಂಡಳಿಗಳಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ 4608 ಮಕ್ಕಳ ಪ್ರಕರಣಗಳನ್ನು ದಾಖಲಿಸಿ, ಪುನರ್ವಸತಿ ಕ್ರಮವಹಿಸಲಾಗಿದೆ. ■







# ವಸತಿ ಇಲಾಖೆ
# ಸರ್ವರಿಗೂ ಸೂರು

**2017-18ನೇ ಸಾಲಿನಿಂದ ಪ್ರತಿ ಮನೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಗ್ರಾಮೀಣ ಪ್ರದೇಶದಲ್ಲಿ ರೂ.1.50 ಲಕ್ಷಗಳಿಂದ ರೂ.1.75 ಲಕ್ಷಕ್ಕೆ ನಗರ ಪ್ರದೇಶದಲ್ಲಿ ರೂ.1.80 ಲಕ್ಷಗಳಿಂದ ರೂ.2.00 ಲಕ್ಷಕ್ಕೆ ಹೆಚ್ಚಿಸಲಾಗಿದೆ.**

### ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ

ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು 5 ವರ್ಷಗಳ ಅವಧಿಯಲ್ಲಿ ಒಟ್ಟು 15 ಲಕ್ಷ ಮನೆಗಳನ್ನು ನಿರ್ಮಿಸುವ ಗುರಿ ಹೊಂದಿದ್ದು, ಮಾರ್ಚ್–2017ರವರೆಗೆ ಒಟ್ಟು 11 ಲಕ್ಷ ಮನೆಗಳನ್ನು ನಿರ್ಮಿಸಲಾಗಿದೆ. ಒಟ್ಟು 45457 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. 2013–14 ರಿಂದ 2017–18ರ ವರೆಗೆ ಒಟ್ಟು 22 ಲಕ್ಷ ಮನೆಗಳ ಹೊಸ ಮನೆ ನಿರ್ಮಾಣದ ಗುರಿಯನ್ನು ಹಾಕಿಕೊಳ್ಳಲಾಗಿದೆ.



ಸರ್ಕಾರವು 2017–18 ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಗಳಡಿ 7 ಲಕ್ಷ ಹೊಸ ಮನೆಗಳನ್ನು ನಿರ್ಮಿಸಲು ಉದ್ದೇಶಿಸಿದ್ದು, ಆಯವ್ಯಯದಲ್ಲಿ ರೂ.4233.99 ಕೋಟಿಗಳನ್ನು ಒದಗಿಸಲಾಗಿದೆ. ಪ್ರಸಕ್ತ ವರ್ಷದಲ್ಲಿ 4 ಲಕ್ಷ ಮನೆಗಳನ್ನು ನಿರ್ಮಿಸಲು ಹಾಗೂ 10000 ನಿವೇಶನಗಳನ್ನು ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ. 2017–18ನೇ ಸಾಲಿನಲ್ಲಿ ನಿವೇಶನ ಹೊಂದಿರುವ ಎಲ್ಲಾ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಬೇಡಿಕೆ ಮೇಲೆ ಡಾ॥ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ ವಸತಿ ಸೌಕರ್ಯವನ್ನು ಒದಗಿಸಲಾಗುವುದು.

ಗ್ರಾಮೀಣ ನಿವೇಶನ ಯೋಜನೆಯನ್ನು ಮಾರ್ಪಡಿಸಿ "ಇಂದಿರಾ ಗ್ರಾಮೀಣ ವಸತಿ ನಿವೇಶನಗಳ ಯೋಜನೆ" ಎಂಬ ನೂತನ ನಾಮಾಂಕಿತದಡಿ ಜಾರಿಗೊಳಿಸಲಾಗುವುದು ಹಾಗೂ ಈ ಯೋಜನೆಯಡಿ ಜಮೀನಿನ ಭೂ ಮಾಲೀಕರಿಗೆ 60:40 ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು.

2017–18ನೇ ಸಾಲಿನಿಂದ ಪ್ರತಿ ಮನೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಗ್ರಾಮೀಣ ಪ್ರದೇಶದಲ್ಲಿ ರೂ.1.50 ಲಕ್ಷಗಳಿಂದ ರೂ.1.75 ಲಕ್ಷಕ್ಕೆ ನಗರ ಪ್ರದೇಶದಲ್ಲಿ ರೂ.1.80 ಲಕ್ಷಗಳಿಂದ ರೂ.2.00 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಉಳಿದಂತೆ ಸಾಮಾನ್ಯ ವರ್ಗದವರಿಗೆ 1.20 ಲಕ್ಷಗಳನ್ನು ನೀಡಲಾಗುತ್ತಿದೆ. ವಿವಿಧ ವಸತಿ ಯೋಜನೆಗಳಡಿಯಲ್ಲಿ ಈ ಹಿಂದೆ ಸರ್ಕಾರದಿಂದ ನೀಡಲಾದ ಸಾಲ ಮತ್ತು ಬಡ್ಡಿ ರೂ.2488 ಕೋಟಿಗಳನ್ನು ಮನ್ನಾ ಮಾಡಲಾಗಿದೆ. ಇದರಿಂದ ರಾಜ್ಯದಲ್ಲಿ ಸುಮಾರು 10.84ಲಕ್ಷ ಫಲಾನುಭವಿಗಳಿಗೆ ಲಾಭ ದೊರಕಿರುತ್ತದೆ. ಈ ಸಂಬಂಧ ಪ್ರತಿಯೊಂದು ಫಲಾನುಭವಿಗೂ ಸಾಲ ಮನ್ನಾ ತಿಳುವಳಿಕೆ ಪತ್ರವನ್ನು ನೀಡಲಾಗುತ್ತಿದೆ.

2016–17ನೇ ಸಾಲಿನಿಂದ ನಗರ ಪ್ರದೇಶದಲ್ಲಿ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಹಾಗೂ ರಾಜ್ಯ ಸರ್ಕಾರದ ಯೋಜನೆಯೊಂದಿಗೆ ಸಂಯೋಜಿಸಿ, ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ರೂ.2.70 ಲಕ್ಷ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದ ಫಲಾನುಭವಿಗಳಿಗೆ ರೂ.3.50 ಲಕ್ಷಗಳ ಸಹಾಯಧನವನ್ನು ನೀಡಲಾಗುತ್ತಿದೆ.

**ಕರ್ನಾಟಕ ಕೊಳಗೇರಿ ಅಭಿವೃದ್ಧಿ ನೀತಿ 2016:**

ಮಾನ್ಯ ಮುಖ್ಯಮಂತ್ರಿಯವರು 2015–16 ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ಘೋಷಿಸಿದಂತೆ, ಕೊಳಗೇರಿಗಳನ್ನು ನಗರದ ಜೀವಂತ ಹಾಗೂ ಸಮನ್ವಯ ನೆರೆಹೊರೆಗಳಾಗಿ ಮುಖ್ಯವಾಹಿನಿಯಲ್ಲಿ ಸೇರ್ಪಡೆ ಮಾಡಿಕೊಳ್ಳಲು ವಸತಿಯ ಒಡೆತನ, ಮೂಲಭೂತ ಸೇವೆಗಳ ಲಭ್ಯತೆ ಹಾಗೂ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಸಾಧ್ಯತೆಯನ್ನು ಹೆಚ್ಚಿಸಲು ಕರ್ನಾಟಕ ಕೊಳಗೇರಿ ಅಭಿವೃದ್ಧಿ ನೀತಿಯನ್ನು ಕಳೆದ ವರ್ಷ ಜೂನ್ ತಿಂಗಳಿನಿಂದ ಜಾರಿಗೆ ತರಲಾಗಿದೆ.

**ನೀತಿಯ ಉದ್ದೇಶಗಳು:**

- ಕೊಳಗೇರಿಗಳ ಸಮಗ್ರ ಅಭಿವೃದ್ಧಿಗಾಗಿ ಚೌಕಟ್ಟನ್ನು ಒದಗಿಸುವುದು.
- ಮೂಲಭೂತ ಸೇವೆಗಳು ದೊರಕುವಂತೆ ಖಚಿತಪಡಿಸಿಕೊಳ್ಳುವುದು.
- ಸಾಮಾಜಿಕ ಮೂಲಭೂತ ವ್ಯವಸ್ಥೆಗಳನ್ನು ಒದಗಿಸಲು ಇಲಾಖೆಗಳ ಸಮನ್ವಯವನ್ನು ಸಾಧ್ಯವಾಗಿಸುವುದು
- ಕರ್ನಾಟಕ ಸರ್ಕಾರ ಹಾಗೂ ಭಾರತ ಸರ್ಕಾರದ ಯೋಜನೆಗಳನ್ನು ಒಮ್ಮುಖಗೊಳಿಸುವುದು.





**ಕರ್ನಾಟಕ ಗೃಹ ಮಂಡಳಿ ವಸತಿ ಯೋಜನೆಗಳು:**

ಮಂಡಳಿಯಲ್ಲಿ ಸರಕಾರ ಅನುಮೋದಿಸಿರುವ ವಿವಿಧ ವಸತಿ ಯೋಜನೆಗಳು ಚಾಲ್ತಿಯಲ್ಲಿವೆ. ಈ ಪೈಕಿ

ಕಳೆದ 4 ವರ್ಷಗಳಲ್ಲಿ 35 ವಸತಿ ಯೋಜನೆಗಳು ಪೂರ್ಣಗೊಂಡಿದ್ದು, ರೂ. 1310 ಕೋಟಿ ಮೊತ್ತದಲ್ಲಿ 23669 ನಿವೇಶನಗಳು ಮತ್ತು 1341 ಮನೆಗಳನ್ನು ನಿರ್ಮಿಸಲಾಗಿದೆ.

36 ಯೋಜನೆಗಳ ಕಾಮಗಾರಿಗಳು ವಿವಿಧ ಹಂತಗಳಲ್ಲಿದ್ದು 4424 ಮನೆಗಳನ್ನು ನಿರ್ಮಿಸಲಾಗುತ್ತಿದೆ. ಕಳೆದ 4 ವರ್ಷಗಳಲ್ಲಿ ಒಟ್ಟು 23119 ನಿವೇಶನಗಳನ್ನು ಮತ್ತು 2856 ಮನೆಗಳನ್ನು ರೂ.2611 ಕೋಟಿ ಮೊತ್ತದಲ್ಲಿ ಹಂಚಿಕೆ ಮಾಡಲಾಗಿದೆ.

2017–18ನೇ ಸಾಲಿನಿಂದ "ಇಂದಿರಾ ಮನೆ" ಮೊಬೈಲ್ ಆಪ್‌ನ್ನು ಜಾರಿಗೆ ತರಲಾಗಿದ್ದು, ಫಲಾನುಭವಿಯು ತನ್ನ ಮನೆಯ ಪ್ರಗತಿಯನ್ನು ಜಿಪಿಎಸ್‌ಗೆ ಅಳವಡಿಸಿ ಸ್ವಯಂ ಪಾವತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ. 2013–14ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ಜಿಪಿಎಸ್ ತಂತ್ರಜ್ಞಾನ ಅಳವಡಿಕೆ ಮತ್ತು ಫಲಾನುಭವಿಗಳಿಗೆ ನೇರ ಹಣ ವರ್ಗಾವಣೆಗಾಗಿ ಚಿನ್ನದ ಪ್ರಶಸ್ತಿ ಪುರಸ್ಕಾರ ಮತ್ತು ಹುಡ್ಕೊ ಸಂಸ್ಥೆಯಿಂದ ವಸತಿ ಯೋಜನೆಗಳ ಅನುಷ್ಠಾನದ ಅತ್ಯುತ್ತಮ ಸಾಧನೆ ಪುರಸ್ಕಾರ.

## ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿವತಿಯಿಂದ ರಾಜ್ಯ ಸರ್ಕಾರದ ಕೊಳಚೆ ಸುಧಾರಣೆ ಯೋಜನೆ, ಕೇಂದ್ರ ಪುರಸ್ಕೃತ ಜೆನ್.ಎನ್.ಎನ್.ಯು.ಆರ್.ಎಂ. ಕಾರ್ಯಕ್ರಮದಡಿಯಲ್ಲಿ ಬಿ.ಎಸ್.ಯು.ಪಿ. ಯೋಜನೆಯನ್ನು ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ, ಐ.ಹೆಚ್.ಎಸ್.ಡಿ.ಪಿ ಯೋಜನೆಯನ್ನು 32 ನಗರ / ಪಟ್ಟಣಗಳಲ್ಲಿ ಹಾಗೂ ರಾಜೀವ್ ಆವಾಸ್ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸ್ತುತ ಪ್ರಧಾನಮಂತ್ರಿ ಆವಾಸ್– "ಸರ್ವರಿಗೂ ಸೂರು" ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ಕೊಳಚೆ ಸುಧಾರಣೆ ಯೋಜನೆ:** ಕಳೆದ ನಾಲ್ಕು ವರ್ಷಗಳಲ್ಲಿ ಕೊಳಚೆ ಸುಧಾರಣೆ ಯೋಜನೆಯಡಿ 1125 ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

**ಬಿ.ಎಸ್.ಯು.ಪಿ. ಯೋಜನೆ :** ಕಳೆದ ನಾಲ್ಕುಗಳಲ್ಲಿ ಕೇಂದ್ರ ಪುರಸ್ಕೃತ ಬಿ.ಎಸ್.ಯು.ಪಿ. ಯೋಜನೆಯಡಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಬರುವ ಕೊಳಗೇರಿ ಪ್ರದೇಶಗಳಲ್ಲಿ 4535 ಮನೆಗಳನ್ನು ಪೂರ್ಣಗೊಳಿಸಲಾಗಿದೆ, 524 ಮನೆಗಳು ನಿರ್ಮಾಣ ಹಂತದಲ್ಲಿವೆ. ಒಟ್ಟಾರೆಯಾಗಿ 24315 ಮನೆಗಳು ಮಂಜೂರಾಗಿವೆ. ಇವುಗಳಲ್ಲಿ 23791 ಮನೆಗಳನ್ನು ಪೂರ್ಣಗೊಳಿಸಿ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ.

**ಐ.ಹೆಚ್.ಎಸ್.ಡಿ.ಪಿ ಯೋಜನೆ :** ಕಳೆದ ನಾಲ್ಕು ವರ್ಷಗಳಲ್ಲಿ ಕೇಂದ್ರ ಪುರಸ್ಕೃತ ಐ.ಹೆಚ್.ಎಸ್.ಡಿ.ಪಿ ಯೋಜನೆಯಡಿ ರಾಜ್ಯದಲ್ಲಿನ 32 ನಗರ / ಪಟ್ಟಣಗಳಲ್ಲಿ ಬರುವ ಕೊಳಗೇರಿ ಪ್ರದೇಶಗಳಲ್ಲಿ 1368 ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಒಟ್ಟಾರೆಯಾಗಿ 17237 ಮನೆಗಳು ಮಂಜೂರಾಗಿದ್ದು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ.

**ರಾಜೀವ್ ಅವಾಸ್ ಯೋಜನೆ:** ಕಳೆದ ನಾಲ್ಕು ವರ್ಷಗಳಲ್ಲಿ ಕೇಂದ್ರ ಪುರಸ್ಕೃತ ರಾಜೀವ್ ಅವಾಸ್ ಯೋಜನೆಯಡಿ ರಾಜ್ಯದಲ್ಲಿನ 19 ನಗರ/ಪಟ್ಟಣಗಳಲ್ಲಿ ಬರುವ 186 ಕೊಳಗೇರಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 36,438 ಮನೆಗಳನ್ನು ರೂ.1845.96 ಕೋಟಿಗಳ ವೆಚ್ಚದಲ್ಲಿ ನಿರ್ಮಿಸಲು ಕೇಂದ್ರ ಸರ್ಕಾರದಿಂದ 40 ಯೋಜನೆಗಳಿಗೆ ಅನುಮೋದನೆ ಪಡೆದುಕೊಳ್ಳಲಾಗಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ರಾಜೀವ್ ಅವಾಸ್ ಯೋಜನೆಯಡಿ 10189 ಮನೆಗಳನ್ನು ಪೂರ್ಣಗೊಳಿಸಲಾಗಿದೆ. 4913 ಮನೆಗಳು ನಿರ್ಮಾಣ ಹಂತದಲ್ಲಿವೆ.



# ಮೂಲಸೌಲಭ್ಯ ಅಭಿವೃದ್ಧಿ

ರಾಜು ಅಡಕಹಳ್ಳಿ

ಸನ್ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಮತ್ತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಭೂತ ಸೌಲಭ್ಯ ಅಭಿವೃದ್ಧಿ ಖಾತೆಯ ಸಚಿವರಾದ ಶ್ರೀ ಆರ್.ವಿ.ದೇಶಪಾಂಡೆ ಅವರ ಕ್ರಿಯಾಶೀಲ ಮಾರ್ಗದರ್ಶನದಲ್ಲಿ ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಯಲ್ಲಿ ಅನೇಕ ಯೋಜನೆಗಳನ್ನು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಜಾರಿಗೊಳಿಸಲಾಗಿವೆ.

ರಾಜ್ಯದಲ್ಲಿ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು, ರೈಲ್ವೆ ಮಂತ್ರಾಲಯದ ಸಹಯೋಗದೊಂದಿಗೆ ರೈಲ್ವೆ ಯೋಜನೆಗಳನ್ನು, ನಾಗರಿಕ ವಿಮಾನಯಾನ ಮಂತ್ರಾಲಯದ ಸಹಯೋಗದೊಂದಿಗೆ ವಿಮಾನ ನಿಲ್ದಾಣಗಳ ಅಭಿವೃದ್ಧಿ, ಸಾರ್ವಜನಿಕ–ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಬಂದರುಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಸಾರ್ವಜನಿಕ ಖಾಸಗಿ ಸಹಭಾಗಿತ್ವವನ್ನು ಮುಖ್ಯವಾಹಿನಿಗೆ ತರುವುದು ಈ ಇಲಾಖೆಯ ಉದ್ದೇಶವಾಗಿರುತ್ತದೆ.

ಮೂಲಸೌಲಭ್ಯ ಅಭಿವೃದ್ಧಿ ನೀತಿ 2007ನ್ನು ಪರಿಷ್ಕರಿಸಿ, ಸಾರ್ವಜನಿಕ – ಖಾಸಗಿ ಸಹಭಾಗಿತ್ವದಲ್ಲಿ ಮೂಲಸೌಲಭ್ಯವನ್ನು ಅಭಿವೃದ್ಧಿ ಪಡಿಸಲು ಹೆಚ್ಚಿನ ಗಮನ ನೀಡಲಾಗಿದೆ. ರಾಜ್ಯದ ವಿವಿಧ ಪ್ರದೇಶಗಳಿಗೆ ಮತ್ತು ವಿವಿಧ ಬಳಕೆಗಾಗಿ ಸ್ವಚ್ಛ ನೈಸರ್ಗಿಕ ಅನಿಲ ವಿತರಣೆ ಮಾಡಲು ಕೆ.ಎಸ್.ಐ.ಐ.ಡಿ.ಸಿ ಮತ್ತು ಗೈಲ್ ನಡುವೆ ಜಂಟಿ ಸಹಭಾಗಿತ್ವದಲ್ಲಿ ಕಂಪನಿ ಸ್ಥಾಪಿಸಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಬೆಂಗಳೂರು ನಗರಕ್ಕೆ ಸಾಂದೀಕೃತ ನೈಸರ್ಗಿಕ ಅನಿಲ (ಸಿಎನ್‌ಜಿ) (Compressed Natural Gas)ವನ್ನು ಪೂರೈಸಲಾಗುತ್ತಿದೆ. ಧಾಬೋಲ್–ಬೆಂಗಳೂರು ಅನಿಲ ಕೊಳವೆ ಮಾರ್ಗ ಕಾರ್ಯಾರಂಭ ಮಾಡಿದ್ದು, ಬೆಂಗಳೂರಿನ ಕೆಲವು ಕೈಗಾರಿಕೆ ಮತ್ತು ವಾಣಿಜ್ಯ ಉದ್ದಿಮೆಗಳಿಗೆ ನೈಸರ್ಗಿಕ ಅನಿಲ ಪೂರೈಕೆ ಮಾಡಲಾಗುತ್ತಿದೆ.

34.25 MTPA ಸಾಮರ್ಥ್ಯವುಳ್ಳ ಬಹು ಉದ್ದೇಶಿತ ಬಂದರನ್ನು ಉತ್ತರ ಕನ್ನಡ ಜಿಲ್ಲೆಯ ಕುಮಟ ತಾಲ್ಲೂಕಿನ ತದಡಿಯಲ್ಲಿ ಪಿಪಿಪಿ ಮಾದರಿಯಲ್ಲಿ ನಿರ್ಮಿಸಲು ಸರ್ಕಾರವು ಒಪ್ಪಿಗೆ ನೀಡಿದ್ದು, ಈ ಯೋಜನೆಗಾಗಿ 1400 ಎಕರೆಯ ಜಮೀನು ಲಭ್ಯವಿದೆ. ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಇಲಾಖೆಯಿಂದ ಈ ಯೋಜನೆಗೆ ತಾತ್ವಿಕ ಅನುಮೋದನೆ ಪಡೆಯಲಾಗಿದೆ. ಸದರಿ ಮಂತ್ರಾಲಯವು ವಿಧಿಸಿರುವ ಷರತ್ತುಗಳಂತೆ, ಹೆಚ್ಚಿನ ಅಧ್ಯಯನ ಕೈಗೊಂಡು ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.



### ರೈಲ್ವೆ ಯೋಜನೆಗಳು

- ಹುಬ್ಬಳ್ಳಿ–ಅಂಕೋಲ ರೈಲ್ವೆ ಲೈನ್ ಯೋಜನೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ನಿರ್ದೇಶನದನ್ವಯ ಪರಿಷ್ಕೃತ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯಕ್ಕೆ ಸಲ್ಲಿಸಲಾಗಿದೆ.
- ರಾಮನಗರ–ಮೈಸೂರು ಜೋಡಿ ರೈಲು ಮಾರ್ಗದಲ್ಲಿ (93 ಕಿ.ಮೀ) ಶ್ರೀರಂಗಪಟ್ಟಣ ಬಳಿಯಲ್ಲಿನ ಮದ್ದಿನ ಮನೆಯನ್ನು ಸ್ಥಳಾಂತರಿಸಲಾಗಿದೆ. ಈ ವ್ಯಾಪ್ತಿಯ 1.5 ಕಿ.ಮೀ. ಅನ್ನು ಹೊರತುಪಡಿಸಿ ಉಳಿದ ಮಾರ್ಗವನ್ನು ಸಂಚಾರಕ್ಕೆ ತೆರವುಗೊಳಿಸಲಾಗಿದೆ.
- ಬೀದರ್–ಕಲಬುರಗಿ ಹೊಸ ರೈಲು ಮಾರ್ಗ ಯೋಜನೆಗೆ ರೈಲ್ವೆ ಮಂಡಳಿಯು ಎರಡನೆಯ ಬಾರಿಗೆ ಪರಿಷ್ಕೃತ ಅಂದಾಜು ವೆಚ್ಚ ರೂ.1542.41 ಕೋಟಿಗಳನ್ನು ಅನುಮೋದಿಸಿದ್ದು (ರಾಜ್ಯದ ಪಾಲು ರೂ.771.205 ಕೋಟಿಗಳು), ಯೋಜನೆಯು ಮುಕ್ತಾಯ ಹಂತದಲ್ಲಿದೆ.
- ಬೆಂಗಳೂರು–ಹಾಸನದ 167 ಕಿ.ಮಿ ಉದ್ದದ ಹೊಸ ರೈಲು ಮಾರ್ಗವನ್ನು ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ.
- ಕಡೂರು–ಚಿಕ್ಕಮಗಳೂರು, ಕೋಲಾರ– ಚಿಕ್ಕಬಳ್ಳಾಪುರ, ಕೊಟ್ಟೂರು–ಹರಿಹರ ರೈಲ್ವೆ ಮಾರ್ಗ ಯೋಜನೆಗಳನ್ನು ಪೂರ್ಣಗೊಳಿಸಿ ಸಂಚಾರಕ್ಕೆ ತೆರವುಗೊಳಿಸಲಾಗಿದೆ.
- ಮುನಿರಾಬಾದ್–ಮೆಹಬೂಬನಗರ ರೈಲ್ವೆ ಮಾರ್ಗ ಯೋಜನೆಯು 170 ಕಿ.ಮೀ. ಗಳಿದ್ದು, 1200 ಎಕರೆ ಜಮೀನನ್ನು ನೈರುತ್ಯ ರೈಲ್ವೆ ಇಲಾಖೆಗೆ ಹಸ್ತಾಂತರಿಸಲಾಗಿದೆ. ಗಿಣಿಗೇರಾದಿಂದ ಚಿಕ್ಕಬೆಣಕಲ್‌ವರೆಗಿನ ರೈಲು ಮಾರ್ಗವನ್ನು ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ.
- 199.05 ಕಿ.ಮೀ. ಉದ್ದದ ತುಮಕೂರು–ದಾವಣಗೆರೆ ರೈಲು ಮಾರ್ಗ, 102.63 ಕಿ.ಮೀ.ಗಳ ತುಮಕೂರು–ರಾಯದುರ್ಗ ರೈಲ್ವೆ ಮಾರ್ಗ ಯೋಜನೆಗೆ, ಚಿಕ್ಕಮಗಳೂರು–ಸಕಲೇಶಪುರ ವ್ಯಾಪ್ತಿಯಲ್ಲಿ ಬರುವ 46 ಕಿ.ಮೀ. ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.
- ಬಾಗಲಕೋಟೆ–ಕುಡಚಿ ಹೊಸ ರೈಲ್ವೆ ಮಾರ್ಗ 144 ಕಿ.ಮೀ.ಗಳಿದ್ದು ಯೋಜನೆಗೆ ಅಗತ್ಯವಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ರೂ.177.82 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. ಬಾಗಲಕೋಟೆ–ಖಜ್ಜಿದೋಣಿ ವಿಭಾಗದ 30.ಕಿ.ಮೀ ಮಾರ್ಗದಲ್ಲಿ ಕಾಮಗಾರಿ ಪೂರ್ಣಗೊಂಡಿದ್ದು, ಸಧ್ಯದಲ್ಲಿಯೇ ಸಂಚಾರಕ್ಕೆ ತೆರವುಗೊಳಿಸಲಾಗುವುದು.
- ಕರ್ನಾಟಕ ರಾಜ್ಯದ ಯಾದಗಿರಿ ಜಿಲ್ಲೆಯಲ್ಲಿ ಅತ್ಯಾಧುನಿಕ ಸೌಲಭ್ಯಗಳುಳ್ಳ ಫಿಯ್ಯಟ್ ಬೋಗಿ ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಇದಕ್ಕೆ ಅಗತ್ಯವಿರುವ 150 ಎಕರೆ ಭೂಮಿಯನ್ನು ಉಚಿತವಾಗಿ ರೈಲ್ವೆ ಇಲಾಖೆಗೆ ನೀಡಲಾಗಿದೆ. ಕಾರ್ಖಾನೆ ನಿರ್ಮಾಣ ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.



**ಬೆಂಗಳೂರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ**

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರನ್ನು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣವೆಂದು ಮರುನಾಮಕರಣ ಮಾಡಲಾಗಿದೆ. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–1ರ ವಿಸ್ತರಣೆಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಿದ್ದು ಕಾರ್ಯಾಚರಣೆಯಲ್ಲಿದೆ. ಎರಡನೇ ಸಮನಾಂತರ ರನ್‌ವೇ ಮತ್ತು ಟರ್ಮಿನಲ್ 2 ರ ಯೋಜನೆ ಮತ್ತು ಪೂರ್ವ ತಯಾರಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.  ಈ ವಿಮಾನ ನಿಲ್ದಾಣದ ಸುತ್ತಮುತ್ತಲಿನ ರಸ್ತೆಗಳನ್ನು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಅಗತ್ಯಕ್ಕನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಈ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಮಾಹಿತಿಗಳ ಫಲಕಗಳನ್ನು ಕನ್ನಡದಲ್ಲಿ ಇದೇ ಮೊದಲ ಬಾರಿಗೆ ಅಳವಡಿಸಿರುವುದು ಅಪಾರ ಮೆಚ್ಚುಗೆ ಗಳಿಸಿದೆ. ಇದು ಬಹು ದಿನಗಳ ಬೇಡಿಕೆಯಾಗಿತ್ತು. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ 'ಬೆಂಗಳೂರು ಅಂತರಾಷ್ಟ್ರೀಯ ಸಮಾವೇಶ ಕೇಂದ್ರ'ದ ನಿರ್ಮಾಣ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಸಚಿವ ಸಂಪುಟವು ಗ್ರೀನ್ ಹೌಸ್ ಪರಿಕಲ್ಪನೆ ಮತ್ತು ಗಾರ್ಡನ್ ಸಿಟಿ ಥೀಮ್ ಅನ್ನು ಅನುಮೋದಿಸಿದ್ದು, ಯೋಜನೆಯನ್ನು ಅಭಿವೃದ್ಧಿ ಪಡಿಸುವ ಪರ್ಯಾಯ ಮಾರ್ಗಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಬೆಂಗಳೂರು ಅಂತರಾಷ್ಟ್ರೀಯ ಸಮಾವೇಶ ಕೇಂದ್ರ ಮತ್ತು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ನಿವೇಶನಕ್ಕೆ ಹೊಂದಿಕೊಂಡಂತಿರುವ ಕೆ.ಎಸ್.ಐ.ಐ.ಡಿ.ಸಿ.ಯ ಸುಪರ್ದಿಯಲ್ಲಿರುವ 408 ಎಕರೆ ಜಮೀನಿನಲ್ಲಿ ದೇವನಹಳ್ಳಿ ಬಿಸಿನೆಸ್ ಪಾರ್ಕ್ ನಿರ್ಮಿಸುವ 'ಅನನ್ಯ ಯೋಜನೆ' ಕೈಗೆತ್ತಿಕೊಳ್ಳಲಾಗಿದೆ.

**ಇತರ ವಿಮಾನ ನಿಲ್ದಾಣ ಯೋಜನೆಗಳು**

ಚಿಕ್ಕಮಗಳೂರು, ಮಡಿಕೇರಿ, ಕಾರವಾರದಲ್ಲಿ ವಿಮಾನ ಇಳಿದಾಣಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಕಲಬುರಗಿ ವಿಮಾನ ನಿಲ್ದಾಣದ ಬಾಕಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಲೋಕೋಪಯೋಗಿ ಇಲಾಖೆಗೆ ವಹಿಸಲಾಗಿದೆ.

ಈಗಾಗಲೇ ಮೈಸೂರಿನಲ್ಲಿರುವ ವಿಮಾನ ನಿಲ್ದಾಣವು ಕಾರ್ಯಾರಂಭಗೊಂಡಿದ್ದು ರನ್‌ವೇ ಅನ್ನು ವಿಸ್ತರಿಸಲು ರಾಷ್ಟ್ರೀಯ ಹೆದ್ದಾರಿ–212 ರ ಹತ್ತಿರದಲ್ಲಿ ಕೆಳರಸ್ತೆಯನ್ನು ನಿರ್ಮಿಸುವ ಬಗ್ಗೆ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರವು ಅಧ್ಯಯನ ಕೈಗೊಂಡಿದೆ.

ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಒಡೆತನದಲ್ಲಿರುವ ಮಂಗಳೂರು ವಿಮಾನ ನಿಲ್ದಾಣದದಲ್ಲಿ ಹೊಸ ಟರ್ಮಿನಲ್ ಕಟ್ಟಡ ಹಾಗೂ 2ನೇ ರನ್‌ವೇ ನಿರ್ಮಿಸಲು ಹಾಗೂ ಪುನರ್‌ವಸತಿ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ.

ಬೀದರ್ ವಿಮಾನ ನಿಲ್ದಾಣವನ್ನು ಹೊಸ ವಿಮಾನ ನಿಲ್ದಾಣ ನೀತಿಯ ಆರ್‌ಸಿಎಸ್ ಯೋಜನೆಯಡಿ ಕಾರ್ಯಾಚರಣೆಗೊಳಿಸಲು ಕೇಂದ್ರ ನಾಗರಿಕ ವಿಮಾನಯಾನ ಮಂತ್ರಾಲಯದಿಂದ ಕ್ರಮ ಕೈಗೊಳ್ಳಲಾಗುತ್ತಿದೆ.







ಹರಿಯುವ ನೀರನ್ನು
ಹಿಡಿದಿಡುವ ಸಂಕಲ್ಪ

## ಧಾರವಾಡ ಜಿಲ್ಲೆಯ 9 ಕೆರೆಗಳಿಗೆ

# ತುಪ್ಪರಿಹಳ್ಳದ ನೀರು



ಶ್ರೀ ವಿನಯ್ ಕುಲಕರ್ಣಿ

**ಮಂಜುನಾಥ ಡಿ. ಡೊಳ್ಳಿನ**
ಹಿರಿಯ ಸಹಾಯಕ ನಿರ್ದೇಶಕರು, ಧಾರವಾಡ

ಓಡುವ ನೀರನ್ನು ಹರಿಸಬೇಕು, ಹರಿಯುವ ನೀರನ್ನು ಹಿಂಗಿಸಬೇಕು ಎಂಬ ಆಶಯವನ್ನು ಅನುಷ್ಠಾನಗೊಳಿಸಲು ಸರಕಾರ ಮುಂದಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಳೆದ ಮಾರ್ಚ್ 16 ರಂದು ಮಂಡಿಸಿದ 2017–18 ನೇ ಸಾಲಿನ ಬಜೆಟ್‌ನಲ್ಲಿ ಧಾರವಾಡ ತಾಲ್ಲೂಕಿನ ತುಪ್ಪರಿಹಳ್ಳದ ನೀರನ್ನು ಐದು ಗ್ರಾಮಗಳ 9 ಕೆರೆಗಳಿಗೆ ತುಂಬಿಸಿ, ನೀರಿನ ಸದ್ಬಳಕೆ ಮಾಡಿಕೊಳ್ಳುವ ಮಹತ್ವಾಕಾಂಕ್ಷೆಯ ಕಾರ್ಯಕ್ಕೆ ಮುನ್ನುಡಿ ಬರೆದಿದ್ದಾರೆ.

ಬೆಣ್ಣೆಹಳ್ಳದ ಉಪಹಳ್ಳವಾಗಿರುವ ತುಪ್ಪರಿಹಳ್ಳದ ಮೂಲಕ ಪ್ರತಿವರ್ಷ ಮಳೆಗಾಲದ ಸಂದರ್ಭದಲ್ಲಿ ಅಪಾರ ಪ್ರಮಾಣದ ನೀರು ವ್ಯರ್ಥವಾಗಿ ಹರಿದು ಹೋಗುತ್ತಿರುವುದನ್ನು ಗಮನಿಸಿದ ಸ್ಥಳೀಯ ಶಾಸಕರೂ ಆಗಿರುವ, ಗಣಿ, ಭೂವಿಜ್ಞಾನ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ವಿನಯ ಕುಲಕರ್ಣಿ ಅವರು , ಉತ್ತಮ ಮಳೆಯಾಗುವ ಪ್ರದೇಶದಲ್ಲಿ ಹರಿಯುವ ಈ ಹಳ್ಳದ ನೀರಿನ ಸಮರ್ಪಕ ಬಳಕೆಯಾಗಬೇಕೆಂಬ ನಿಟ್ಟಿನಲ್ಲಿ ಚಿಂತಿಸಿ ತಜ್ಞರು ಮತ್ತು ಬೃಹತ್ ನೀರಾವರಿ ಇಲಾಖೆಯ ಇಂಜನೀಯರುಗಳ ಮೂಲಕ ವಿವರವಾದ ಯೋಜನಾ ವರದಿ ತಯಾರಿಸಿದರು. ಸರಕಾರದ ಮಟ್ಟದಲ್ಲಿ ಯೋಜನೆಯ ಮಹತ್ವವನ್ನು ಮನಗಾಣಿಸಿ ಬಜೆಟ್‌ನಲ್ಲಿ ಅನುದಾನ ಮೀಸಲಿರಿಸುವ ಕಾರ್ಯದಲ್ಲಿ ಯಶಸ್ಸು ಕಂಡಿದ್ದಾರೆ.



ತುಪ್ಪರಿ ಹಳ್ಳದ ಮೂಲಕ ತಡಕೋಡ, ನೀರಲಕಟ್ಟಿ ಹಾಗೂ ಬೋಕ್ಯಾಪುರದಲ್ಲಿ ತಲಾ ಒಂದು ಕೆರೆ ಜೊತೆಗೆ ಹಳೇ ತೇಗೂರ, ಬೋಗೂರ ಮತ್ತು ಗರಗ ಗ್ರಾಮಗಳಲ್ಲಿ ತಲಾ ಎರಡು ಕೆರೆಗಳು ಸೇರಿ ಒಟ್ಟು ಒಂಬತ್ತು ಕೆರೆಗಳಲ್ಲಿ ಮಳೆಗಾಲದ ಅವಧಿಯಲ್ಲಿ 82 ಎಂಸಿಎಫ್‌ಟಿ ನೀರನ್ನು ತುಂಬಿಸುವ ಮಹತ್ವಾಕಾಂಕ್ಷಿ ಯೋಜನೆ ಇದಾಗಿದೆ. ಈ ಕಾರ್ಯ ಅನುಷ್ಠಾನಕ್ಕೆ 2017–18 ನೇ ಸಾಲಿನ ಬಜೆಟ್‌ನಲ್ಲಿ ಅನುದಾನವನ್ನು ಮುಖ್ಯಮಂತ್ರಿಗಳು ಘೋಷಿಸಿದ್ದು, ಯೋಜನೆಗೆ ತಗಲುವ ಅಂದಾಜು 22.5 ಕೋಟಿ ರೂಪಾಯಿಗಳಿಗೆ ಮಂಜೂರಾತಿ ದೊರಕಿದೆ.

ಈ ಭಾಗದ ಕೃಷಿಗೆ ನೀರಾವರಿ ಸೌಲಭ್ಯ ಕಲ್ಪಿಸುವದು, ಕುಡಿಯುವ ನೀರು ಒದಗಿಸುವದು ಹಾಗೂ ಅಂತರ್ಜಲ ಮಟ್ಟ ಹೆಚ್ಚಿಸುವ ಉದ್ದೇಶ ಯೋಜನೆಯಲ್ಲಿದೆ.
ತಡಕೋಡ,ಬೋಕ್ಯಾಪುರ,ಗರಗ,ಬೋಗೂರ,ಹಳೇತೇಗೂರ ಮತ್ತು ನೀರಲಕಟ್ಟಿ ಗ್ರಾಮಗಳಲ್ಲಿನ ಕೆರೆಗಳಿಗೆ ಜಲಾನಯನ ಪ್ರದೇಶದ ವ್ಯಾಪ್ತಿ ಕಡಿಮೆ ಇರುವ ಕಾರಣ ಪ್ರತಿವರ್ಷವೂ ಈ ಕೆರೆಗಳು ತುಂಬುವದಿಲ್ಲ.ಬೋಗೂರ ಮತ್ತು ಹಳೇತೇಗೂರ ಬ್ಯಾರೇಜಿನಿಂದ ನೀರನ್ನು ಎತ್ತಿ ಏತ ನೀರಾವರಿ ಮೂಲಕ ಕೆರೆಗಳನ್ನು ತುಂಬಿಸುವ ಯೋಜನೆ ಇದಾಗಿದೆ. ಈ ಗ್ರಾಮಗಳ ಬ್ಯಾರೇಜಿನ ಹತ್ತಿರ ಜಾಕ್‌ವೆಲ್ ನಿರ್ಮಿಸಿ ನೀರನ್ನು ಪಂಪ್ ಮೂಲಕ ಎತ್ತಲಾಗುವದು. ಪ್ರಸ್ತುತ ಈ ಕೆರೆಗಳು ಹಾಗೂ ತುಪ್ಪರಿ ಹಳ್ಳದಲ್ಲಿ ಸಂಗ್ರಹವಾಗಿರುವ ಹೂಳನ್ನು ತೆಗೆದು, ಒದು ಗಟ್ಟಿಗೊಳಿಸುವ ಕಾರ್ಯವೂ ಇದರಲ್ಲಿ ಸೇರಿದೆ




**ಧಾರವಾಡ ತಾಲ್ಲೂಕಿನ ಐದು ಗ್ರಾಮಗಳಲ್ಲಿನ 9 ಕೆರೆಗಳಿಗೆ ತುಪ್ಪರಿಹಳ್ಳದ ನೀರು ತುಂಬಿಸುವ ಯೋಜನೆಗೆ ಮುಖ್ಯಮಂತ್ರಿಗಳು ಆಯವ್ಯಯದಲ್ಲಿ ಅನುದಾನ ಘೋಷಿಸಿರುವದು ಸಂತಸ ತಂದಿದೆ. ಸದ್ಯ ಈ ಯೋಜನೆಗೆ 22.5 ಕೋಟಿ ರೂ ಲಭ್ಯವಾಗಿದೆ. ಅಂದಾಜು 28 ಕೋಟಿ ರೂ.ಅಗತ್ಯವಿದೆ. ಉಳಿದ ಹಣವನ್ನು ಹಂತ ಹಂತವಾಗಿ ಪಡೆಯಲಾಗುವದು. ಮುಂಬರುವ ದಿನಗಳಲ್ಲಿ ಹಂಗರಕಿ, ದುಬ್ಬನಮರಡಿ ಗ್ರಾಮಗಳೂ ಸೇರಿದಂತೆ ಕೆರೆಗಳಿರುವ ಊರುಗಳ ಪ್ರದೇಶದ ಸುಮಾರು 10 ಸಾವಿರ ಎಕರೆ ಭೂಮಿಗೆ ಸೂಕ್ಷ್ಮ ನೀರಾವರಿ ಸೌಲಭ್ಯ ಕಲ್ಪಿಸುವ ಗುರಿ ಇದೆ ಎಂದು ಗಣಿ,ಭೂವಿಜ್ಞಾನ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ ವಿನಯ ಕುಲಕರ್ಣಿ ಹೇಳಿದ್ದಾರೆ.**

ನೀರಾವರಿ ಕ್ಷೇತ್ರದಲ್ಲಿ ಹಣ ತೊಡಗಿಸುವ ಮೂಲಕ ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸಬಹುದು ಎಂಬುದನ್ನು ಮನಗಂಡಿರುವ ಸರಕಾರ ಧಾರವಾಡ ಜಿಲ್ಲೆಯ ತುಪ್ಪರಿಹಳ್ಳದ ಮೂಲಕ ಐದು ಗ್ರಾಮಗಳ 9 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ನಾಂದಿ ಹಾಡಿರುವುದು, ಗ್ರಾಮೀಣ ಪ್ರದೇಶಗಳ ಜನರ ಆತ್ಮವಿಶ್ವಾಸ ಹೆಚ್ಚಿಸಿದಂತಾಗಿದೆ. ನೈಸರ್ಗಿಕ ಸಮತೋಲನ ನಿರ್ವಹಣೆಗೂ ಇಂತಹ ಯೋಜನೆಗಳು ಸಹಕಾರಿಯಾಗಲಿವೆ.



# ವಿಶ್ವ ಪರಿಸರ ದಿನ




# ನಮ್ಮ ಪರಿಸರ ಶುದ್ಧವಾಗಿರಲಿ...

ಡಾ. ಗುರುಲಿಂಗಪ್ಪ ಅಂಕದ

ಇದಕ್ಕಾಗಿ ಪ್ರತಿವರ್ಷ ಜೂನ್–5 ರಂದು 'ವಿಶ್ವ ಪರಿಸರ ದಿನ' ಆಚರಿಸಲಾಗುತ್ತಿದೆ. ನಮ್ಮ ಪರಿಸರವನ್ನು ಉಳಿಸುವಲ್ಲಿ ಸಮಾಜ ಮತ್ತು ಸರ್ಕಾರದ ಜವಾಬ್ದಾರಿ ಪ್ರಮುಖವಾದದ್ದು. ಪರಿಸರಕ್ಕೆ ಸಂಬಂಧಿಸಿ ವರ್ಷದಲ್ಲಿ 28 ದಿನಗಳನ್ನು ಮೀಸಲಿಡಲಾಗಿದೆ.

ಉಸಿರಾಟಕ್ಕೆ ಅತ್ಯಮೂಲ್ಯವಾದ ಪ್ರಾಣವಾಯುವಿಲ್ಲದೇ ಒಂದು ನಿಮಿಷವೂ ಬದುಕಲು ಸಾಧ್ಯವಿಲ್ಲ! ಎಂದು ಎಲ್ಲರಿಗೂ ತಿಳಿದಿದೆ. ಹಾಗೇ ಸುಮ್ಮನೇ ಕಲ್ಪಿಸಿಕೊಳ್ಳಿ ಮುಂದೊಂದು ದಿನ ಉಸಿರಾಡಲು ಈ ಶುದ್ಧ ಗಾಳಿಯನ್ನೇ ಕೊಂಡುಕೊಳ್ಳುವ ಪರಿಸ್ಥಿತಿ ಬಂದರೆ ಹೇಗೆ? ಕಲ್ಪನೆಯೇ ಇಷ್ಟು ಭೀಕರವಾಗಿರುವಾಗ ಇದೇ ನಿಜವಾಗಿಬಿಟ್ಟರೆ? ಹೌದು ಮುಂದೊಂದು ದಿನ ಇಂತಹ ಪರಿಸ್ಥಿತಿ ಎದುರಾಗಬಹುದು ಎಂದು ವಿಜ್ಞಾನಿಗಳು ಎಚ್ಚರಿಸುತ್ತಿದ್ದಾರೆ. ಈಗಾಗಲೇ ನೈಸರ್ಗಿಕ ಸಂಪನ್ಮೂಲವಾದ ಕುಡಿಯಲು ಶುದ್ಧ ನೀರನ್ನು ಕೊಳ್ಳುತ್ತಿಲ್ಲವೇ? ನಾವು ಹೀಗೇ ಪರಿಸರವನ್ನು ಕಲುಷಿತ ಮಾಡುತ್ತಿದ್ದರೆ ಮುಂದೆ ಅದಕ್ಕೆ ದೊಡ್ಡ ಬೆಲೆ0ುನ್ನೇ ತೆರಬೇಕಾಗಬಹುದು.

ಮಿತಿಮೀರಿದ ವಾಹನಗಳು, ಕೈಗಾರಿಕೆಗಳು ಉಗುಳುವ ಹೊಗೆಯಿಂದಾಗಿ ಕ್ಲೋರೋಫ್ಲೋರೋ ಕಾರ್ಬನ್‌ಗಳು ಮತ್ತು ಬ್ರೋಮೋಫ್ಲೋರೋ ಕಾರ್ಬನ್‌ಗಳು ಅಗಾಧ ಪ್ರಮಾಣದಲ್ಲಿ ವಾಯುಮಂಡಲಕ್ಕೆ ಬಿಡುಗಡೆ0ಾಗುತ್ತಿವೆ. ಇಷ್ಟು ಸಾಲದೆಂಬಂತೆ ನಗರೀಕರಣಕ್ಕೋ ಅಥವಾ ಕೈಗಾರೀಕರಣಕ್ಕೋ ಸಮೃದ್ಧ ಅರಣ್ಯಗಳನ್ನು ಕಡಿಯುವ ಪ್ರವೃತ್ತಿ ದಿನೇ–ದಿನೇ ಹೆಚ್ಚುತ್ತಿರುವುದರಿಂದ, ಪರಿಸರಕ್ಕೆ ಬಿಡುಗಡೆಯಾಗುವ ಕಾರ್ಬನ್ ಸಂಯುಕ್ತಗಳನ್ನು ಗಿಡಮರಗಳು ಹೀರಿಕೊಳ್ಳುವುದಕ್ಕೆ ಆಸ್ಪದವೇ ಇಲ್ಲದೇ ಓಝೋನ್ ಒಡಲು ಬರಿದಾಗುತ್ತಿದೆ. ಹೀಗಾಗಿ ಅತಿನೇರಳೆ ವಿಕಿರಣವನ್ನು ಹೀರಿಕೊಳ್ಳುವ/ತಡೆಯುವ ಅದರ ಸಾಮರ್ಥ್ಯವೂ ಕುಸಿಯುವುದರಿಂದ ಅಪಾಯಕಾರಿ ಅತಿನೇರಳೆ ವಿಕಿರಣ ಭೂಮಿಗೆ ತಲುಪುವ ಹಾದಿ ಸಲೀಸಾಗುತ್ತದೆ.

ಸೂರ್ಯನಿಂದ ಹೊರಹೊಮ್ಮುವ ಮತ್ತು ಜೀವ ಲೋಕಕ್ಕೆ ಹಾನಿಕರವೆಂದೇ ಪರಿಗಣಿಸಲ್ಪಟ್ಟಿರುವ ಅತಿನೇರಳೆ (ಅಲ್ಟ್ರಾ ವೈಲೆಟ್) ವಿಕಿರಣದ ಬಹುಪಾಲನ್ನು ಹೀರಿಕೊಳ್ಳುವ ಭೂಮಿಯ ವಾಯುಗೋಲದ ಪ್ರದೇಶವೇ ಈ ಓಝೋನ್ ಪದರ. ಭೂಮಿಯ ಮೇಲ್ಮೈಯಿಂದ ಸುಮಾರು 20–30 ಕಿ.ಮೀ.ವರೆಗೆ ಇದು ವಿಸ್ತರಿಸಿರುತ್ತದೆ. ಈ ಅತಿನೇರಳೆ ವಿಕಿರಣ ಸಂಪೂರ್ಣವಾಗಿ ಭೂಮಿಯ ಮೇಲ್ಮೈ ಪ್ರವೇಶಿಸಿದಲ್ಲಿ ಜೀವರಾಶಿಗಳಿಗೆ ಹಾನಿ ಕಟ್ಟಿಟ್ಟ ಬುತ್ತಿ. ಈ ವಿಕಿರಣಗಳಿಗೆ ಅತಿಯಾಗಿ ಒಡ್ಡಿಕೊಳ್ಳುವುದರಿಂದ ಕಣ್ಣಿನ ಪೊರೆ, ದೇಹದ ಪ್ರತಿರಕ್ಷಣಾ ವ್ಯವಸೆಯ ಕುಸಿತ ಹಾಗೂ ಶರೀರದ ಡಿ.ಎನ್.ಎ ಗೆ ಹಾನಿಯಾಗಿ ಚರ್ಮದ ಕ್ಯಾನ್ಸರ್‌ನಂಥ ಸಮಸ್ಯೆಗಳು ಹುಟ್ಟಿಕೊಳ್ಳಬಹುದು. ಇಂಥ ಜೀವ ರಕ್ಷಕ ಓಝೋನ್ ಪದರವು ಈಚೀಚೆಗೆ ಬರಿದಾಗುತ್ತಿರುವುದು ಆತಂಕಕಾರಿ. ಇದೆಲ್ಲ ಮಾನವನ ಸ್ವಯಂ ಕೃತ ಅಪರಾಧದ ಫಲಶೃತಿ ಎಂದರೆ ತಪ್ಪಲ್ಲ.

ಭೂಮಿಯ ಹವಾಮಾನ ವ್ಯವಸ್ಥೆಯ ಸರಾಸರಿ ತಾಪಮಾನದಲ್ಲಿನ ನಿರಂತರ ಹೆಚ್ಚಳವೇ 'ಜಾಗತಿಕ ತಾಪಮಾನ ಏರಿಕೆ'(ಗ್ಲೋಬಲ್ ವಾರ್ಮಿಂಗ್). 20 ನೇ ಶತಮಾನದ ಆರಂಭದಿಂದ ಜಾಗತಿಕ ತಾಪಮಾನ ಸುಮಾರು 0.8 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಿದೆ. ಮಾನವ ಚಟುವಟಿಕೆಗಳಿಂದಾಗಿ ಉತ್ಪತ್ತಿಯಾಗುವ ಹಸಿರುಮನೆ ಅನಿಲಗಳ ಸಾಂದ್ರತೆ ಹೆಚ್ಚುತ್ತಿರುವುದು, ಕೈಗಾರಿಕಾ ಹೊರಸೂಸಿಕೆಗಳು, ಮಿತಿಮೀರಿದ ಅರಣ್ಯ ನಾಶ, ಪರ್ವತ ಪ್ರದೇಶಗಳಲ್ಲಿ ಹಿಮ–ಮಂಜುಗಡ್ಡೆ ಕರಗುತ್ತಿರುವುದು ಜಾಗತಿಕ ತಾಪಮಾನ ಏರಿಕೆಗೆ ಪ್ರಮುಖ ಕಾರಣಗಳು. ಗಂಗಾ, ಬ್ರಹ್ಮಪುತ್ರಾ ನದಿಗಳಲ್ಲಿ ಕೆಲವೊಮ್ಮೆ ದಿಢೀರ್ ಪ್ರವಾಹ ಉಕ್ಕುವುದಕ್ಕೂ ಉಷ್ಣತೆ0ುಲ್ಲಿನ ಏರುಪೇರೇ ಕಾರಣ.

ಜಾಗತಿಕ ತಾಪಮಾನ ಏರಿಕೆಗೆ ಅರಣ್ಯ ನಾಶವೂ ಪ್ರಮುಖ ಕಾರಣಗಳಲ್ಲೊಂದು. ಭಾರತದಲ್ಲಿನ ಅರಣ್ಯ ಪ್ರಮಾಣ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ದೇಶದ ಹಲವೆಡೆ ಅರಣ್ಯ ಒತ್ತುವರಿ ನಡೆಯುತ್ತಲೇ ಇದೆ. ಉದ್ಯಾನ ನಗರಿ ಎಂದೇ ದೇಶ ವಿದೇಶಗಳಲ್ಲಿ ಗುರುತಿಸಿಕೊಂಡಿರುವ ನಮ್ಮ ಬೆಂಗಳೂರು ಇಂದು ಕಾಂಕ್ರೀಟ್ ಕಾಡಾಗಿ ಬದಲಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ನಿತ್ಯ ಮರಗಳನ್ನು ಕಡಿಯಲಾಗುತ್ತಿದೆ.





ಭಾರತದಲ್ಲಿ ವಾಯುಮಾಲಿನ್ಯವೂ ಒಂದು ಗಂಭೀರ ಸಮಸ್ಯೆ. ಕಟ್ಟಿಗೆ ಒಲೆ, ಕಳಪೆ ಇಂಧನ ಬಳಕೆ, ವಾಹನಗಳ ಹೊಗೆ ಇವು ಪ್ರಮುಖ ಕಾರಣಗಳು. ಚೀನಾ– ಅಮೇರಿಕಾ ನಂತರ ಭಾರತವೇ ವಾಯುಮಾಲಿನ್ಯದಲ್ಲಿ ಮೂರನೇ ಸ್ಥಾನದಲ್ಲಿದೆ. 2013 ರ ವರದಿಯೊಂದರ ಪ್ರಕಾರ ಯುರೋಪ್ ದೇಶಗಳ ಜನರಿಗಿಂತ ಭಾರತೀಯರಲ್ಲಿ ಶ್ವಾಸಕೋಶ ಸಂಬಂಧಿ ತೊಂದರೆ ಪ್ರಮಾಣ ಶೇ. 30 ರಷ್ಟು ಹೆಚ್ಚು.

ಇದಕ್ಕಾಗಿ ಪ್ರತಿವರ್ಷ ಜೂನ್–5 ರಂದು 'ವಿಶ್ವ ಪರಿಸರ ದಿನ' ಆಚರಿಸಲಾಗುತ್ತಿದೆ. ನಮ್ಮ ಪರಿಸರವನ್ನು ಉಳಿಸುವಲ್ಲಿ ಸಮಾಜ ಮತ್ತು ಸರ್ಕಾರದ ಜವಾಬ್ದಾರಿ ಪ್ರಮುಖವಾದದ್ದು. ಪರಿಸರಕ್ಕೆ ಸಂಬಂಧಿಸಿ ವರ್ಷದಲ್ಲಿ 28 ದಿನಗಳನ್ನು ಮೀಸಲಿಡಲಾಗಿದೆ. ಆದರೆ ಇವುಗಳ ಆಚರಣೆ ಸರಿಯಾಗಿ ಆಗುತ್ತಿಲ್ಲ. ಈ ದಿನಗಳ ಆಶಯ ಸಾಕಾರಗೊಳಿಸುವ ಕೆಲಸ ಆಗಬೇಕಿದೆ.

ನಮ್ಮ ಪರಿಸರ ಉಳಿಸುವ ಕಾರ್ಯದಲ್ಲಿ ವಿದ್ಯಾರ್ಥಿಗಳನ್ನು ಹಾಗು ಯುವಜನತೆ0ುನ್ನು ಹೆಚ್ಚಾಗಿ ತೊಡಗಿಸಿಕೊಳ್ಳಬೇಕಿದೆ. ಪ್ರಾಥಮಿಕ ಶಿಕ್ಷಣದ ಹಂತದಲ್ಲೇ ಪರಿಸರ ಮತ್ತು ಜೀವ ಸಂಕುಲದ ಬಗ್ಗೆ ಅರಿವು ಮೂಡಿಸಬೇಕಿದೆ. ಈ ನಿಟ್ಟಿನಲ್ಲಿ ಶಿಕ್ಷಕರು ಹಾಗು ಪಾಲಕರು ಸಹಕರಿಸಬೇಕಿದೆ. ಈ ನಿಟ್ಟಿನಲ್ಲಿ ಜನಸಾಮಾನ್ಯರಾದ ನಾವು ಮಾಡಬಹುದಾದ ಕೆಲ ಕರ್ತವ್ಯಗಳು ಇಂತಿವೆ–

- ನಮಗೆ ಸಾಧ್ಯವಾದಷ್ಟು ಸಸಿ ನೆಟ್ಟು ಅವುಗಳನ್ನು ಬೆಳೆಸೋಣ.
- ಮರ ಮತ್ತು ಕಾಗದದ ಉತ್ಪನ್ನಗಳ ಬಳಕೆ0ು ಮೇಲೆ ನಿಯಂತ್ರಣವಿಡೋಣ.
- ಸಾವಯವ ವಿಧಾನದ ಮೂಲಕ ಬೆಳೆಸಲಾದ ತರಕಾರಿ ಬಳಸಿ ರಸಗೊಬ್ಬರದಿಂದಾಗುವ ಮಾಲಿನ್ಯ ತಗ್ಗಿಸೋಣ.



- ಅನವಶ್ಯಕವಾಗಿ ಸ್ವಂತ ವಾಹನ ಬಳಸದೇ ಸಾರ್ವಜನಿಕ ವಾಹನ ಬಳಸೋಣ. ಇಂದಿನ ಮಕ್ಕಳು ಶಾಲಾ–ಕಾಲೇಜಿಗೆ ಹೋಗಲು ಮೋಟರ್ ಸೈಕಲ್ ಬದಲು ಸೈಕಲ್ ಬಳಸಿದರೆ ಅವರ ಆರೋಗ್ಯವನ್ನು ಕಾಪಾಡಿಕೊಂಡು ಮಾಲಿನ್ಯವನ್ನೂ ತಡೆಯಬಹುದು. ಚೀನಾದಂತಹ ಶ್ರೀಮಂತ ದೇಶದಲ್ಲೂ ವಾಯುಮಾಲಿನ್ಯ ತಡೆಯಲು ಸೈಕಲ್ ಬಳಸುವುದನ್ನು ನಮ್ಮ ಭಾರತೀಯರು ಮಾಧ್ಯಮಗಳಲ್ಲಿ ನೋಡಿ ಎರಡು ಮಾತನಾಡಿ ಮರೆತುಬಿಡುತ್ತಾರೆ. ವಾಸ್ತವವೆಂದರೆ ನಮ್ಮಲ್ಲಿ ಇಂದು ಸೈಕಲ್‌ಗಳು ನೋಡಲೂ ದುರ್ಲಭವಾಗಿವೆ.
- ಬಳಸಿ ಎಸೆಯುವ ವಸ್ತುಗಳಾದ ಪ್ಲಾಸ್ಟಿಕ್ ತಟ್ಟೆ, ಲೋಟ, ಪೆನ್ನು, ಚೀಲಗಳ ಬದಲಿಗೆ ದೀರ್ಘ ಕಾಲ ಬಾಳಿಕೆ ಬರುವ ಪರ್ಯಾಯ ಉತ್ಪನ್ನಗಳಿಗೆ ಆದ್ಯತೆ ನೀಡೋಣ.
- ಅನವಶ್ಯಕವಾಗಿ ಟಿವಿ, ಫ್ರಿಜ್, ಎಸಿ ಬಳಸಬೇಡಿ ಇವುಗಳಿಂದ ಹಸಿರುಮನೆ ಅನಿಲಗಳ ಪ್ರಮಾಣ ಹೆಚ್ಚುತ್ತದೆ.
- ಕೈಗಾರಿಕೆಗಳ ಸ್ಥಾಪನೆಗೆ ಸೂಕ್ತ ಸ್ಥಳ ಮತ್ತು ಅದರಿಂದ ಉತ್ಪನ್ನವಾದ ಮಲಿನಗಳ ಸುರಕ್ಷಿತ ವಿಸರ್ಜನೆ ಮಾಡುವುದು.
- ಕೈಗಾರಿಕೆ ಮತ್ತು ವಾಹನಗಳಿಗೆ ಕಡಿಮೆ ಮಲಿನಕಾರಕ ಇಂಧನಗಳನ್ನು ಬಳಸಬೇಕು ಹಾಗು ವಾಹನಗಳ ಇಂಜಿನ್ ಅನ್ನು ಉತ್ತಮ ಸ್ಥಿತಿಯಲ್ಲಿಡಬೇಕು.
- ಪತ್ರಿಕೆಗಳಲ್ಲಿ ಪರಿಸರ ಸಮಸ್ಯೆ ಕುರಿತು ನಿಯಮಿತ ಲೇಖನಗಳು, ದೂರದರ್ಶನದಲ್ಲಿ ಪ್ರಭಾವಶಾಲಿ ಕಾರ್ಯಕ್ರಮಗಳು ತುಂಬಾ ಸಹಾಯಕಾರಿ.
- ಶಾಲಾ–ಕಾಲೇಜು ಶಿಕ್ಷಣದಲ್ಲಿ ವಾತಾವರಣದ ಅಧ್ಯಯನವನ್ನೂ ಸೇರಿಸಬೇಕು ಹಾಗು ಅವುಗಳ ಕುರಿತು ಚಿತ್ರಕಲೆ, ಪ್ರಬಂಧ ಮುಂತಾದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು.

ನಮ್ಮ ಸಂಸ್ಕೃತಿ ಭಾರತದ ಪರಿಸರ ಸಂರಕ್ಷಣಾ ಸಂಪ್ರದಾಯಗಳಾದ ನದಿ–ಸಮುದ್ರ–ಬೆಟ್ಟ–ಅರಣ್ಯ–ಪ್ರಾಣಿ ಇತ್ಯಾದಿಗಳಿಗೆ ಧಾರ್ಮಿಕ ಸ್ಥಾನಮಾನ ನೀಡಿ ಸಂರಕ್ಷಣೆಗೆ ಒತ್ತು ನೀಡಿದೆ. ದೇವಸ್ಥಾನಗಳ ಮುಂದೆ ಕೆರೆ ನಿರ್ಮಾಣ, ನದಿ–ಪರ್ವತಗಳನ್ನು ದೇವರ ಹೆಸರಿನಿಂದ ಗುರ್ತಿಸಿ ಪೂಜಿಸುವುದು, ಹುಲಿ ಹಾವು ಇತ್ಯಾದಿ ಪ್ರಾಣಿಗಳನ್ನು ಪೂಜಿಸಿ ರಕ್ಷಿಸುವುದು ಇವು ನಮ್ಮ ಸಂಪ್ರದಾಯ ಮತ್ತು ಸಾಂಸ್ಕೃತಿಕ ಸಂರಕ್ಷಣಾ ಮನೋಭಾವನೆಗೆ ನಿದರ್ಶನಗಳಾಗಿವೆ. ಮಕ್ಕಳಿಗೆ ಇವುಗಳ ಮಹತ್ವವನ್ನು ತಿಳಿಸುವುದು ಅಗತ್ಯವಾಗಿದೆ.

ನಮ್ಮ ಮುಂದಿನ ಪೀಳಿಗೆಗಾಗಿ ಅರಣ್ಯ–ಜಲ–ಇಂಧನಗಳಂತಹ ಪ್ರಾಕೃತಿಕ ಸಂಪನ್ಮೂಲಗಳನ್ನು ಕಾಪಾಡಬೇಕಿದೆ. ನಮ್ಮ ಮಕ್ಕಳಿಗೆ ಮಲಿನವಾದಂತಹ ನೆಲ–ಜಲ–ವಾಯುವನ್ನು ನಾವು ಉಳಿಸಿ ಹೋದರೆ ಹೇಗೆ? ಮಾನವ ಜಾತಿಯ ಹಾಗೆಯೇ ಈ ಭೂಮಿಯಲ್ಲಿರುವ ಇತರೆಲ್ಲಾ ಸಸ್ಯ–ಪ್ರಾಣಿಗಳಿಗೂ ಬದುಕುವ ಹಕ್ಕಿದೆ. 'ನಾವೂ ಬದುಕೋಣ ಇತರ ಜೀವಿಗಳನ್ನೂ ಬದುಕಲು ಬಿಡೋಣ' ಎಂಬುದು ಮಾನವ ಬದುಕಿನ ತತ್ವವಾಗಬೇಕು.





# ಚಿನ್ನದ ನಾಡಲ್ಲಿ ಯಶಸ್ವಿಯಾದ ಬೃಹತ್ ಉದ್ಯೋಗ ಮೇಳ

ಎಸ್. ಆರ್. ರಾಕೇಶ್ ಕೋಲಾರ

**'ಉದ್ಯೋಗಂ ಪುರುಷ ಲಕ್ಷಣಂ' ಎಂಬುವುದು ಹಳೆಯ ಮಾತು. ಬದಲಾದ ಕಾಲಘಟ್ಟದಲ್ಲಿ ಉದ್ಯೋಗ ಪ್ರತಿಯೊಬ್ಬರಿಗೂ ಅವಶ್ಯಕ. ಎಲ್ಲರಿಗೂ ಅವರ ಅರ್ಹತೆಗೆ ತಕ್ಕಂತೆ ಉದ್ಯೋಗಗಳನ್ನು ಕಲ್ಪಿಸಬೇಕೆಂಬ ಹಿತ ದೃಷ್ಟಿಯಿಂದ ಸರ್ಕಾರವು ಉದ್ಯೋಗ ಮೇಳಗಳನ್ನು ಆಯೋಜಿಸುತ್ತಿದೆ. ಕೋಲಾರ ಜಿಲ್ಲೆಯಲ್ಲಿ ಏಪ್ರಿಲ್ 21 ಮತ್ತು 22 ರಂದು ಉದ್ಯೋಗ ಮೇಳವನ್ನು ನಡೆಸಲಾಯಿತು. ಕೋಲಾರ ಶ್ರೀನಿವಾಸಪುರ ರಸ್ತೆಯಲ್ಲಿರುವ ಸಿ.ಬೈರೇಗೌಡ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಎರಡು ದಿನಗಳ ಉದ್ಯೋಗ ಮೇಳದಲ್ಲಿ ಶೇ.50 ರಷ್ಟು ಮಂದಿ ಅಭ್ಯರ್ಥಿಗಳಿಗೆ ಉದ್ಯೋಗ ಕಲ್ಪಿಸಿ ಕೊಡುವ ಮೂಲಕ ಉದ್ಯೋಗ ಮೇಳ ಯಶಸ್ವಿಯಾಯಿತು.**

ಕೋಲಾರ ಜಿಲ್ಲಾಡಳಿತ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಹಾಗೂ ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ ಕೋಲಾರ ಬೃಹತ್ ಉದ್ಯೋಗ ಮೇಳವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಕೆ.ಆರ್.ರಮೇಶ್ ಕುಮಾರ್ ಮತ್ತು ಕೈಗಾರಿಕಾ ಸಚಿವರಾದ ಆರ್.ವಿ.ದೇಶಪಾಂಡೆ ಅವರು ಉದ್ಘಾಟಿಸಿದರು.

ವ್ಯವಸ್ಥಿತವಾಗಿ ನಡೆದ ಈ ಉದ್ಯೋಗ ಮೇಳದಲ್ಲಿ ಸುಮಾರು 13 ಸಾವಿರಕ್ಕೂ ಹೆಚ್ಚು ಮಂದಿ ಉದ್ಯೋಗಾಕಾಂಕ್ಷಿಗಳು ಹಾಗೂ 130 ಕ್ಕೂ ಅಧಿಕ ಕಂಪನಿಗಳು ಭಾಗವಹಿಸಿದ್ದವು. ಉದ್ಯೋಗ ಮೇಳದ ಸುವರ್ಣ ಅವಕಾಶವನ್ನು ಒಟ್ಟು 5,415 ಮಂದಿ ಉದ್ಯೋಗಾಕಾಂಕ್ಷಿಗಳು ಸದುಪಯೋಗ ಪಡಿಸಿಕೊಂಡರು.

ಉದ್ಯೋಗ ಮೇಳದಲ್ಲಿ ಒಟ್ಟು 614 ಮಂದಿಗೆ ಸ್ಥಳದಲ್ಲೇ ಉದ್ಯೋಗ ಆದೇಶ ಪತ್ರವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಕೆ.ಆರ್.ರಮೇಶ್ ಕುಮಾರ್ ಮತ್ತು



ಜಿಲ್ಲಾಧಿಕಾರಿ ಡಾ.ಕೆ.ವಿ.ತ್ರಿಲೋಕ್ ಚಂದ್ರ ಅವರು ವಿತರಿಸಿದರು. ಉದ್ಯೋಗ ಮೇಳದಲ್ಲಿ ಸುಮಾರು 4,801 ಮಂದಿಯನ್ನು ಉದ್ಯೋಗಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು.

ಉದ್ಯೋಗ ಮೇಳದ ಮೊದಲ ದಿನ 8500 ಮಂದಿ ಅಭ್ಯರ್ಥಿಗಳು ಸಂದರ್ಶನಲ್ಲಿ ಪಾಲ್ಗೊಂಡಿದ್ದರು. ಅದರಲ್ಲಿ 319 ಮಂದಿಗೆ ಸ್ಥಳದಲ್ಲೇ ಉದ್ಯೋಗ ಆದೇಶ ಪತ್ರವನ್ನು ವಿತರಿಸಿದರೆ, ಸುಮಾರು 3,242 ಮಂದಿಯನ್ನು ಉದ್ಯೋಗಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು.

ಎರಡನೇ ದಿನ ಸುಮಾರು 2735 ಮಂದಿ ಅಭ್ಯರ್ಥಿಗಳು ಸಂದರ್ಶನದಲ್ಲಿ ಪಾಲ್ಗೊಂಡಿದ್ದು ಈ ಪೈಕಿ 295 ಮಂದಿಗೆ ಸ್ಥಳದಲ್ಲೇ ಉದ್ಯೋಗ ಆದೇಶವನ್ನು ಪತ್ರವನ್ನು ವಿತರಿಸಿದರೆ, ಸುಮಾರು 1,264 ಮಂದಿಯನ್ನು ಉದ್ಯೋಗಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು.

ಉದ್ಯೋಗ ಮೇಳವು ಸೂಕ್ತವಾಗಿ ನಡೆಯಬೇಕು. ಯಾವುದೇ ರೀತಿಯ ಅಡಚಣೆಗಳು ಎದುರಾಗಬಾರದೆಂಬ ಉದ್ದೇಶದಿಂದ ಬಿಗಿ ಪೊಲೀಸ್ ಭದ್ರತೆಯನ್ನು ಒದಗಿಸಲಾಗಿತ್ತು. ಉದ್ಯೋಗಾಕಾಂಕ್ಷಿಗಳಿಗೆ ಮಾತ್ರ ಒಳಗೆ ಪ್ರವೇಶವನ್ನು ಕಲ್ಪಿಸಲಾಗಿತ್ತು.

ಉದ್ಯೋಗ ಮೇಳದ ಉದ್ಘಾಟನಾ ಸಮಾರಂಭಕ್ಕೆ ಆಹ್ವಾನಿತರು, ಅಧಿಕಾರಿಗಳು, ವಾಲೆಂಟರಿಗಳನ್ನು, ಸಿಬಿಐಟಿ ಸ್ಟ್ಯಾಫ್ ಮಾತ್ರ ಒಳಗೆ ಪ್ರವೇಶ ಮಾಡಬಹುದಾಗಿತ್ತು. ಇವರಿಗೂ ಸಹ ಗುರುತಿನ ಚೀಟಿಯನ್ನು ನೀಡಲಾಗಿತ್ತು. ಉದ್ಯೋಗ ಮೇಳಕ್ಕೆ ನೋಡಲ್ ಅಧಿಕಾರಿಗಳು ಹಾಗೂ ಸಮನ್ವಯ ಅಧಿಕಾರಿಗಳನ್ನು ಮಾಡಲಾಗಿದ್ದು ಅವರಿಗೆ ಸೂಕ್ತ ಕೆಲಸದ ಬಗ್ಗೆ ಜವಾಬ್ದಾರಿಗಳನ್ನು ವಹಿಸಲಾಗಿತ್ತು.

### 10 ಸಾವಿರಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳ ನೋಂದಣಿ :

ಉದ್ಯೋಗ ಮೇಳಕ್ಕೆ ಸುಮಾರು 10,221 ಮಂದಿ ನೋಂದಾಯಿಸಿಕೊಂಡಿದ್ದರು. ಆ ಪೈಕಿ 7,625 ಮಂದಿ ಯುವಕರು, 2,563 ಮಂದಿ ಯುವತಿಯರು ಆಗಿದ್ದರು. ಅದರಲ್ಲಿ ಮೊಬೈಲ್ ಆ್ಯಪ್ ಮೂಲಕ 2,034 ಮಂದಿ ಮತ್ತು ವೆಬ್‌ಸೈಟ್ ಮೂಲಕ 8,187 ಮಂದಿ ಉದ್ಯೋಗಾಕಾಂಕ್ಷಿಗಳು ನೋಂದಣಿ ಮಾಡಿಕೊಂಡಿದ್ದರು.

ಅದರಂತೆ ಕೋಲಾರ ತಾಲ್ಲೂಕಿನಲ್ಲಿ ಸುಮಾರು 3,495 ಮಂದಿ, ಬಂಗಾರಪೇಟೆಯಲ್ಲಿ ಸುಮಾರು 2,427 ಮಂದಿ, ಮುಳಬಾಗಿಲಿನಲ್ಲಿ ಸುಮಾರು 1,147 ಮಂದಿ, ಮಾಲೂರಿನಲ್ಲಿ ಸುಮಾರು 695 ಮಂದಿ, ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಸುಮಾರು 1,027 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಇತರೆ ಜಿಲ್ಲೆಗಳವರು ಸುಮಾರು 1,312 ಮಂದಿ ನೋಂದಣಿ ಮಾಡಿಕೊಂಡಿದ್ದರು. ಈ ಅಂಕಿ ಅಂಶಗಳ ಪ್ರಕಾರ ಕೋಲಾರ ತಾಲ್ಲೂಕಿನಲ್ಲಿ ಹೆಚ್ಚು ಹಾಗೂ ಮಾಲೂರು ತಾಲ್ಲೂಕಿನಲ್ಲಿ ಕಡಿಮೆ ಮಂದಿ ನೋಂದಾಯಿಸಿಕೊಂಡಿದ್ದರು.



**ಉದ್ಯೋಗ ಮೇಳದಲ್ಲಿ ಒಟ್ಟು 614 ಮಂದಿಗೆ ಸ್ಥಳದಲ್ಲೇ ಉದ್ಯೋಗ ಆದೇಶ ಪತ್ರವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ಕೆ.ಆರ್.ರಮೇಶ್ ಕುಮಾರ್ ಮತ್ತು ಜಿಲ್ಲಾಧಿಕಾರಿ ಡಾ.ಕೆ.ವಿ.ತ್ರಿಲೋಕ್ ಚಂದ್ರ ಅವರು ವಿತರಿಸಿದರು. ಉದ್ಯೋಗ ಮೇಳದಲ್ಲಿ ಸುಮಾರು 4,801 ಮಂದಿಯನ್ನು ಉದ್ಯೋಗಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು.**




### 130 ಕ್ಕೂ ಅಧಿಕ ಕಂಪನಿಗಳು:

ಉದ್ಯೋಗ ಮೇಳದಲ್ಲಿ ಭಾಗವಹಿಸಲು ಕೇವಲ ಉದ್ಯೋಗಾಕಾಂಕ್ಷಿಗಳು ಮಾತ್ರವೇ ಅಲ್ಲದೆ ಈಗಾಗಲೇ 130 ಕ್ಕೂ ಅಧಿಕ ಕಂಪನಿಗಳು ನೋಂದಾಯಿಸಿಕೊಂಡಿದ್ದವು. ಇವುಗಳಲ್ಲಿ ಸುಮಾರು 8 ಸಾವಿರಕ್ಕೂ ಅಧಿಕ ಉದ್ಯೋಗಿಗಳಿಗೆ ಬೇಡಿಕೆ ಇತ್ತು. ಇದಕ್ಕೆ ಸಂಬಂಧಿಸಿದಂತೆ ಜಿಲ್ಲಾಡಳಿತ ಸಾಕಷ್ಟು ತಯಾರಿಯನ್ನು ನಡೆಸಿತ್ತು. ಈ ಉದ್ಯೋಗ ಮೇಳವನ್ನು ಸರ್ಕಾರದಿಂದ ಉಚಿತವಾಗಿ ಆಯೋಜಿಸಿದ್ದು ಅಭ್ಯರ್ಥಿಗಳು ಮಧ್ಯವರ್ತಿಗಳನ್ನು ಸಂಪರ್ಕಿಸಬಾರದು ಎಂದು ಸೂಚಿಸಲಾಗಿತ್ತು.

> ಕೋಲಾರ ಜಿಲ್ಲೆಯು ಸತತ ಬರಗಾಲವನ್ನು ಎದುರಿಸುತ್ತಿದೆ. ಅಂತರ್ಜಲ ಪಾತಾಳ ಸೇರಿದ್ದು ಕೃಷಿಯನ್ನು ನಂಬಿ ಜೀವನ ಮಾಡುವುದು ಕಷ್ಟವಾಗಿದೆ. ಹಾಗಾಗಿ ಯುವಕರಿಗೆ ಉದ್ಯೋಗಗಳನ್ನು ಒದಗಿಸಲು ಕೈಗಾರಿಕೆಗಳು ಜಿಲ್ಲೆಗೆ ಹೆಚ್ಚಾಗಿ ಬರಬೇಕಾಗಿದೆ. ಜೊತೆಗೆ ಈ ಕೈಗಾರಿಕೆಗಳು ಜಿಲ್ಲೆಯ ನಿರುದ್ಯೋಗಿ ಯುವಕ–ಯುವತಿಯರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಡಬೇಕು.
>
> **– ಕೆ. ಹೆಚ್. ಮುನಿಯಪ್ಪ,**
> ಲೋಕಸಭಾ ಸದಸ್ಯರು



**ಕೋಲಾರ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ಆರ್. ರಮೇಶ್ ಕುಮಾರ್ ಅವರ ಭಾಷಣದ ಮುಖ್ಯಾಂಶಗಳು:**

- ಬದಲಾದ ಕಾಲಘಟ್ಟದಲ್ಲಿ ನಾವಿದ್ದೇವೆ. ಶಿಕ್ಷಣ ಸುಲಭವಾಗಿ ಲಭ್ಯವಾಗುತ್ತಿದೆ. ಶಿಕ್ಷಣವನ್ನು ಪಡೆದವರಿಗೆ ಸೂಕ್ತ ಉದ್ಯೋಗಗಳನ್ನು ಕಲ್ಪಿಸಿಕೊಡುವುದು ಸರ್ಕಾರದ ಜವಾಬ್ದಾರಿಯಾಗಿದೆ. ಇದಕ್ಕಾಗಿ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಉದ್ಯೋಗ ಮೇಳಗಳನ್ನು ಆಯೋಜಿಸಲಾಗುತ್ತಿದೆ.
- ಕೋಲಾರ ಜಿಲ್ಲೆಯ ಜನತೆ ಸಾಕಷ್ಟು ಮೃದು ಸ್ವಭಾವದವರು. ವೃತ್ತಿ ಶಿಕ್ಷಣ ಪಡೆದಿರುವ ವಿದ್ಯಾರ್ಥಿಗಳು ಹೆಚ್ಚಾಗಿದ್ದಾರೆ. ನಮ್ಮ ಮಕ್ಕಳಲ್ಲಿ ಬುದ್ಧಿ ಶಕ್ತಿ ಇದೆ. ಆದರೆ ಕೌಶಲ್ಯ ಇಲ್ಲ. ಕಂಪನಿಗಳು ಸಹನೆಯಿಂದ ಉದ್ಯೋಗಕ್ಕೆ ಆಯ್ಕೆ ಮಾಡಿಕೊಂಡರೆ ಅವರು ಉತ್ತಮವಾಗಿ ಕೆಲಸ ಮಾಡುತ್ತಾರೆ.
- ಉದ್ಯೋಗಾಕಾಂಕ್ಷಿಗಳಿಗೆ ಕಂಪನಿಗಳು ಉದ್ಯೋಗ ಕಲ್ಪಿಸಿಕೊಡಿ. ಸಮಾರಂಭದಲ್ಲಿ ಬೆಳಗಿದ ದೀಪ ಅವರ ಮನೆಯಲ್ಲಿ ಪ್ರಜ್ವಲಿಸಲಿ. ಆಯ್ಕೆಯಾದವರಿಗೆ ಸ್ಥಳದಲ್ಲೇ ಉದ್ಯೋಗ ಆದೇಶ ಪತ್ರವನ್ನು ವಿತರಿಸಿ.
- ಉದ್ಯೋಗ ಮೇಳ ರಾಜಕೀಯ ಪ್ರೇರಿತವಲ್ಲ. ಇದೊಂದು ಕಾಳಜಿ ಪ್ರೇರಿತ. ಎಲ್ಲರಿಗೂ ಉದ್ಯೋಗ ಲಭಿಸಿ ಸ್ವಾವಲಂಬಿ ಜೀವನ ನಡೆಸುವಂತಾಗಲಿ.

**ಉದ್ಯೋಗ ಮೇಳಕ್ಕೆ ಸುಮಾರು 10,221 ಮಂದಿ ನೋಂದಾಯಿಸಿಕೊಂಡಿದ್ದರು. ಆ ಪೈಕಿ 7,625 ಮಂದಿ ಯುವಕರು, 2,563 ಮಂದಿ ಯುವತಿಯರು ಆಗಿದ್ದರು. ಅದರಲ್ಲಿ ಮೊಬೈಲ್ ಆ್ಯಪ್ ಮೂಲಕ 2,034 ಮಂದಿ ಮತ್ತು ವೆಬ್‌ಸೈಟ್ ಮೂಲಕ 8,187 ಮಂದಿ ಉದ್ಯೋಗಾಕಾಂಕ್ಷಿಗಳು ನೋಂದಣಿ ಮಾಡಿಕೊಂಡಿದ್ದರು.**

**ಸ್ಥಳದಲ್ಲಿ ನೋಂದಣಿಗೆ ಅವಕಾಶ:**

ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಲು ನೋಂದಣಿ ಮಾಡಿಕೊಳ್ಳದೇ ಇರುವವರು ಸ್ಥಳದಲ್ಲೇ ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. ಏ.22 ರಂದು ಸುಮಾರು 3 ಸಾವಿರಕ್ಕೂ ಅಧಿಕ ಮಂದಿ ಸ್ಥಳದಲ್ಲಿ ನೋಂದಾಯಿಸಿಕೊಂಡರು. ಇವರಿಗೆ ಏ.23 ರಂದು ಸಂದರ್ಶನಕ್ಕೆ ಹೋಗಲು ಅವಕಾಶ ಮಾಡಿಕೊಡಲಾಯಿತು.

**ಯಾರಿಗೆ ಉದ್ಯೋಗಾವಕಾಶಗಳು:**

ಕೋಲಾರ ಉದ್ಯೋಗ ಮೇಳದಲ್ಲಿ ಟೆಕ್ನಿಕಲ್ ಮತ್ತು ನಾನ್ ಟೆಕ್ನಿಕಲ್ ಹುದ್ದೆಗಳು ಅವಶ್ಯಕವಾಗಿದೆ. ಬಿ.ಇ, ಇತರೆ ಪದವಿ, ಡಿಪ್ಲೊಮಾ, ಐಟಿಐ, ನರ್ಸಿಂಗ್, ಪಿಯುಸಿ, ಜಿ.ಟಿ.ಟಿ.ಸಿ, ಎಸ್.ಎಸ್.ಎಲ್.ಸಿ ಹಾಗೂ ಇತರೆ ವಿದ್ಯಾಭ್ಯಾಸ ಹೊಂದಿದ ಅಭ್ಯರ್ಥಿಗಳಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಲಾಗಿತ್ತು. ಈ ಎಲ್ಲಾ ಅಭ್ಯರ್ಥಿಗಳು ಸಹ ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದರು. ಸುಮಾರು 150 ಕ್ಕೂ ಹೆಚ್ಚು ಕಂಪನಿಗಳು ಮೇಳದಲ್ಲಿ ಭಾಗವಹಿಸಿದ್ದವು.

**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಸಚಿವರಾದ ಆರ್.ವಿ.ದೇಶಪಾಂಡೆ ಅವರು ಭಾಷಣದ ಮುಖ್ಯಾಂಶಗಳು:**

- ಕೈಗಾರಿಕೆಗಳ ಸ್ಥಾಪನೆಗೆ ಭೂಮಿ ನೀಡುವ ರೈತ ಕುಟುಂಬಕ್ಕೆ ಒಂದು ಉದ್ಯೋಗವನ್ನು ಕಡ್ಡಾಯವಾಗಿ ನೀಡಬೇಕು. ಅಷ್ಟೇ ಅಲ್ಲದೆ ಸ್ಥಳೀಯರಿಗೆ ಉದ್ಯೋಗದಲ್ಲಿ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಿಕೊಡಬೇಕು.
- ಯುವಕ–ಯುವತಿಯರು ಭಾರತ ದೇಶದ ಆಸ್ತಿ. ಇವರಿಗೆ ಉದ್ಯೋಗ ದೊರಕಿಸಿ ಕೊಡಬೇಕಾದುದು ನಮ್ಮೆಲ್ಲರ ಕರ್ತವ್ಯ. ಇದಕ್ಕಾಗಿ ಕೈಗಾರಿಕೆಗಳಿಗೆ ಆದ್ಯತೆ ನೀಡಲಾಗಿದೆ.
- ಶಿಕ್ಷಣ ಪಡೆದ ಮೇಲೆ ಉದ್ಯೋಗಗಳು ಸೃಷ್ಟಿಯಾಗಲೇ ಬೇಕು. ಹಾಗಾಗಿ ಜನತೆ ಕೈಗಾರಿಕೆಗಳನ್ನು ಸ್ವಾಗತಿಸಬೇಕು. ಅದೇ ರೀತಿಯಾಗಿ ಕೈಗಾರಿಕೆಗಳೂ ಸಹ ಅರ್ಹ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಬೇಕು. ಅದರಲ್ಲಿಯೂ ಕೋಲಾರದಂತಹ ಬರಗಾಲ ಜಿಲ್ಲೆಯಲ್ಲಿ ಹೆಚ್ಚಿನ ಕಂಪನಿಗಳು ಬರಬೇಕಾದುದು ಅವಶ್ಯಕ.
- ಮುಂದಿನ 2025 ಕ್ಕೆ ಭಾರತವು ವಿಶ್ವದಲ್ಲೇ ಅತಿ ಹೆಚ್ಚು ಯುವಕರನ್ನು ಹೊಂದಿರುವ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಈ ಯುವಕರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಡಬೇಕಾದುದು ಸರ್ಕಾರದ ಜವಾಬ್ದಾರಿ. ಹಾಗಾಗಿ ಯುವಕರಿಗೆ ಸರ್ಕಾರವು ಕೌಶಲ್ಯ ಅಭಿವೃದ್ಧಿಯನ್ನು ಪಡಿಸಲು ಕ್ರಮವಹಿಸಿದೆ.

ಬರಪೀಡಿತ ಕೋಲಾರ ಜಿಲ್ಲೆಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿದ್ದಾರೆ. ಅವರ ಅರ್ಹತೆಗಳಿಗೆ ತಕ್ಕಂತೆ ಉದ್ಯೋಗಗಳನ್ನು ಕಲ್ಪಿಸಿಕೊಡಲು ಉದ್ಯೋಗ ಮೇಳವನ್ನು ನಡೆಸಲಾಯಿತು. ಈ ಉದ್ಯೋಗ ಮೇಳವು ಯಶಸ್ವಿಯಾಗಿದ್ದು ಶೇ.50 ಕ್ಕೂ ಹೆಚ್ಚು ಮಂದಿ ಉದ್ಯೋಗ ಮೇಳದ ಸುವರ್ಣ ಅವಕಾಶವನ್ನು ಸದುಪಯೋಗ ಪಡಿಸಿಕೊಂಡರು.

**– ಡಾ. ಕೆ. ವಿ. ತ್ರಿಲೋಕ್ ಚಂದ್ರ**
ಕೋಲಾರ ಜಿಲ್ಲಾಧಿಕಾರಿ

**ಪ್ರತಿ 10 ನಿಮಿಷಕ್ಕೊಂದು ಬಸ್:**

ಕೋಲಾರ ಉದ್ಯೋಗ ಮೇಳಕ್ಕೆ ಆಗಮಿಸುವ ಉದ್ಯೋಗಾಕಾಂಕ್ಷಿಗಳ ಸಂಚಾರಕ್ಕೆ ಯಾವುದೇ ರೀತಿಯ ಸಮಸ್ಯೆ ಎದುರಾಗಬಾರದೆಂಬ ಉದ್ದೇಶದಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದೊಂದಿಗೆ ಚರ್ಚಿಸಿ ಬಸ್‌ಗಳ ವ್ಯವಸ್ಥೆಯನ್ನು ಮಾಡಲಾಗಿತ್ತು. ಅದರಂತೆ ಉದ್ಯೋಗ ಮೇಳದ ಎರಡೂ ದಿನಗಳ ಕಾಲ ಪ್ರತಿ 10 ನಿಮಿಷಕ್ಕೊಂದು ಬಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು.

ತಾಲ್ಲೂಕು ಕೇಂದ್ರಗಳಿಂದ ಹೆಚ್ಚುವರಿಯಾಗಿ 2 ಬಸ್‌ಗಳನ್ನು ಮೀಸಲಿರಿಸಲಾಗಿತ್ತು. ಕೋಲಾರದಿಂದ ಸಿಬಿಐಟಿವರೆಗೆ ನಗರ ಸಾರಿಗೆ ವ್ಯವಸ್ಥೆ ಮಾಡುವ ಮೂಲಕ ಉದ್ಯೋಗಾಕಾಂಕ್ಷಿಗಳ ಸಂಚಾರಕ್ಕೆ ಸುಗಮ ವ್ಯವಸ್ಥೆ ಮಾಡಲಾಗಿತ್ತು. ಉದ್ಯೋಗ ಮೇಳಕ್ಕೆ ಆಗಮಿಸಲು ಎರಡೂ ದಿನ ಬೆಳಗ್ಗೆ 9 ಗಂಟೆಯಿಂದ 6.30 ಗಂಟೆಯವರೆಗೆ ಬಸ್‌ಗಳು ಇದ್ದವು. ಅದೇ ರೀತಿ ನಿರ್ಗಮನಕ್ಕೆ ಬೆಳಗ್ಗೆ 9.30 ರಿಂದ ಪ್ರತಿ 10 ನಿಮಿಷಕ್ಕೊಂದರಂತೆ ಸಂಜೆ 7 ಗಂಟೆಯವರೆಗೆ ಬಸ್ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಉದ್ಯೋಗಾಕಾಂಕ್ಷಿಗಳು ಈ ಸೇವೆಯನ್ನು ಸದುಪಯೋಗ ಪಡಿಸಿಕೊಂಡರು.

**ಮೃದು ಕೌಶಲ್ಯ ಅಭಿವೃದ್ಧಿ ತರಬೇತಿ:**

ಉದ್ಯೋಗ ಪಡೆಯಲು ಉದ್ಯೋಗಾಕಾಂಕ್ಷಿಗಳಿಗೆ ಸೂಕ್ತವಾದ ವಿದ್ಯಾರ್ಹತೆ ಎಷ್ಟು ಮುಖ್ಯ. ಅದೇ ರೀತಿ ಸಂದರ್ಶನದಲ್ಲಿ ಪಾಲ್ಗೊಳ್ಳಲು ಕೌಶಲ್ಯವೂ ಅಷ್ಟೇ ಮುಖ್ಯ. ಅದಕ್ಕಾಗಿ ಜಿಲ್ಲಾಡಳಿತವು ಜಿಲ್ಲೆಯ ಪ್ರತಿ ತಾಲ್ಲೂಕುಗಳಲ್ಲಿ ಏ.12 ರಿಂದ 18 ರವರೆಗೆ ಮೃದು ಕೌಶಲ್ಯ ಅಭಿವೃದ್ಧಿಗಾಗಿ ಒಂದು ದಿನದ ಕಾರ್ಯಾಗಾರವನ್ನು ನಡೆಸಲಾಗಿತ್ತು. ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳು ಸಂದರ್ಶನಗಳಲ್ಲಿ ಪಾಲ್ಗೊಳ್ಳಲು ಏನೆಲ್ಲಾ ಕೌಶಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂಬ ಕುರಿತು ತರಬೇತಿ ನೀಡಲಾಗಿದೆ.

**ರೋಡ್ ಷೋ:**

ಜಿಲ್ಲಾಡಳಿತ, ಸಚಿವರುಗಳು, ಶಾಸಕರುಗಳು, ಸಂಸದರು, ಜನಪ್ರತಿನಿಧಿಗಳು ಕಂಪನಿಗಳೊಂದಿಗೆ ಬೆಂಗಳೂರಿನ ಬ್ಲೂ ಏಟ್ರಿಯಾ ಹೋಟೆಲ್‌ನಲ್ಲಿ ರೋಡ್ ಷೋ ಮತ್ತು ಪೂರ್ವಭಾವಿ ಸಭೆಯನ್ನು ನಡೆಸಿದ್ದರು. ಅದರಂತೆ ಹೆಚ್ಚಿನ ಕಂಪನಿಗಳು ಕೋಲಾರ ಬೃಹತ್ ಉದ್ಯೋಗ ಮೇಳದಲ್ಲಿ ಭಾಗವಹಿಸುವುದೇ ಅಲ್ಲದೆ ಅರ್ಹರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಿಕೊಡಬೇಕೆಂದು ಸೂಚಿಸಲಾಗಿತ್ತು.

**ಹೆಚ್ಚಿನ ಪ್ರಚಾರ:**

ಉದ್ಯೋಗ ಮೇಳದ ಕುರಿತು ಹೆಚ್ಚಿನ ಪ್ರಚಾರವನ್ನು ನಡೆಸಲಾಗಿತ್ತು. ಮೊಬೈಲ್ ಆ್ಯಪ್ ಮತ್ತು ವೆಬ್‌ಸೈಟ್‌ಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ನೋಂದಣಿಗೆ ಅವಕಾಶವನ್ನು ಕಲ್ಪಿಸಲಾಗಿತ್ತು. ಪ್ರಚಾರ ಫಲಕಗಳನ್ನು ಅಳವಡಿಸುವ ಮೂಲಕ ಪ್ರಚಾರ ನೀಡಲಾಗಿದೆ.



# ಗ್ರಾಮೀಣ ಅಭಿವೃದ್ಧಿಯ ಉತ್ತಮ ಮಾದರಿ...

ಎಸ್ ಸಿ ದೇವರಮನಿ

'ಚರಕ' ರಾಷ್ಟ್ರೀಯತೆ, ಸ್ವಾವಲಂಬನೆ ಹಾಗೂ ಗುಡಿ ಕೈಗಾರಿಕೆಗಳ ಸಂಕೇತವೆಂಬುವುದು ಗಾಂಧೀಜಿಯವರ ಅಭಿಮತವಾಗಿತ್ತು. ಅರ್ಥವ್ಯವಸ್ಥೆಯ ವಿಕೇಂದ್ರೀಕರಣ, ಶೋಷಣೆರಹಿತ ಶ್ರಮ ಸಂಸ್ಕೃತಿ, ಸಮಾನತೆಯ ನಿರ್ಮಾಣ, ಪರಿಸರಸ್ನೇಹಿ ಅಭಿವೃದ್ಧಿ, ಗ್ರಾಮಗಳ ಪುನರ್‌ನಿರ್ಮಾಣ, ಸ್ವಾವಲಂಬನೆ, ಕೆಳವರ್ಗದವರ ಅಭಿವೃದ್ಧಿ, ಸಮಸ್ತ ಮನುಕುಲದ ಕಲ್ಯಾಣವನ್ನು ಸರ್ವೋದಯದ ಪರಿಧಿಯಲ್ಲಿ ಗಾಂಧೀಜಿಯವರು ವಿವರಿಸಿದ್ದರು. ಈ ಅಂಶಗಳನ್ನು ಪ್ರಸ್ತುತ ಪಡಿಸುತ್ತ ಸ್ವದೇಶಿಯತೆಯನ್ನು ಹುಟ್ಟುಹಾಕಿದ್ದರು, ಸ್ವಾತಂತ್ರ್ಯಾನಂತರದಲ್ಲೂ ಅವರ ಆಶಯಗಳನ್ನು ಮುಂದಿಟ್ಟುಕೊಂಡು ಅನೇಕ ಸಂಘ–ಸಂಸ್ಥೆಗಳು ಕಾರ್ಯನಿರತವಾಗಿವೆ. ಅವುಗಳಲ್ಲಿ ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ ನಿ. (ಚರಕ), ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಭೀಮನಕೋಣೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕ ಸರ್ಕಾರವು ಗ್ರಾಮೀಣ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣದ ಉತ್ತಮ ಕಾರ್ಯವನ್ನು ಗುರುತಿಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು 2016–17 ನೆ ಸಾಲಿನ 'ಕಿತ್ತೂರ ರಾಣಿ ಚೆನ್ನಮ್ಮ' ಪ್ರಶಸ್ತಿಗೆ ಆಯ್ಕೆಮಾಡಲಾಯಿತು. ಪ್ರಶಸ್ತಿಯನ್ನು ಸನ್ಮಾನ್ಯ ಮುಖ್ಯಮಂತ್ರಿ ಸಿದ್ಧರಾಮಯ್ಯನವರು 08.03.2017 ಮಹಿಳಾ ದಿನಾಚರಣೆಯಂದು ಬೆಂಗಳೂರಿನಲ್ಲಿ ಪ್ರದಾನ ಮಾಡಿದರು.



### ಪ್ರಸನ್ನರವರ ದೂರದೃಷ್ಟಿ:

ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಲ್ಲಿ ಕಾರ್ಯನಿರತ ಪ್ರಸಿದ್ಧ ರಂಗಕರ್ಮಿ, ಲೇಖಕ ಪ್ರಸನ್ನ ಅವರು ಗಾಂಧೀಜಿಯವರ ಆಶಯದಂತೆ ಗ್ರಾಮಾಭಿವೃದ್ಧಿಯ ಕುರಿತು ಚಿಂತನೆ ಮಾಡಿ, ನಗರ ಜೀವನ ತೊರೆದು ಹೆಗ್ಗೋಡಿಗೆ ಬಂದು ನೆಲೆಸಿದರು. ದೇಸಿ ಸಂಸ್ಕೃತಿಗೆ ಮಾರುಹೋದರು. ಸಾಹಿತ್ಯ ಹಾಗೂ ಸಂಸ್ಕೃತಿಯ ಉಳಿವು ಹಾಗೂ ಅಭಿವೃದ್ಧಿಗಾಗಿ 'ಕವಿಕಾವ್ಯ' ಟ್ರಸ್ಟ್‌ನ್ನು ಸ್ಥಾಪಿಸಿದರು. ಈ ಸಂಸ್ಥೆಯ ಅಡಿಯಲ್ಲಿ ಗ್ರಾಮೀಣ ಜನಪದ ಕಲೆಯಾದ ಚಿತ್ತಾರ ಹಾಗೂ ದೇಸಿ ಆಹಾರಪದ್ಧತಿಗೆ ಪ್ರೋತ್ಸಾಹ ನೀಡಿದರು.

ಗ್ರಾಮೀಣ ಮಹಿಳೆಯರಿಗೆ ನೇಯ್ಗೆ ಹಾಗೂ ಹೊಲಿಗೆಯ ಉದ್ಯೋಗ ಪ್ರಾರಂಭಿಸಿದರು. ಉತ್ಪಾದನೆಯಾದ ವಸ್ತುಗಳನ್ನು ನಗರ ಪ್ರದೇಶಗಳಲ್ಲಿ ನಡೆಯುವ ಸಾಂಸ್ಕೃತಿಕ ಹಾಗೂ ಸಾಹಿತ್ಯ ಸಮಾವೇಶಗಳಲ್ಲಿ ಮಾರಾಟದ ಜವಾಬ್ದಾರಿಯನ್ನು ನಿಭಾಯಿಸಿದರು. ತದನಂತರ ಅಕ್ಟೋಬರ್ 1996 ರಲ್ಲಿ ಚರಕ ಮಹಿಳಾ ವಿವಿಧೋದ್ದೇಶ ಔದ್ಯೋಗಿಕ ಸಹಕಾರಿ ಸಂಘವನ್ನು ನೊಂದಣಿ ಮಾಡಿಸಿದರು. ವ್ಯವಸ್ಥಿತವಾದ ಮಾರುಕಟ್ಟೆ ಒದಗಿಸುವ ದಿಸೆಯಲ್ಲಿ 1999ರ ಸೆಪ್ಟಂಬರ್‌ನಲ್ಲಿ ದೇಸಿ ಟ್ರಸ್ಟ್‌ನ್ನು ಹುಟ್ಟುಹಾಕಿದರು. ಗ್ರಾಮೀಣ ಜನರಿಗೆ ತರಬೇತಿ ನೀಡಲು ಶ್ರಮಜೀವಿ ಆಶ್ರಮವನ್ನು ಹುಟ್ಟುಹಾಕಿದರು.

### ಸಣ್ಣದ್ದೆಲ್ಲ ಸುಂದರ:

ಒಂದು ಚಿಕ್ಕ ಕೊಠಡಿಯಲ್ಲಿ 13 ಜನ ಮಹಿಳೆಯರೊಂದಿಗೆ ಪ್ರಾರಂಭವಾದ ಚರಕ ಸಂಸ್ಥೆ. ಇಂದು 600ಕ್ಕೂ ಹೆಚ್ಚು ಮಹಿಳೆಯರು ಕೈಮಗ್ಗ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸುಸ್ಥಿರವಾಗಿ ಬದುಕುತ್ತಿದ್ದಾರೆ. ತನ್ನದೇ ಆದ ಬಣ್ಣದಮನೆ, ನೇಯ್ಗೆ, ಹೊಲಿಗೆ, ಕಸೂತಿ, ಕೈ ಅಚ್ಚು, ಚಿತ್ತಾರ, ವಿನ್ಯಾಸ ಹೀಗೆ ವಿವಿಧ ವಿಭಾಗಗಳು ಒಂದೇ ಸೂರಿನಡಿಯಲ್ಲಿ ಕಾರ್ಯನಿರತವಾಗಿವೆ. ಚರಕ ತನ್ನದೇ ಆದ ಶ್ರಮಜೀವಿ ಆಶ್ರಮವನ್ನು ಗ್ರಾಮೀಣ ಜನರ ತರಬೇತಿಗಾಗಿ ಗಾಂಧೀ ಆಶ್ರಮದ ಮಾದರಿಯಲ್ಲಿ ನಡೆಸಿಕೊಂಡು ಬರುತ್ತಿದೆ. ಹೆಗ್ಗೋಡು ಪರಿಸರದ ಹಳ್ಳಿಗಳಲ್ಲಿ ಉತ್ಪಾದನಾ ಘಟಕಗಳನ್ನು ಸ್ಥಾಪಿಸಿದೆ. ಬೆಳಗ್ಗೆ ಒಟ್ಟಾಗಿ ಸೇರಿ ಪ್ರಾರ್ಥನೆ ಮಾಡುತ್ತಾರೆ. ನಂತರ ಕಾಯಕ ಪ್ರಾರಂಭಿಸುತ್ತಾರೆ. ಒಟ್ಟಾಗಿ ಟಿ/ಕಷಾಯ ಕುಡಿಯುತ್ತಾರೆ ಒಟ್ಟಾಗಿ ಊಟಮಾಡುತ್ತಾರೆ. ವರ್ಷಕ್ಕೊಮ್ಮೆ ಚರಕ ಉತ್ಸವ ಆಯೋಜಿಸಿ, ತಮ್ಮಲ್ಲಿ ಹುದುಗಿರುವ ಸಾಂಸ್ಕೃತಿಕ ಪ್ರತಿಭೆಯನ್ನು ಹೊರಹಾಕಿ ಹರ್ಷಪಡುತ್ತಾರೆ. ಹೃದಯದಾಳದಿಂದ ಹೊರಹೊಮ್ಮುವ ಭಾವನೆಗಳನ್ನು ಅಕ್ಷರ ರೂಪದಲ್ಲಿ ಹೊರತರಲು ಪ್ರತಿ ಮಾಹೆ 'ಚಿಗುರು' ಪತ್ರಿಕೆಯನ್ನು ಪ್ರಕಟಿಸುತ್ತಾರೆ. ಮಹಿಳೆಯರೇ ಸಂಸ್ಥೆಯ ಆಡಳಿತದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಿದ್ದಾರೆ. ಚುನಾಯಿತ ನಿರ್ದೇಶಕರ ಆಡಳಿತಮಂಡಳಿ ಪ್ರತಿ ತಿಂಗಳು 25 ರಂದು ಸಭೆಸೇರಿ ಕುಂದು ಕೊರತೆಗಳಿಗೆ ಸಮಾಧಾನ ಕಂಡು ಕೊಳ್ಳುತ್ತದೆ.

### ಅಭಿವೃದ್ಧಿಗೆ ಸಹಕಾರವೇ ಹೆಬ್ಬಾಗಿಲು:

ಮಾನವ ಮೂಲಭೂತವಾಗಿ ಸಂಘಜೀವಿ ಪರಸ್ಪರ ಸಹಾಯ ಸಹಕಾರವಿಲ್ಲದೆ ಬಾಳುವುದು ಅಸಾಧ್ಯ, ಚರಕದಲ್ಲಿ ಸಹಕಾರವೆಂದರೆ ಸ್ವಸಹಾಯ, ಒಟ್ಟಾಗಿ ಚಿಂತನೆ ಮಾಡುವುದು, ಒಟ್ಟಾಗಿ ದುಡಿಯುವುದಾಗಿದೆ. ಲಭ್ಯವಿರುವ ಸಾಧನ



ಸಾಮಗ್ರಿಗಳನ್ನು ಒಟ್ಟಾಗಿ ಬಳಸಿ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಯನ್ನು ಹೊಂದುವುದಾಗಿದೆ. ಇಲ್ಲಿ ಶೋಷಣಾರಹಿತ ಬಾಳನ್ನು ಬದುಕುತ್ತಿದ್ದಾರೆ. ಒಗ್ಗಟ್ಟಿನಲ್ಲಿ ಅದಮ್ಯ ಶಕ್ತಿ ಇದೆ ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ.
ಗಾಂಧೀಜಿಯವರು ಹೇಳಿದಂತೆ "ಭಾರತದ ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು" ಎಂಬುದುನ್ನು ನಿಜವಾಗಿಸಿದ್ದಾರೆ. ಸಹಕಾರ ತತ್ವದಿಂದ ಮಹಿಳೆಯರ ಮಾನಸಿಕ ಸ್ಥೈರ್ಯ ಹೆಚ್ಚಿದೆ. ಅವರೆಲ್ಲ ಸಬಲರಾಗಿದ್ದಾರೆ ಸ್ವಾಯತ್ತತೆ ಹಾಗೂ ಸ್ವಾತಂತ್ರ್ಯ ಚರಕದ ವಿಶೇಷತೆ. ಅದು ಅಲ್ಲದೆ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುವುದು ಈ ಚಿಕ್ಕ ಹಾಗೂ ಸುಂದರವಾದ ಸಂಸ್ಥೆಯ ಹೆಗ್ಗಳಿಕೆಯಾಗಿದೆ.

### ಕೈಮಗ್ಗ ಬಟ್ಟೆನೇಯ್ಗೆಯ ಮುಂಚೂಣಿ:

ಚರಕ ಪ್ರತಿ ತಿಂಗಳು 20,000 ಮೀಟರನಷ್ಟು ನೈಸರ್ಗಿಕ ಬಣ್ಣದ ಕೈಮಗ್ಗ ಬಟ್ಟೆಯನ್ನು ನೇಯ್ಗೆ ಮಾಡಿ ಅದನ್ನು ಬಳಸಿ ವಿವಿಧ ಬಗೆಯ ಸಿದ್ಧ ಉಡುಪುಗಳನ್ನು ತಯಾರಿಸಿ ಗ್ರಾಹಕರಿಗೆ ಒದಗಿಸುತ್ತಿದೆ. ಈ ಕೈಮಗ್ಗದ ಉಡುಪುಗಳು 'ದೀರ್ಘಬಾಳಿಕೆ, ವಿಭಿನ್ನ ವಿನ್ಯಾಸ ಹಾಗೂ ವಿಶಿಷ್ಟತೆಯಿಂದ ಕೂಡಿದ್ದು, ಜುಬ್ಬಾ, ಪೈಜಾಮ, ಕೋಟು, ಚೂಡಿದಾರ್, ಟಾಪ್ಸ್, ಕೌದಿ, ಫೈಲು,







ಬನಿಯನ್, ಬೆಡ್‌ಶೀಟ್, ಬ್ಯಾಗು ಮುಂತಾದ 159ಕ್ಕೂ ಹೆಚ್ಚಿನ ವಸ್ತುಗಳನ್ನು ಉತ್ಪಾದಿಸುತ್ತದೆ. ವಸ್ತುಗಳ ಮಾರಾಟಕ್ಕಾಗಿ ಹೆಗ್ಗೋಡು, ಹುಲಿದೇವರಬನ ಹಾಗೂ ಸಾಗರದಲ್ಲಿ ಅಂಗಡಿಗಳನ್ನು ಹೊಂದಿದೆ.

**ನೈಸರ್ಗಿಕ ಬಣ್ಣಗಾರಿಕೆ:**

ನಿಸರ್ಗದತ್ತ ಅಡಿಕೆಚೊಗರು, ಅಳಲೆಕಾಯಿ, ದಾಳಿಂಬೆ ಸಿಪ್ಪೆ, ಇಂಡಿಗೋ, ನೀಲಗಿರಿ ಎಲೆ ರಂಗಮಾಲೆ ಬೀಜ ಮುಂತಾದವನ್ನು ಬಣ್ಣಗಾರಿಕೆಗೆ ಬಳಸಲಾಗುತ್ತದೆ. ಹೀಗಾಗಿ, ಚರಕದ ಸಿದ್ಧಉಡುಪುಗಳು ಸಂಪೂರ್ಣವಾಗಿ ಪರಿಸರ ಸ್ನೇಹಿಯಾಗಿವೆ. ಚರಕದಲ್ಲಿ ಸ್ತ್ರೀಯರು ಕೂಡ ಬಣ್ಣಮಾಡುತ್ತಾರೆ. ಹೊಸ ನಿಸರ್ಗದತ್ತ ಬಣ್ಣಗಳನ್ನು ಶೋಧಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ.

**ಪರಿಸರ ಪ್ರೇಮ:**

ಚರಕದಲ್ಲಿ ಹೆಂಚಿನ ಮನೆಗಳಿವೆ. ಮಳೆ ನೀರನ್ನು ಸಂಗ್ರಹಿಸಿ ಬಳಕೆಮಾಡಲಾಗುತ್ತಿದೆ. ಸೋಲಾರ್ ವಿದ್ಯುತ್ತನ್ನು ಬಳಸಲಾಗುತ್ತಿದೆ. ಪರಿಸರವನ್ನು ಕಾಪಾಡುವಲ್ಲಿ ಕೂಡ ಸಂಸ್ಥೆ ಮುಂಚೂಣಿಯಲ್ಲಿದೆ. ಯಾವುದೇ ವಿದ್ಯುತ್ ಚಾಲಿತ ಯಂತ್ರಗಳ ಬಳಕೆಯಿಲ್ಲ.

**ಮಾರುಕಟ್ಟೆ ಹಾಗೂ ಸಬಲತೆ:**

ಚರಕ ಸಂಸ್ಥೆಯ ಸಹೋದರಿ ಸಂಸ್ಥೆಯಾದ ದೇಸಿ ಉತ್ಪಾದನೆಯಾದ ವಸ್ತುಗಳಿಗೆ ಮಾರುಕಟ್ಟೆ ಒದಗಿಸುತ್ತದೆ. ಬೆಂಗಳೂರು, ಮೈಸೂರು, ಧಾರವಾಡ, ಶಿವಮೊಗ್ಗ, ಸಿದ್ಧಾಪುರ, ಮಂಗಳೂರು ಹಾಗೂ ಬೆಳಗಾವಿಗಳಲ್ಲಿ ದೇಸಿ ಅಂಗಡಿಗಳ ಮುಖಾಂತರ ಉತ್ತಮ ಮಾರಾಟ ಮಾಡಲಾಗುತ್ತಿದೆ. ಇಂದಿನ ಜಾಗತೀಕರಣ, ಖಾಸಗೀಕರಣ ಹಾಗೂ ಉದಾರೀಕರಣಗಳ ನಡುವೆ ನಲುಗುತ್ತಿರುವ ಗುಡಿ ಕೈಗಾರಿಕೆಗಳಿಗೆ ಒತ್ತಾಸೆಯಾಗಿ ಚರಕ ಹಾಗೂ ದೇಸಿ ಸಂಸ್ಥೆಗಳು. ಕಾರ್ಯನಿರ್ವಹಿಸುತ್ತಿವೆ. ನೇಕಾರರು ಸಂತೃಪ್ತಿಯಿಂದ ಸರಳವಾಗಿ ಬಾಳುವಂತೆ ಅವಕಾಶ






ಮಾಡಿಕೊಡಲಾಗಿವೆ. ಚರಕದ ಉತ್ಪಾದನೆ 2005–06ರಲ್ಲಿ 41 ಲಕ್ಷವಿದ್ದದ್ದು, 2016–17 ರಲ್ಲಿ 425 ಲಕ್ಷಕ್ಕೆ ಅಂದರೆ ಶೇಕಡ 90 ಪ್ರತಿಶತವಾಗಿದೆ ಬೆಳವಣಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ನೇಕಾರರ ಸಾಂದ್ರತೆ ಇರುವ ಗದಗ, ಗಜೇಂದ್ರಗಡ, ಮಹಾಲಿಂಗಪುರ, ಕೆರೂರುಗಳಿಗೆ, ಬಣ್ಣಮಾಡಿದ ನೂಲನ್ನು ಒದಗಿಸಿ ನೇಯ್ಗೆಮಾಡಿದ ಬಟ್ಟೆಯನ್ನು ಕೊಂಡುಕೊಳ್ಳುತ್ತಿದೆ. ಇದರಿಂದಾಗಿ 700ಕ್ಕೂ ಹೆಚ್ಚಿನ ಜನರ ಜೀವನಾಧಾರವಾಗಿದೆ.

**ಶ್ರಮಜೀವಿಗಳಿಗೆ ಪ್ರೋತ್ಸಾಹ:**

ಕೆಲಸ ಮಾಡುವ ಪ್ರತಿಯೊಬ್ಬರಿಗೂ ಅವರವರ ಉತ್ಪಾದನಾ ಗಳಿಕೆಗೆ ಅನುಸಾರವಾಗಿ ಬೋನಸ್ ಕೂಡ ನೀಡುವುದು. ತಾಂತ್ರಿಕ, ವಿನ್ಯಾಸ ಹಾಗೂ ಇನ್ನಿತರ ಸೇವೆಯನ್ನು ಒದಗಿಸುತ್ತದೆ. ದುಡಿಮೆಗೆ ಅನುಕೂಲವಾಗುವಂತೆ ಚರಕದ ಶ್ರಮಜೀವಿಗಳಿಗೆ ರಿಯಾಯಿತಿ ದರದಲ್ಲಿ ಊಟ ಕಷಾಯ ಒದಗಿಸುವುದಲ್ಲದೆ, ದುಡಿಯುವ ಮಹಿಳೆಯರ ಅನುಕೂಲಕ್ಕಾಗಿ ಶಿಶು ವಿಹಾರವನ್ನು ಕೂಡ ನಡೆಸಿಕೊಂಡು ಬರುತ್ತಿದೆ. ಉತ್ತಮ ದುಡಿಮೆಗೆ ಪ್ರೋತ್ಸಾಹವಾಗಲು ಪ್ರತಿವರ್ಷ ಆಯ್ಕೆ ಮಾಡಿದ ಸದಸ್ಯರಿಗೆ ಕಾಯಕಪ್ರಶಸ್ತಿ ಯನ್ನು ಕೂಡ ನೀಡುತ್ತಿದೆ. ಚರಕ ಗ್ರಾಮೀಣ ಅಭಿವೃದ್ಧಿಯ ಒಂದು ಉತ್ತಮ ಮಾದರಿಯಾಗಿದೆ. ಕಾಲೇಜು ಹಾಗೂ ವ್ಯಾಪಾರಿ ಸಂಸ್ಥೆಗಳ ಅಧ್ಯಯನಕ್ಕೆ ಯೋಗ್ಯವಾಗಿದೆ.

**ಪ್ರಶಸ್ತಿಗಳು:**

ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ನಿಗಮದಿಂದ 2012–13 ರಲ್ಲಿ ಉತ್ತಮ ಸಹಕಾರ ಸಂಸ್ಥೆ ಹಾಗೂ ರಾಮಕೃಷ್ಣ ಹೆಗಡೆ ಪ್ರಶಸ್ತಿಯನ್ನು ತನ್ನದಾಗಿಸಿ ಕೊಂಡಿದೆ. 2014–15 ರಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಗಿದೆ. 2016–17 ರಲ್ಲಿ ಮುರುಘಾಶ್ರೀ, ಮಾಜಾಕೋಯ್ನೆ (ಚೆನ್ನೈ) ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಅರಸಿ ಬಂದಿವೆ.

**ಕೈಮಗ್ಗ ಬ್ರ್ಯಾಂಡ್:**

ಭಾರತ ಸರ್ಕಾರದ, ಜವಳಿ ಮಂತ್ರಾಲಯವು ಕೈಮಗ್ಗ ಬ್ರ್ಯಾಡಿನಡಿಯಲ್ಲಿ ನೊಂದಣಿ ಮಾಡಿ ರಾಷ್ಟ್ರಮಟ್ಟದಲ್ಲಿ ಗುರುತಿಸುವ ಕೆಲಸಮಾಡಿದೆ.

**ಯುವ ಶ್ರಮಜೀವಿಗಳ ಕೈಯಲ್ಲಿ ಉಜ್ವಲ ಭವಿಷ್ಯ:**


ಚರಕದಲ್ಲಿ ಕಾರ್ಯನಿರತ ಪ್ರತಿಶತ 43 ರಷ್ಟು ಮಹಿಳೆಯರು 18 ರಿಂದ 25 ವರ್ಷ ಹಾಗೂ ಪ್ರತಿಶತ 37 ರಷ್ಟು 25–35 ವಯಸ್ಸಿನಲ್ಲಿರುವುದು ಗಮನಿಸಬೇಕಾದ ವಿಷಯವಾಗಿದೆ. ಕೇವಲ ಶೇಕಡ 20 ರಷ್ಟು ಮಹಿಳೆಯರು 35ಕ್ಕೂ ಹೆಚ್ಚಿನ ವಯಸ್ಸಿನವರು ಇದ್ದಾರೆ. ಅಂದರೆ, ಯುವತಿಯರು ಹೆಚ್ಚಾಗಿರುವುದರಿಂದ ಸಾಂಪ್ರದಾಯಿಕ ಕೈಮಗ್ಗ ಕ್ಷೇತ್ರ ಅಭಿವೃದ್ಧಿ ಪಥದಲ್ಲಿರುವದೆಂದು ತಿಳಿದು ಬರುತ್ತದೆ. ಅವರೆಲ್ಲ ಶ್ರಮಸಹಿತ ಜೀವನಮಾಡುತ್ತ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸಬಲರಾಗಿದ್ದಾರೆ. ಗಾಂಧೀಜಿಯವರ ಆಶಯದ ಬದುಕನ್ನು ಬದುಕುತ್ತಿದ್ದಾರೆ. ಕೈಮಗ್ಗ ಭವಿಷ್ಯದ ಬಟ್ಟೆಯಾಗುತ್ತದೆ ಎಂಬ ಭರವಸೆ ಚರಕದ್ದಾಗಿದೆ. ಸಾವಿರಾರು ನೇಕಾರರ ಬದುಕಿಗೆ ಕಾಯಕಲ್ಪ ನೀಡುವ ದಿಸೆಯಲ್ಲಿ ಚರಕ ಉತ್ತಮ ಕೆಲಸ ಮಾಡುತ್ತಿದೆ. ಚರಕ ಒಂದು ಉತ್ತಮ ಗ್ರಾಮೀಣ ಅಭಿವೃದ್ಧಿಯ ಪರಿಸರ ಸ್ನೇಹಿ ಮಾದರಿಯಾಗಿದೆ.

# ತಣ್ಣೀರುಬಾವಿ ಟ್ರೀಪಾರ್ಕ್ ವಿಶಿಷ್ಟ ಸಸ್ಯೋದ್ಯಾನ



**ಮಂಗಳೂರು ಮಹಾನಗರದಲ್ಲಿ ತೆಂಗು, ಹಲಸು, ಮಾವಿನ ಮರಗಳು ಯಥೇಚ್ಛವಾಗಿ ಬೆಳೆಯುತ್ತದೆ. ಪಶ್ಚಿಮಾಭಿಮುಖವಾಗಿ ಹರಿಯುವ ಫಲ್ಗುಣಿ ನದಿ (ಗುರುಪುರ ಹೊಳೆ) ಒಂದು ಪಾರ್ಶ್ವದಲ್ಲಿ ಹರಿಯುತ್ತಿದ್ದು ಇನ್ನೊಂದು ಭಾಗದಲ್ಲಿ ಅರಬ್ಬೀಸಮುದ್ರ ಕಿನಾರೆ. ಸುಂದರ ಕಡಲಕಿನಾರೆಯ ಸಾದೃಶ್ಯ 'ತಣ್ಣೀರುಬಾವಿ' ಸಸ್ಯೋದ್ಯಾನ.**

ಡಾ. ಎಸ್. ಎನ್. ಅಮೃತ ಮಲ್ಲ



ಕರ್ನಾಟಕ ಅರಣ್ಯ ಇಲಾಖೆಯು 34 ಎಕರೆ ಪ್ರದೇಶದಲ್ಲಿ ನಾಲ್ಕು ದಶಕಗಳ ಹಿಂದೆ ಎಂ.ರವಿರಾಜ ನಾರಾಯಣ್‌ರವರು ವಲಯ ಅರಣ್ಯಾಧಿಕಾರಿಯಾಗಿದ್ದ ಅವಧಿಯಲ್ಲಿ ಗಾಳಿ ಮತ್ತು ಹೊನ್ನೆ ಗಿಡಗಳನ್ನು ನೆಟ್ಟು ಪೋಷಿಸಿದ್ದು, ಪ್ರಸ್ತುತ ಕಡಲ ಕಿನಾರೆಯ ಉದ್ದಕ್ಕೂ 14 ಎಕರೆ ಪ್ರದೇಶದಲ್ಲಿ 'ಟ್ರೀಪಾರ್ಕ್' ರಚಿಸಲಾಗಿದೆ. ಈಗಾಗಲೇ ಬೆಳೆದು ಹೆಮ್ಮರವಾಗಿರುವ ನೆಡುತೋಪು ಸಮುದ್ರಕೊರೆತ ಆಗದಂತೆಯೂ ಪ್ರತಿಬಂಧಕ ಹಸಿರುಗೋಡೆಯಾಗಿದೆ.

ಬಾವಿಗೆ ಸಂದರ್ಶಿಸಲು ಮಂಗಳೂರು ಸುಲ್ತಾನಬತ್ತೇರಿಯಿಂದ ದೋಣಿಗಳು ಲಭ್ಯವಿದೆ. ನವಮಂಗಳೂರು ಬಂದರು ಬಳಿಯ ಕೂಳೂರಿನಿಂದಲೂ ಆಗಮಿಸಬಹುದಾಗಿದೆ. ಈ 'ಸಸ್ಯೋದ್ಯಾನ' ಪ್ರವಾಸಿಗರನ್ನು ಆಕರ್ಷಿಸುತ್ತಿರುವ ತಾಣವಾಗಿದೆ. ಮಕ್ಕಳಿಗೆ ಮರಗಿಡ–ಪಕ್ಷಿಗಳ, ಪ್ರಕೃತಿಯ ಅಭಿರುಚಿ ಬೆಳೆಸುವಂತೆ ಅರಣ್ಯಾಧಿಕಾರಿಗಳು 'ಟ್ರೀಪಾರ್ಕ್' ರಚಿಸಲು ರೂಪುರೇಷೆ ರೂಪಿಸಿದರು. ಮಕ್ಕಳಿಗೆ ಮಾತ್ರ ಸೀಮಿತವಾಗಿರದ ಸಸ್ಯೋದ್ಯಾನವು 'ಪರಿಸರ ಶಿಕ್ಷಣ–ಮಾಹಿತಿಕೋಶ'ವಾಗಿದೆ.

**ಔಷಧಿ ಸಸ್ಯಗಳು... ಹಣ್ಣು–ಹೂವಿನ ಮರಗಳು!**

ಔಷಧೀಯ ಗುಣಧರ್ಮವುಳ್ಳ ಅಮೃತ ಬಳ್ಳಿ, ತುಳಸಿ, ನೆಲ್ಲಿ, ಶಂಖಪುಷ್ಪ, ಕಹಿಬೇವು, ಅಶೋಕ, ಶ್ರೀಗಂಧ, ರಕ್ತಚಂದನ ಮುಂತಾದ ಗಿಡಗಳನ್ನು ಬೆಳೆಸಲಾಗಿದೆ. ಪ್ರವೇಶದ್ವಾರ ದಾಟಿದ ತಕ್ಷಣವೇ ಸಸ್ಯೋದ್ಯಾನದಲ್ಲಿ ಏನೇನೆಲ್ಲಾ ಇವೆ ಎಂಬ ಮಾಹಿತಿ ಫಲಕ ಕಾಣಸಿಗುವುದು. ಕಂಬಳ, ಭೂತಾರಾಧನೆ, ಯಕ್ಷಗಾನ, ವೃಕ್ಷರಕ್ಷಣೆ ಕುರಿತ ಕಲಾತ್ಮಕ ಶಿಲ್ಪಗಳು ಕರಾವಳಿಯ ಜನಪದ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತದೆ.

ಟ್ರೀಪಾರ್ಕ್‌ನಲ್ಲಿ ಫಲ ನೀಡುವ ಗಿಡಗಳನ್ನು ನೆಡಲಾಗಿದೆ. ಸುಮಾರು 20 ವಿವಿಧ ಜಾತಿಯ ಪಕ್ಷಿಗಳು ಕಾಣಸಿಗುತ್ತವೆಯೆಂದು ವಲಯಾರಣ್ಯಾಧಿಕಾರಿ ಪಿ.ಶ್ರೀಧರ ತಿಳಿಸುತ್ತಾರೆ. ವೀಕ್ಷಣಾ ಗೋಪುರ, ವಿಶ್ರಾಂತಿ ಆಶ್ರಯತಾಣ, ರಂಗಮಂದಿರ ನಿರ್ಮಿಸಲಾಗಿದೆ. ಮಕ್ಕಳಿಗಾಗಿ 'ಚಿಣ್ಣರ ಅಂಗಳ' ರಚಿಸಲಾಗಿದೆ. ಉಯ್ಯಾಲೆ, ತೂಗುಹಲಗೆ, ಜಾರುಬಂಡಿ, ಸಮರ್ಪಕ ಮೇಲ್ವಿಚಾರಣೆ ಮಾಡುವ ಶ್ರೀಧರರವರ ಪರಿಶ್ರಮ, ಸಹಸಿಬ್ಬಂದಿಗಳ ಸಹಕಾರ ಮೆಚ್ಚುಗೆಗೆ ಪಾತ್ರವಾಗಿದೆ. ಮಕ್ಕಳಿಗೆ ಉಪಯುಕ್ತವಾಗಿದೆ.

ಮುಖ್ಯವಾಗಿ ಪರಿಸರ–ಪ್ರಕೃತಿ–ಜೀವವೈವಿಧ್ಯ ವಿಚಾರವನ್ನು ಮಕ್ಕಳು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಅರಿತುಕೊಳ್ಳುವಂತೆ ಪ್ರೇರಣಾದಾಯಕ ವಿವರಗಳನ್ನು ಪ್ರಕಟಿಸಲಾಗಿದೆ. ಮಾಹಿತಿಕೇಂದ್ರದಲ್ಲಿ ಪ್ರಪಂಚದ ಜೀವವೈವಿಧ್ಯತೆ, ಕಡಲಜೀವವೈವಿಧ್ಯತೆ ಮತ್ತು ಪರಿಸರ ಮಾಲಿನ್ಯ ತಡೆಗಟ್ಟಲು ಕೈಗೊಳ್ಳಬೇಕಾದ ಅಗತ್ಯ ಜಾಗೃತಿ ಕಾರ್ಯಕ್ರಮಗಳ ಕುರಿತು ವಿವರಗಳಿವೆ. ಪಶ್ಚಿಮಘಟ್ಟ ಶ್ರೇಣಿಯ ವನ್ಯಪ್ರಾಣಿಗಳು, ಸಸ್ಯಜೀವರಾಶಿ, ಭಿನ್ನ ಭಿನ್ನ ಕಾಡುಗಳ ಪರಿಚಯ ದೊರೆಯುವುದು. ಜನಸಮುದಾಯ ಮತ್ತು ಪರಿಸರ ಸಂಬಂಧ ಹೇಗಿದೆ, ಹೇಗಿರಬೇಕು, ಆಪತ್ತುಗಳೇನು, ಪರಿಹಾರ ಕ್ರಮಗಳೇನು ಎಂಬ ಮಾಹಿತಿ ಪಡೆದುಕೊಳ್ಳಬಹುದಾಗಿದೆ ಎಂದು ಅರಣ್ಯ ವೃತ್ತಸಂರಕ್ಷಣಾಧಿಕಾರಿ ಸಂಜಯ ಬಿಜ್ಜೂರು ಅಭಿಪ್ರಾಯಪಡುತ್ತಾರೆ.

ಸುಂದರ ಸಿಹಿನೀರಿನ ಕೆರೆಯನ್ನು ವಲಯಾರಣ್ಯಾಧಿಕಾರಿಯಾಗಿದ್ದ ಕ್ಲಿಫರ್ಡ್ ಲೋಬೋರವರು






ನಿರ್ಮಿಸಿದ್ದು, ಈ ನೀರನ್ನು ಬಳಸಿ ಸಸ್ಯೋದ್ಯಾನದ ಗಿಡ–ಮರಗಳನ್ನು ಪೋಷಿಸಲಾಗುತ್ತಿದೆ. ಸಿಹಿನೀರಿಗಾಗಿ ಪಕ್ಷಿಗಳೂ ಬರುತ್ತಿವೆ.

ಕರ್ನಾಟಕದ ಕರಾವಳಿಯಲ್ಲಿರುವ ವಿಶಿಷ್ಟ 'ಟ್ರೀಪಾರ್ಕ್' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು, ವಿಶೇಷ ನಿಗಾವಹಿಸಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಉಪಸಂರಕ್ಷಣಾಧಿಕಾರಿ ಡಾ.ಕೆ.ಟಿ.ಹನುಮಂತಪ್ಪ ತಿಳಿಸುತ್ತಾರೆ. ಉಪಾಹಾರ ಗೃಹ, ವಿಶ್ರಾಂತಿ ಕೊಠಡಿಗಳನ್ನು ನಿರ್ಮಿಸಲಾಗಿದೆ. ನಡೆದಾಡುತ್ತಾ ಸಸ್ಯೋದ್ಯಾನದಲ್ಲಿರುವ ವಿವಿಧ ಜಾತಿಯ ಮರಗಳನ್ನು ವೀಕ್ಷಿಸಬಹುದು. ಸಂಗೀತ, ಸಾಹಿತ್ಯಗೋಷ್ಠಿ, ನಾಟಕ–ನೃತ್ಯ ಪ್ರದರ್ಶನ, ಚಿತ್ರಕಲಾ ಶಿಬಿರ, ಪರಿಸರ ಪ್ರಕೃತಿ ಮಾಹಿತಿ ಶಿಬಿರ ಏರ್ಪಡಿಸುವುದಕ್ಕೆ ಪ್ರಶಸ್ತವಾಗಿದೆ. ಮುಸ್ಸಂಜೆಯ ಸೂರ್ಯಾಸ್ತಮಾನ ವೀಕ್ಷಿಸಲು ಆಸನ ವ್ಯವಸ್ಥೆಯಿದೆ. ಸಮುದ್ರಕಿನಾರೆಯ ಮರಳಿನಲ್ಲಿ ವಾಲಿಬಾಲ್ ಆಟ ಆಡಲೂಬಹುದು. ಮನೆಮಂದಿಯೆಲ್ಲರೂ ಟ್ರೀಪಾರ್ಕ್ ಸಂದರ್ಶನದ ಬಳಿಕ ಅರಣ್ಯ ಇಲಾಖೆಯ ಯೋಜನೆಯನ್ನು ಶ್ಲಾಘಿಸುತ್ತಾರೆ. ಸ್ವಚ್ಛತೆಗೆ ಪ್ರಾಶಸ್ತ್ಯ ನೀಡಲಾಗಿದೆಯೆಂಬುದನ್ನು ಗಮನಿಸಬಹುದು.

ಕರ್ನಾಟಕ ಅರಣ್ಯ ಸಚಿವರಾದ ಬೆಳ್ಳಿಪ್ಪಾಡಿ ರಮಾನಾಥ ರೈಯವರು "ವನ್ಯಸಂಪತ್ತಿನ ರಕ್ಷಣೆಯ ಮಹತ್ವ ಮತ್ತು ಸಸ್ಯಜೀವರಾಶಿಯ ವೈಶಿಷ್ಟ್ಯತೆಯನ್ನು ಅರಿತುಕೊಳ್ಳಬೇಕೆಂಬ ಸದುದ್ದೇಶದಿಂದ 'ಟ್ರೀಪಾರ್ಕ್' ಅಭಿವೃದ್ಧಿಪಡಿಸಲಾಗಿದೆ"



**ಟ್ರೀಪಾರ್ಕ್‌ನಲ್ಲಿ ಫಲ ನೀಡುವ ಗಿಡಗಳನ್ನು ನೆಡಲಾಗಿದೆ. ಸುಮಾರು 20 ವಿವಿಧ ಜಾತಿಯ ಪಕ್ಷಿಗಳು ಕಾಣಸಿಗುತ್ತವೆ. ವೀಕ್ಷಣಾ ಗೋಪುರ, ವಿಶ್ರಾಂತಿ ಆಶ್ರಯತಾಣ, ರಂಗಮಂದಿರ ನಿರ್ಮಿಸಲಾಗಿದೆ. ಮಕ್ಕಳಿಗಾಗಿ 'ಚಿಣ್ಣರ ಅಂಗಳ' ರಚಿಸಲಾಗಿದೆ. ಉಯ್ಯಾಲೆ, ತೂಗುಹಲಗೆ, ಜಾರುಬಂಡಿ ಮಕ್ಕಳಿಗೆ ಉಪಯುಕ್ತವಾಗಿದೆ.**

ಎನ್ನುತ್ತಾ ಕರ್ನಾಟಕದ ವಿವಿಧೆಡೆ ಟ್ರೀಪಾರ್ಕ್ ರಚಿಸಲು ಯೋಜನೆ ರೂಪಿಸಲಾಗುತ್ತಿದೆಯೆಂಬ ಅಂಶವನ್ನು ಪ್ರಕಟಿಸಿರುವರು.

ಪ್ರವೇಶದರ: 5ರಿಂದ 12 ವರ್ಷದ ಮಕ್ಕಳಿಗೆ ತಲಾ 5ರೂ. ಹಾಗೂ ವಯಸ್ಕರಿಗೆ ತಲಾ 10ರೂ. ಸಮಯ: ಬೆಳಿಗ್ಗೆ 10ರಿಂದ ಸಾಯಂಕಾಲ 7ರ ತನಕ. ಸಂಪರ್ಕ: ಪಿ.ಶ್ರೀಧರ್, ವಲಯ ಅರಣ್ಯಾಧಿಕಾರಿ: 9448887973








# ಮೈಸೂರು ಬ್ಯಾಂಕ್ ಇನ್ನು ಬರೀ ನೆನಪು...

ಕೆ. ಎಸ್. ಸೋಮೇಶ್ವರ

ಹಳೆಯ ಮೈಸೂರು ಪ್ರಾಂತ್ಯವನ್ನು ಆಳಿದ ಧೀಮಂತ ಅರಸರುಗಳು ಅವರ ಸಂಸ್ಥಾನದಲ್ಲಿ ಬರಿಯ ರತ್ನ ಖಚಿತ ಸಿಂಹಾಸನದಲ್ಲಿ ಕುಳಿತು ದರ್ಬಾರು ನಡೆಸುವ ರಾಜರಾಗಿರಲಿಲ್ಲ. ಅವರಲ್ಲಿ ಪ್ರಜೆಗಳ ಹಿತ ರಕ್ಷಣೆಯ ಬಗ್ಗೆ ಅತೀವ ಕಾಳಜಿಯಿದ್ದಿತು. ಇಡೀ ರಾಜ್ಯಕ್ಕೆ ಆರ್ಥಿಕ, ಸಾಮಾಜಿಕ ಸೇರಿದಂತೆ ಸರ್ವಾಂಗೀಣ ಪ್ರಗತಿಯನ್ನು ರೂಪಿಸಿ ಆಚರಣೆಗೆ ತರುವುದೇ ಅವರ ಪ್ರಜಾ ಸೇವೆಯಾಗಿದ್ದಿತು.

ಇಂತಹ ಪ್ರಯತ್ನದಲ್ಲಿ ಮುಂಚೂಣಿಯಲ್ಲಿ ಗುರುತಿಸಿಕೊಳ್ಳಬಲ್ಲ ಮೈಸೂರು ಮಹಾರಾಜರೆಂದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ರವರು. ಇವರ ಆಶಯಗಳಿಗೆ ಪೂರಕವಾಗಿ ಕೆಲಸ ಮಾಡಿದಂತಹವರು ಅಂದಿನ ದಿವಾನರುಗಳಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ, ಸರ್ ಮಿರ್ಜಾ ಇಸ್ಮಾಯಿಲ್ ರಂತಹ ನಿಸ್ಪೃಹ, ನಿಪುಣ ಅಧಿಕಾರಿಗಳು. ಸರ್.ಎಂವಿ ಯವರ ಬಗ್ಗೆಯಂತೂ ಎಲ್ಲರಿಗೂ ತಿಳಿದಿರುವಂತಹುದೇ. ಅವರ ಇಂಜಿನಿಯರಿಂಗ್ ಕೌಶಲ ಇಡೀ ದೇಶದಲ್ಲಷ್ಟೇ ಅಲ್ಲದೇ ವಿದೇಶಗಳಲ್ಲೂ ಬಳಕೆಯಾಗಿತ್ತು.

ಇವರುಗಳು ಆಡಳಿತದ ಪ್ರಮುಖ ಪಾತ್ರ ವಹಿಸಿದ್ದ ಸಮಯದಲ್ಲಿ ಮೈಸೂರು ಸಂಸ್ಥಾನ ಸರ್ವಾಂಗೀಣ ಪ್ರಗತಿಗೆ ಪೂರಕವಾದ ವಾತಾವರಣವನ್ನು ಬೆಳೆಸಿಕೊಂಡಂತಹುದಾಗಿತ್ತು.

ನಾಲ್ವಡಿಯವರ ದೂರ ದೃಷ್ಟಿ ಅಪರಿಮಿತ. ಹೀಗಾಗಿಯೇ ಅವರನ್ನು "ರಾಜರ್ಷಿ" ಎಂದು ಕರೆಯುತ್ತಿದ್ದರು. ಆ ಸಮಯದಲ್ಲಿ ಸ್ಥಾಪಿತವಾದ ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಮಂಡ್ಯದ ಸಕ್ಕರೆ ಕಾರ್ಖಾನೆ ಕೆಲವು ಉದಾಹರಣೆಗಳು. ಅದಲ್ಲದೇ ಇಡೀ ಕಾವೇರಿ ಜಲಾನಯನ ಪ್ರದೇಶಕ್ಕೆ ಜೀವ ನಾಡಿಯಾದ ಕೃಷ್ಣರಾಜ ಸಾಗರ ಅಣೆಕಟ್ಟು ಸಹ ಇದೇ ಸಮಯದಲ್ಲಿ ರೂಪಿತಗೊಂಡಿದ್ದು. ಇಷ್ಟೇ ಅಲ್ಲದೇ ತಾಂತ್ರಿಕ ವಿದ್ಯಾ ಸಂಸ್ಥೆಗಳು ಮತ್ತು ನಾಡಿನ ಆರ್ಥಿಕ ಬೆಳವಣಿಗೆಗೆ ಪೂರಕವಾಗಬಲ್ಲ ಮೈಸೂರು ಛೇಂಬರ್ ಆಫ್ ಕಾಮರ್ಸ್ ಮತ್ತು ವಾಣಿಜ್ಯ ವಹಿವಾಟು ಬೆಳೆಯಲು ಬೇಕಾದ ಬ್ಯಾಂಕಿಂಗ್ ವ್ಯವಸ್ಥೆಯ ಸ್ಥಾಪನೆ ಇವೆಲ್ಲ ಬೆಳವಣಿಗೆಯ ದ್ಯೋತಕವಾಗಿತ್ತು.

ಅವರ ದೃಷ್ಟಿಯಲ್ಲಿ ಬೆಂಗಳೂರು ವಾಣಿಜ್ಯ ರಾಜಧಾನಿಯಾಗಿರುವುದು ಸೂಕ್ತವೆನಿಸಿತ್ತು. ಇದಕ್ಕಾಗಿಯೇ ಅವೆನ್ಯೂ ರಸ್ತೆಯ ಬಳಿ ಜನ್ಮ ತಳೆದಿದ್ದು ಅಂದಿನ 'ದಿ ಬ್ಯಾಂಕ್ ಆಫ್ ಮೈಸೂರ್' ಹಲ ಕಾಲಾ ನಂತರ ಇದರ ಪ್ರಧಾನ ಕಛೇರಿ ಸ್ಥಾಪಿತವಾಗಿದ್ದು ಇಂದಿನ ಕೆಂಪೇಗೌಡ ರಸ್ತೆಯ ಮುಖ ಭಾಗದಲ್ಲಿ. ಇದರ ಮುಂದುವರಿದ ಭಾಗವಾಗಿ ಇಲ್ಲಿರುವ ಬಹು ಮಹಡಿ ಕಟ್ಟಡ ನಗರದ ಮೊದಲ ಬಹು ಮಹಡಿ ಕಟ್ಟಡವಾಗಿದೆ. ಕಾಲ ಬದಲಾಗುತ್ತ ಬಂದಂತೆ



ನಗರದ ರೂಪು ರೇಷೆಗಳೂ ಬದಲಾಗಿ ಇದು 'ಮೈಸೂರು ಬ್ಯಾಂಕ್ ವೃತ್ತ' ಎಂದೇ ಜನ ಮಾನಸದಲ್ಲಿ ಉಳಿಯುವಂತಾಗಿದೆ.

ಈ ವೃತ್ತ ಇಂದಿನ ಬೆಂಗಳೂರಿನ ಅನೇಕಾನೇಕ ವಿಚಾರಗಳನ್ನು ಅಭಿವ್ಯಕ್ತಗೊಳಿಸಲು ಒಂದು ವೇದಿಕೆಯಂತಾಗಿದೆ. ಯಾವುದೇ ಸಾರ್ವಜನಿಕ ಸಭೆ, ಮೆರವಣಿಗೆ, ಸರಕಾರಕ್ಕೆ ಸಾಮೂಹಿಕ ಅಹವಾಲು ತಲುಪಿಸಲು ಇದು ಬಳಕೆಯಾಗುತ್ತಿದೆ. ಇದು ಲಂಡನ್ನಿನ ಹೈಡ್ ಪಾರ್ಕ್ ಗೆ ಸಮವೆನ್ನಬಹುದು. ಇಲ್ಲಿ ಪ್ರತಿಭಟನೆಯೆಂದರೆ ಅದು ಸರಕಾರಕ್ಕೆ ತಲುಪಿದಂತೆಯೇ ಸರಿ. ಇಲ್ಲಿರುವ ಮೈಸೂರು ಬ್ಯಾಂಕಿನ ಪ್ರಧಾನ ಕಛೇರಿ ಅನೇಕ ಪ್ರಮುಖ ಬ್ಯಾಂಕುಗಳು ತಮ್ಮ ಆಡಳಿತ ಕಛೇರಿಯನ್ನು ಇದೇ ರಸ್ತೆ ಅಥವ ಸುತ್ತ ಮುತ್ತಲಲ್ಲಿ ತೆರೆಯಲು ಪ್ರಚೋದಿಸಿದಂತಿದ್ದು ಇದನ್ನು 'ಬ್ಯಾಂಕರ್ಸ್ ಅವೆನ್ಯೂ' ಎಂದೂ ಕರೆಯಬಹುದು.

ಮೈಸೂರು ಬ್ಯಾಂಕ್ ಜನ್ಮ ತಳೆದಿದ್ದು 1913 ಅಕ್ಟೋಬರ 2 ರಂದು. ಆಗ ಬ್ಯಾಂಕಿನ ಸ್ಥಾಪನೆಗೆ ಬೇಕಾದ ಮೂಲ ಧನವನ್ನು ಸರಕಾರವೇ ನೀಡಿದ್ದಿತು. 1953 ರಲ್ಲಿ ಇದು ರಿಸವ್? ಬ್ಯಾಂಕಿನ ಅಧೀನಕ್ಕೆ ಒಳಪಟ್ಟು ಮೈಸೂರು ಬ್ಯಾಂಕ್ ಲಿಮಿಟೆಡ್ ಆಗಿ 1960 ರಲ್ಲಿ ಸ್ಟೇಟ್ ಬ್ಯಾಂಕಿನ ಸಹವರ್ತಿ ಬ್ಯಾಂಕಾಗಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಆಗಿ ಮರು ನಾಮಕರಣ ಗೊಂಡಿತು.

ಈ ಬ್ಯಾಂಕಿನ ಹೆಗ್ಗಳಿಕೆಯೆಂದರೆ ಇದರ 103 ವರ್ಷದ ಇತಿಹಾಸ ಪೂರ್ತಿ ಲಾಭದಲ್ಲೇ ನಡೆಯುತ್ತಿರುವುದು. ಸರ್.ಪುಟ್ಟಣ್ಣ ಚೆಟ್ಟಿಯವರು ಇದರ ಆಡಳಿತ ಮಂಡಳಿಯ ಪ್ರಥಮ ಅಧ್ಯಕ್ಷರಾಗಿದ್ದು ಅವರ ಸೇವೆ ಬ್ಯಾಂಕಿನ ರಜತ ಮಹೋತ್ಸವ ಅಂದರೆ 1938ರವರೆಗೂ ಮುಂದುವರೆದಿತ್ತು.

ಅಂದಿನ ಸರಕಾರ ಮತ್ತು ಆಡಳಿತ ಮಂಡಳಿ ಧ್ಯೇಯವೆಂದರೆ ಬ್ಯಾಂಕು ನಾಡಿನ ಆರ್ಥಿಕ ಬೆಳವಣಿಗೆಯಷ್ಟೇ ಅಲ್ಲದೇ ಸಾರ್ವಜನಿಕರೂ ಅದರ ಸದುಪಯೋಗ ಪಡೆಯಬೇಕೆನ್ನುವುದಾಗಿತ್ತು. 1938 ರಲ್ಲಿ ತನ್ನ ರಜತ ಮಹೋತ್ಸವವನ್ನು ಆಚರಿಸುವ ವೇಳೆಯಲ್ಲಿ ರಾಜ್ಯದಲ್ಲಿ ಇದರ 19 ಶಾಖೆಗಳು ನಿರ್ವಹಿಸುತ್ತಿದ್ದು ಕ್ರಮೇಣ ರಾಜ್ಯದ ಹೊರಗೆ ಅಂದರೆ ಮದ್ರಾಸ್ (ಇಂದಿನ ಚೆನ್ನೈ)ನಲ್ಲೂ ಒಂದು ಶಾಖೆ ಕಾಯಾ?ರಂಭ ಮಾಡಿತ್ತು. ನಾಲ್ವಡಿಯವರು ಬ್ಯಾಂಕಿನ ಚಟುವಟಿಕೆಗಳ ಬಗೆಗೆ ಇರಿಸಿದ ದೃಷ್ಟಿಕೋನವನ್ನು ಅದರ ಆಡಳಿತ ಮಂಡಳಿ ಸಮರ್ಥವಾಗಿ ನಿರ್ವಹಿಸುತ್ತಿತ್ತು.

**ಬ್ಯಾಂಕಿನ ಪ್ರಥಮ ಆಡಳಿತ ವರ್ಗ.**

- ರಾಜಸಭಾಭೂಷಣ ದಿವಾನ್ ಬಹದೂರ ಸರ್. ಕೆ.ಪಿ.ಪುಟ್ಟಣ್ಣ ಚೆಟ್ಟಿ, ಮೈಸೂರು ರಾಜ್ಯದ ಪರಿಷತ್ತಿನ ಮೊದಲ ಸದಸ್ಯ (ಅಧ್ಯಕ್ಷರು)
- ಈ.ಆರ್.ಸುಬ್ಬರೋಯೆರ್, ಸರಕಾರದ ಆರ್ಥಿಕ ಮುಖ್ಯಸ್ಥರು
- ಎಲ್.ಶ್ರೀನಿವಾಸ ಅಯ್ಯಂಗಾರ್, ವಕೀಲರು
- ಎಮ್.ಚೆಂಗಯ್ಯ ಚೆಟ್ಟಿ, ನಿವೃತ್ತ ಡೆಪ್ಯೂಟಿ ಕಮಿಷನರ್
- ಸಿಂಗ್ರಿ ನಂಜಪ್ಪ, ವರ್ತಕರು
- ಅಬ್ದುಲ್ ಖುದ್ದೂಸ್, ವರ್ತಕರು
- ಮಂಡಿ ಹರಿಯಣ್ಣ, ವರ್ತಕರು
- ಡಿ.ಬನುಮಯ್ಯ, ವರ್ತಕರು
- ವೈ. ನರಸಿಂಗ ರಾವ್, ಕಾರ್ಯದರ್ಶಿ

ಸರ್.ಪುಟ್ಟಣ್ಣ ಚೆಟ್ಟಿಯವರು ಆಡಳಿತ ಮಂಡಲಿಯ ಮೊದಲ ಅಧ್ಯಕ್ಷರಷ್ಟೇ ಅಲ್ಲದೇ ಅವರ ಸೇವೆ 1938ರ ವರೆಗೂ ಅಂದರೆ ಬ್ಯಾಂಕಿನ ರಜತ ಮಹೋತ್ಸವ ಆಚರಣೆಯವರೆಗೂ ದೊರೆತಿತ್ತು.

ನಾಲ್ವಡಿಯವರು ತಮ್ಮ ಒಂದು ಭಾಷಣದಲ್ಲಿ ಹೀಗೆ ಹೇಳಿದ್ದಾರೆ. 'The one and only objective: To labour his people' ಅಂದರೆ ಜನಸೇವೆಯೊಂದೇ ಅವರ ಗುರಿ ಮತ್ತೇನೂ ಇಲ್ಲ. ಇದನ್ನು ಅಕ್ಷರಶಃ ನಿಜ ಮಾಡಿದ್ದು ಅವರ ಕೆಲಸಗಳು.

ಇಂತಹ ದೂರ ದೃಷ್ಟಿ ಯ ಮೈಸೂರು ಅರಸರ ನಿರ್ಧಾರಗಳು ದೇಶದ ಇತರೆ ಸಂಸ್ಥಾನಗಳ ಮೇಲೂ ಪ್ರಭಾವ ಬೀರಿತ್ತು. ಹೀಗಾಗಿ 1917 ರಲ್ಲಿ ಪಾಟಿಯಾಲದ ರಾಜ ಭೂಪಿಂದರ್ ಸಿಂಗ್ ರವರು ಸ್ಥಾಪಿಸಿದ್ದು ಬ್ಯಾಂಕ್ ಆಫ್ ಪಟಿಯಾಲ. 1924ರಲ್ಲಿ ಹೈದರಾಬಾದ್ ನಿಜಾಮರು ಬ್ಯಾಂಕ್ ಆಫ್ ಹೈದರಾಬಾದ್ ಸ್ಥಾಪಿಸಿದರೆ 1943 ರಲ್ಲಿ ಬಂದಿದ್ದು ಬಿಕನೀರ ಮತ್ತು ಜೈಪುರ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಟ್ರಾವಂಕೂರ್. ಕಾಲ ಕ್ರಮೇಣ ಇವೆಲ್ಲ ಸ್ಟೇಟ್ ಬ್ಯಾಂಕ್ ಗುಂಪಿನ ಸಹವರ್ತಿ ಬ್ಯಾಂಕ್ ಗಳಾದವು. ಈಗ ಇವೆಲ್ಲ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯದ ಜೊತೆಗೇ ಸೇರಿ ಕೊಂಡಿವೆ.

**ಮೈಸೂರು ಬ್ಯಾಂಕಿನ ಕೆಲ ಗುರುತಿಸಬಲ್ಲ ಕೆಲಸಗಳು:**

- 1940–50 ರ ಲ್ಲೇ ವ್ಯವಸಾಯಗಾರರಿಗೆ ಸಾಲ ನೀಡುವ ನಿರ್ಧಾರ ತೆಗೆದು ಕೊಂಡ ಮೊದಲ ಬ್ಯಾಂಕ್ ಇದಾಗಿದೆ. ಆಗ ಕಾಫಿ ಬೆಳೆಗಾರರಿಗೆ ಅದರ ಸೌಲಭ್ಯ ದೊರೆಯುತ್ತಿತ್ತು. ಕಾಲಾ ನಂತರದಲ್ಲಿ ಇದು ದೇಶದ ಒಂದು ಪ್ರಮುಖ ಆರ್ಥಿಕ ನೀತಿಯಾಗಿ ಬೆಳೆಯಿತು.
- 1980 ರ ದಶಕದಲ್ಲಿ ಆರಂಭವಾದ ಕನ್ನಡ ಬಳಗ ದಲ್ಲಿ ಪ್ರಮುಖ ಪಾತ್ರ ವಹಿಸಿದವರು ಅಂದಿನ ಹಿರಿಯ ಅಧಿಕಾರಿಗಳಾಗಿದ್ದ ನವರತ್ನರಾಜು ಮತ್ತು ಹೆಚ್.ಸಿ.ಬಾಲಗೋಪಾಲ್ ಎಂಬುವರು.
- ರಕ್ತದಾನ ಶಿಬಿರಗಳನ್ನು ಆರಂಭಿಸಿದ ದೇಶದಲ್ಲೇ ಮೊದಲ ಕಾರ್ಪೊರೇಟ್ ಸಂಸ್ಥೆ ಇದಾಗಿದೆ.
- ಬೆಂಗಳೂರಿನ ಜಯನಗರದಲ್ಲಿರುವ ರಾಣಿ ಸರಳಾದೇವಿ ಶಾಲೆಯನ್ನು ಆರಂಭಿಸಿದ್ದು ಮೈಸೂರು ಬ್ಯಾಂಕಿನ ಸಾಧನೆ. ಇದರ ಚಟುವಟಿಕೆಗಳನ್ನು ಈಗಲೂ ಅಲ್ಲಿನ ಉದ್ಯೋಗಿಗಳ ಅಂಗ ಸಂಸ್ಥೆಯೇ ನೋಡಿಕೊಳ್ಳುತ್ತಿದ್ದು ಇದು ಸಂಪೂರ್ಣ ಬಾಲಕಿಯರಿಗಾಗಿಯೇ ಇರುವುದಾಗಿದೆ.
- ಬ್ಯಾಂಕಿನ ಉದ್ಯೋಗಿಗಳಲ್ಲಿ ಹಲವರು ಕ್ರೀಡೆ, ಕಲೆ ಇನ್ನಿತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಬ್ಯಾಂಕ್ ಉತ್ತೇಜನ ನೀಡುತ್ತಿದೆ. ಕ್ರಿಕೆಟನಲ್ಲಿ ರಾಜ್ಯಕ್ಕೆ ಮೊದಲ ರಣಜಿ ಪ್ರಶಸ್ತಿ ದೊರಕಿಸಿಕೊಟ್ಟ ರಾಜ್ಯ ತಂಡದ ನಾಯಕರಾಗಿದ್ದವರು ವಿಶಿಷ್ಟ ಆಟಗಾರರಾಗಿದ್ದ ವಿ.ಸುಬ್ರಮಣ್ಯಂ, ಪಿ.ಆರ್.ಅಶೋಕಾನಂದ್, ದಯಾನಂದ ಕಾಮತ್ ಇವರೆಲ್ಲ ಬ್ಯಾಂಕಿನ ಉದ್ಯೋಗಿಗಳೇ ಆಗಿದ್ದರು.
- ಪ್ರಸಿದ್ಧ ಹಾಸ್ಯ ಬರಹಗಾರ ಎಂಎಸ್.ನರಸಿಂಹ ಮೂರ್ತಿ, ಹಿರಿಯ ರಂಗ ಮತ್ತು ಕಿರು ತೆರೆ ಕಲಾವಿದ ಗುರುಮೂರ್ತಿ, ನಾಗನಾಥ (ಇವರು ಒಬ್ಬ ಸಾಹಸಿ ಚಾರಣಿಗ) ಇವರೆಲ್ಲ ಮೈಸೂರು ಬ್ಯಾಂಕಿನವರೇ.



ಮೈಸೂರು ಬ್ಯಾಂಕ್ ಎಂದರೆ ಒಂದು ರೀತಿ ನಮ್ಮದೆ ಬ್ಯಾಂಕ್ ಎಂಬಂತಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ಅಲ್ಲಿನ ಅನೇಕ ಶಾಖೆಗಳನ್ನು ಸಂಪೂರ್ಣ ಮಹಿಳಾ ಅಧಿಕಾರಿಗಳೇ ನಿಭಾಯಿಸುತ್ತಿದ್ದಾರೆ. ದಶಕಗಳ ಕಾಲ ಇಲ್ಲಿ ಕೆಲಸ ಮಾಡಿದ ಸಾವಿರಾರು ಸಿಬ್ಬಂದಿ ವರ್ಗದವರು ಹೇಳುವಂತೆ ಇದು ನಮ್ಮ ಮೈಸೂರು ಬ್ಯಾಂಕ್ ಎಂಬ ಅವಿನಾವ ಭಾವ. ಅದನ್ನು ತೊಡೆಯುವುದು ಸುಲಭ ಸಾಧ್ಯವಲ್ಲ. ಬ್ಯಾಂಕಿನ ಸಾಮಾನ್ಯ ಚಟುವಟಿಕೆಗಳೊಂದಿಗೆ ಅನೇಕಾನೇಕ ಸಾಂಸ್ಕೃತಿಕ ಚಟುವಟಿಕೆಗಳು ಅಲ್ಲಿನ ಉದ್ಯೋಗಿಗಳೇ ಅಲ್ಲದೇ ಅವರ ಕುಟುಂಬ ವರ್ಗದವರನ್ನೂ ಒಂದೆಡೆ ಸೇರಿಸುತ್ತಿತ್ತು. ಒಂದು ರೀತಿಯಲ್ಲಿ ಅವರಿಗೆ ಇದು ಎರಡನೇ ಮನೆಯಂತಾಗಿತ್ತು.

ಸಾಮಾನ್ಯ ಬ್ಯಾಂಕ್ ಗಳ ಶಾಖೆಗಳು, ಅಂಚೆ ಕಛೇರಿ ಇವೆಲ್ಲ ಆಯಾ ಪ್ರದೇಶದ ಜನರಿಗೆ ಸಂವಹನ ಕೇಂದ್ರ. ಕಾಲ ಬದಲಾದಂತೆ ಹಲವು ಆಧುನಿಕ ವ್ಯವಸ್ಥೆಯಿಂದ ಗ್ರಾಹಕರ ಸೇವೆ ಮಾಡುತ್ತಿದ್ದರೂ ಈಗಲೂ ಸಾಕಷ್ಟು ಗ್ರಾಹಕರಿಗೆ ತಾವು ಖಾತೆ ತೆರೆದಿರುವ ಬ್ಯಾಂಕಿಗೆ ಖುದ್ದಾಗಿ ಬಂದು ವ್ಯವಹರಿಸುವುದರಲ್ಲಿ ತೃಪ್ತಿ ಇದೆ. ಇದರಿಂದ ಉದ್ಯೋಗಿಗಳು ಮತ್ತು ಗ್ರಾಹಕರ ನಡುವೆ ನೇರ ಸಂವಹನೆ ಸಿಗುತ್ತದೆ.

ಬ್ಯಾಂಕಿನ 103 ವರ್ಷದ ಇತಿಹಾಸದ ಚಟುವಟಿಕೆ ಗಳನ್ನು ದಾಖಲೀಕರಿಸುವ ಪ್ರಯತ್ನದಲ್ಲಿ ಪ್ರಧಾನ ಕಛೇರಿಯ ಆವರಣದಲ್ಲಿ ಒಂದು ಸಂಗ್ರಹಾಲಯವನ್ನು ಸಿದ್ಧ ಮಾಡಲಾಗಿದೆ. ಇಲ್ಲಿ ಬ್ಯಾಂಕಿನ ಮೊದಲ ಆಯವ್ಯಯ ಪಟ್ಟಿಯ ನಕಲು ಮೊದಲಾಗಿ ಅನೇಕ ಗುರುತಿಸಬಲ್ಲ ದಾಖಲೆಗಳು ಮತ್ತು ಅಂದಿನಿಂದ ಬಳಸುತ್ತಿದ್ದ ಹಲವು ಕಛೇರಿ ಉಪಕರಣಗಳೂ ಸೇರಿವೆ. ಇವುಗಳನ್ನು ನೋಡಿದಾಗ ಮುಗಿದ ಅಧ್ಯಾಯದ ಒಂದು ಹಿನ್ನೋಟಕ್ಕೆ ನಮ್ಮನ್ನು ಕರೆದೊಯ್ಯಬಹುದು.



## ಕನ್ನಡ ಪ್ರೇಮಿ

# ಡಾ|| ಮೋಗ್ಲಿಂಗ್

ಸುರೇಶ ಗೋವಿಂದರಾವ್ ದೇಸಾಯಿ

**ಧರ್ಮ ಪ್ರಚಾರಕ್ಕೆ ಬಂದ ಮೋಗ್ಲಿಂಗ್ ಸಾಹಿತ್ಯ, ಪತ್ರಿಕೋದ್ಯಮದಲ್ಲಿ ಕನ್ನಡ ನಾಡಿಗೆ ನೀಡಿದ ಕೊಡುಗೆ ಅಪಾರ. ಕನ್ನಡ ಮನಸ್ಸುಗಳು ಅವರನ್ನು ಎಂದಿಗೂ ಮರೆಯಲಾರವು. ಹರ್ಮನ್‌ರಂತೆ ನಾವೂ ಕೂಡಾ ಸತತ ಅಧ್ಯಯನ, ಹೊಸತನದ ತುಡಿತ, ಸರಳ– ಶುದ್ಧ ಜೀವನ ಅಳವಡಿಸಿಕೊಳ್ಳಬೇಕಿದೆ.**

19ನೇ ಶತಮಾನದ ಹೊಸಗನ್ನಡ ಕಾಲಘಟ್ಟಕ್ಕೆ ಹೊಸ ಆಯಾಮಗಳು ಬಂದವು. ಹೊಸ ಶಿಕ್ಷಣದಿಂದಾಗಿ ಕನ್ನಡ ಭಾಷೆ ಮತ್ತು ರಚನೆಯಲ್ಲಿ ವೈವಿಧ್ಯತೆಗಳು ಕಾಣಿಸಿಕೊಂಡವು. ಹೊಸಗನ್ನಡದ ಗದ್ಯ ಮತ್ತು ಪದ್ಯ ಪ್ರಕಾರಕ್ಕೆ ಹೊಸ ಸೇರ್ಪಡೆಗಳಾದವು. ಕಾದಂಬರಿ, ಸಣ್ಣಕಥೆ, ಪ್ರವಾಸಕಥನ, ಜೀವನಚರಿತ್ರೆ, ನವೋದಯ ಕಾವ್ಯ ಮುಂತಾದ ಸಾಹಿತ್ಯ ಪ್ರಕಾರಗಳ ಜೊತೆಗೆ ಕನ್ನಡಕ್ಕೆ ಪತ್ರಿಕೋದ್ಯಮ ಪ್ರಕಾರವೂ ಬಂದು ಸೇರಿತು. ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಕೆಲವು ಹೊಸ ಮಾರ್ಪಾಡುಗಳನ್ನು ಮಾಡಿ ಹೊಸಗನ್ನಡದ ಕಾಲಘಟ್ಟಕ್ಕೆ ಪೀಠಿಕೆ ಹಾಕಿ ಕೊಟ್ಟವರಲ್ಲಿ "ರೆವರೆಂಡ್ ಹರ್ಮನ್ ಮೋಗ್ಲಿಂಗ್" ಕೂಡ ಒಬ್ಬರು.

ರೆವರೆಂಡ್ ಹರ್ಮನ್ ಮೋಗ್ಲಿಂಗ್ ಈತನು ಜರ್ಮನಿಯ ಹೈಮ ಗ್ರಾಮದಲ್ಲಿ 1811ನೇ ಮೇ 29ರಂದು ಜನಿಸಿದರು. ತಂದೆ ಫ್ರೆಡ್ರಿಕ್ ಮೋಗ್ಲಿಂಗ್. ತಾಯಿ ರೀಕೆ. ತಂದೆ ಶಿಕ್ಷಕರಾಗಿದ್ದರಿಂದ ಮನೆತುಂಬ ಶೈಕ್ಷಣಿಕ ವಾತಾವರಣವಿತ್ತು. ಪಾದ್ರಿಯೂ ಕೂಡಾ ಆಗಿದ್ದರು. ತಾಯಿ ರೀಕೆ ಹರ್ಮನ್ ಮೂರು ವರ್ಷದವರಿರುವಾಗಲೇ ತೀರಿಹೋದರು. ಹರ್ಮನ್ ಬಾಲ್ಯದಿಂದಲೂ ಅಸಾಧಾರಣ ಪ್ರತಿಭಾವಂತನಾಗಿದ್ದ. ಶಿಕ್ಷಣದಲ್ಲಿ ಅಪಾರ ಆಸಕ್ತಿ ಪ್ರದರ್ಶಿಸಿದನು. ಧಾರ್ಮಿಕ ಸಂಸ್ಥೆಗಳ ಪ್ರಭಾವ ವ್ಯಾಪಕವಾಗಿದ್ದ ಆ ದಿನಗಳಲ್ಲಿ ಬೈಬಲ್ಲಿನ ನಿತ್ಯ ಪಠಣ ಹಾಗೂ ಅಭ್ಯಾಸಗಳು ಇವರ ಮೇಲೆ ಮಹತ್ತರ ಪರಿಣಾಮ ಬೀರಿದವು. ಹರ್ಮನ್ ಬಹುಭಾಷಾ ಪಾಂಡಿತ್ಯವನ್ನು ಹೊಂದಿದ್ದರು. ಲ್ಯಾಟಿನ್, ಗ್ರೀಕ್, ಜರ್ಮನ್ ಭಾಷೆಯನ್ನು ಕಲಿತಿದ್ದ ಅವರು ಆ ಭಾಷೆಗಳ ಕವಿಗಳಿಂದ ಪ್ರಭಾವಿತರಾಗಿದ್ದರು. ಟ್ಯೂಬಿಂಗನ್ ವಿಶ್ವವಿದ್ಯಾನಿಲಯದಲ್ಲಿ ಉನ್ನತ ಶಿಕ್ಷಣ ಪಡೆದ ಅವರು ಅಲ್ಲಿಯೇ ಡಾಕ್ಟರೇಟ್ ಪದವಿ ಕೂಡ ಪಡೆದರು.


ಹರ್ಮನ್ ಮೋಗ್ಲಿಂಗ್‌ರ ತಂದೆ ಮುಸ್ಸಿಂಗ್‌ನಲ್ಲಿ ಸಭಾಪಾಲಕರಾಗಿದ್ದರು. ಹರ್ಮನ್‌ರಿಗೆ ವೈದ್ಯಕೀಯ ಓದಬೇಕೆಂಬ ಹಂಬಲ ಕ್ಷೀಣವಾಗುತ್ತಾ ಬಂದಿತು. ಸಾಹಿತ್ಯದತ್ತ ಒಲವು ಮೂಡಿತು. ಸಾಹಿತ್ಯಾಧ್ಯಯನದತ್ತ ಮನಸ್ಸು ಹರಿಯಿತು. ತಾನೂ ಕೂಡಾ ಕ್ರೈಸ್ತ ಮಿಶನರಿ ಆಗಬೇಕೆಂಬ ಆಸೆ ಚಿಗುರಿ ಮುಸ್ಸಿಂಗನ್ ಚರ್ಚ್‌ನಲ್ಲಿ 1834ರಲ್ಲಿ ಸಹಾಯಕ ಸಭಾಪಾಲಕರಾಗಿ ಸೇರಿಕೊಂಡರು. ರೆವರೆಂಡ್ ಹರ್ಮನ್ ಮೋಗ್ಲಿಂಗ್ ಅವರಿಗೆ ಬಾಸೆಲ್‌ಗೆ ಹೋಗಬೇಕೆಂಬ ಉತ್ಕಟೇಚ್ಛೆ ಉಂಟಾಗಿ ಅದನ್ನು ತಂದೆಗೆ ತಿಳಿಸಿದರು. ಅರೇಬಿಕ್ ಮತ್ತು ಸಂಸ್ಕೃತ ಭಾಷೆ ಕಲಿತು, ಕೆಲ ಕಾಲ ಇಂಗ್ಲೆಂಡಿಗೆ ಹೋಗಿ ಆಂಗ್ಲ ಭಾಷೆಯಲ್ಲಿ ಹೆಚ್ಚಿನ ಅಧ್ಯಯನ ಮಾಡಿದರು. ರೇವರೆಂಡ್ ಫ್ರೇ. ಎಂಬ ಕ್ರೈಸ್ತ ಮಿಶನರಿಯೊಂದಿಗೆ ಮೂವರು ಧರ್ಮಪ್ರಸಾರಕರು 1834ರಲ್ಲಿ ಕಲ್ಲಿಕೋಟೆ ತಲುಪಿದರು. ನಂತರ ಮಂಗಳೂರಿಗೆ ಪಯಣಿಸಿದರು. ಭಾರತ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿದ್ದರಿಂದ, ಬಾಸೆಲ್ ಧರ್ಮಪ್ರಚಾರ ಸಂಸ್ಥೆ ವಿಶೇಷ ಅನುಮತಿಯನ್ನು ಪಡೆದು; ತನ್ನ ಕಾರ್ಯಚಟುವಟಿಕೆಗಳನ್ನು ಆರಂಭಿಸಿತು. 177 ವರ್ಷಗಳ ಇತಿಹಾಸದ ಈ ಮಹಾನ್ ಸಂಸ್ಥೆ ಕನ್ನಡಿಗರಿಗೆ ಮೊದಲ ಬಾರಿಗೆ ಮುದ್ರಣ ಕಲೆ ಪರಿಚಯಿಸಿತು. ಭಾರತದ ಮೊದಲ ಪತ್ರಿಕೆ 1780ರಲ್ಲೇ ಆರಂಭವಾಗಿತ್ತು. ಕಲ್ಕತ್ತಾ ನಗರದಲ್ಲಿ ಅದು ಆಂಗ್ಲಭಾಷೆಯಲ್ಲಿ ಪ್ರಕಟವಾಗುತ್ತಿತ್ತು.

ಮೋಗ್ಲಿಂಗ್‌ರು ಅತ್ಯಂತ ಸರಳ ಜೀವಿಯಾಗಿದ್ದರು. ಮೋಗ್ಲಿಂಗ್ ಬಂದುದು ಧರ್ಮ ಪ್ರಚಾರಕ್ಕಾಗಿ. ಆದರೆ ಇಲ್ಲಿ ಮಾಡಿದ್ದು ಸಾಹಿತ್ಯ–ಪತ್ರಿಕೋದ್ಯಮ ಸಾಧನೆ. ಬೆಳಗಿನ ಮೂರು ಗಂಟೆಯಿಂದ ಸಂಜೆಯವರೆಗೂ ಛಲದಿಂದ ಕನ್ನಡ, ಅಧ್ಯಯನ ಮಾಡಿದ ಮೋಗ್ಲಿಂಗ್ ಕೆಲವೇ ದಿನಗಳಲ್ಲಿ ಕನ್ನಡ ಭಾಷೆಯಲ್ಲಿ ಪ್ರಭುತ್ವ ಸಾಧಿಸಿದರು. "ಕ್ರೈಸ್ತ ಸಭಾಕ್ರಮ ", "ಕೂರ್ಗ್ ಮೆಮೋಯರ್ಸ್" 'ಹೃದಯ ದರ್ಪಣ', 'ರಾಜೇಂದ್ರನಾಮೆ', 'ಜಾತಿ ವಿಚಾರಣೆ', 'ದೇವರ ವಿಚಾರಣೆ', ಮೊದಲಾದ ಕೃತಿ ರಚಿಸಿದ ಮೋಗ್ಲಿಂಗ್ ದಾಸರ ಪದಗಳನ್ನು ಜರ್ಮನಿ ಭಾಷೆಗೆ ಅನುವಾದಿಸಿದ್ದು ಮಹತ್ತರ ಸಾಧನೆ. ಜೊತೆಗೆ ಕನ್ನಡ ಗಾದೆ ಮಾತುಗಳಿಂದ ಆಕರ್ಷಿತರಾಗಿದ್ದ ಅವರು ಕನ್ನಡದ ಗಾದೆಗಳು ಎಂಬ ಪುಸ್ತಕವನ್ನೇ ರಚಿಸಿದರು.

ಕನ್ನಡದ ಪತ್ರಿಕೋದ್ಯಮದ ಇತಿಹಾಸದಲ್ಲಿ 'ಮಂಗಳೂರು ಸಮಾಚಾರ' (1843)'ಕಂನಡ ಸಮಾಚಾರವು' (1844)– ಎಂಬ ಎರಡು ವರ್ತಮಾನ ಪತ್ರಿಕೆಗಳು ಅತ್ಯಂತ ಪ್ರಮುಖವಾಗಿವೆ. ಇವು ಕನ್ನಡ ಪತ್ರಿಕೋದ್ಯಮದ ಆರಂಭದ ಮೊದಲ ಘಟ್ಟದ ಮುಖ್ಯ ಮೈಲುಗಲ್ಲುಗಳಾಗಿವೆ. ಬ್ರಿಟಿಷರ ಆಡಳಿತ ಕಾಲದಲ್ಲಿ ಕನ್ನಡಿಗರಿಗೆ ಹೊಸದಾಗಿ ಪತ್ರಿಕಾ ಕ್ಷೇತ್ರವನ್ನು ಪರಿಚಯಿಸಿಕೊಟ್ಟವು. ಮಾಹಿತಿಯನ್ನು ತಿಳಿದುಕೊಳ್ಳುವ, ಹಂಚಿಕೊಳ್ಳುವ ತಿಳುವಳಿಕೆಯನ್ನು ವಿಸ್ತರಿಸಿಕೊಟ್ಟವು. ಅಗನಿಂದ ಪತ್ರಿಕಾ ವ್ಯವಸಾಯಕ್ಕೆ ತೊಡಗುವಂತೆ ಪ್ರೇರೇಪಿಸಿಕೊಟ್ಟವು. ಈ ಎರಡು ಪತ್ರಿಕೆಗಳ ಲೇಖಕ, ಸಂಪಾದಕರೇ ಹರ್ಮನ್ ಮೋಗ್ಲಿಂಗ್. ಇವರನ್ನು ಕನ್ನಡದ ಪತ್ರಿಕೋದ್ಯಮದ ಪಿತಾಮಹನೆಂದು ಅವರನ್ನು ಗೌರವದಿಂದ ಉಲ್ಲೇಖಿಸುತ್ತಾರೆ.

ಕನ್ನಡ ನಾಡಿನ ಜನಜೀವನ, ವಿವಿಧ ಜಾತಿ ಧರ್ಮಗಳ ಪ್ರಭಾವ, ರೀತಿನೀತಿಗಳನ್ನು ಅರಿಯಲು ಮೋಗ್ಲಿಂಗ್ ಒಂದು ಕಡೆ ನೆಲೆ ನಿಲ್ಲದೆ ಸುತ್ತಾಡಿದರು. ಅವರ ಬಹುಮುಖ ಕಾರ್ಯಸಾಧನೆಯನ್ನು ಗಮನಿಸಿ ಧಾರವಾಡ (1837–38), ಮಂಗಳೂರು (1839–1851), ಕೊಡಗು (1852–1860), ಈ ಮೂರು ಪ್ರದೇಶಗಳ ವ್ಯಾಪ್ತಿಯಲ್ಲಿ ಸುಮಾರು 24 ವರ್ಷಗಳ ಕಾಲ ಇವರ ಜೀವನ ಸುತ್ತಾಟ ನಡೆದಿದೆಯೆಂದು ವಿದ್ವಾಂಸರು ಗುರುತಿಸಿದ್ದಾರೆ. ಧರ್ಮಪ್ರಚಾರ, ಶಿಕ್ಷಣ, ಸಾಹಿತ್ಯ, ಸಂಶೋಧನೆ– ಪ್ರಕಟಣೆ, ಕನ್ನಡ ಲಿಪಿ ಸುಧಾರಣೆ, ಕನ್ನಡ ಅಂಕಿಗಳ ಬಳಕೆ, ಕನ್ನಡ ಪತ್ರಿಕೆಗಳ ಆರಂಭ ಇತ್ಯಾದಿ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿದ್ದಾರೆ. ಕೇವಲ ಬಾಸೆಲ್ ಮಿಷನರಿಯಾಗಿ ಧರ್ಮ ಪ್ರಚಾರದ ಕಾರ್ಯದಲ್ಲೇ ಉಳಿದಿದ್ದರೆ ನಮ್ಮ ನಾಡು ಮತ್ತು ಸಂಸ್ಕೃತಿಯು ಅಪರೂಪದ ಕೊಡುಗೆಯಿಂದ ವಂಚಿತವಾಗುತ್ತಿತ್ತು.

"ಕಿಟಕಿಯಿರದ ಬಿಡಾರದಲ್ಲಿರುವ ಜನರಿಗೆ ಪತ್ರಿಕೆಗಳ ಮೂಲಕ ನಾಲ್ಕೂ ದಿಕ್ಕಿಗೆ ಬೆಳಕು ಬೀರುವ ಹಾಗೆ". ಸಮಾಚಾರ ನೀಡುವ ಪಾಕ್ಷಿಕ ಪ್ರಕಟಣೆಯಾದ 'ಮಂಗಳೂರು ಸಮಾಚಾರ' 1843 ಜುಲೈ 1ರಂದು ಹೊರಡಿಸುವ ಐತಿಹಾಸಿಕ ನಿರ್ಧಾರವನ್ನು ಮೋಗ್ಲಿಂಗ್ ಕೈಗೊಂಡರು. ಈ ಪತ್ರಿಕೆ ಕನ್ನಡ ಪತ್ರಿಕಾ ಲೋಕಕ್ಕೆ ಮುನ್ನುಡಿ ಬರೆಯಿತು. ಈ ಮಹತ್ತರ ಕೊಡುಗೆಯ ಮೂಲಕ ಹರ್ಮನ್ ಕನ್ನಡ ಪತ್ರಿಕೋದ್ಯಮದ ಆದ್ಯ ಪ್ರವರ್ತಕನಾದನು. ಈ ಕನ್ನಡದ ಚೊಚ್ಚಲ ಪತ್ರಿಕೆ ಮಂಗಳೂರು ಸಮಾಚಾರವು ಕಲ್ಲಚ್ಚಿನಲ್ಲಿ ಹದಿನೈದು ದಿನಗಳಿಗೊಮ್ಮೆ (ಪಾಕ್ಷಿಕ) ಮಂಗಳೂರಿನಿಂದ ಪ್ರಕಟವಾಗುತ್ತಿತ್ತು. ನಾಲ್ಕು ಪುಟಗಳನ್ನೊಳಗೊಂಡ ಪತ್ರಿಕೆಯ ಬೆಲೆ ಕೇವಲ ಒಂದು ದುಡ್ಡು. ಇದರಲ್ಲಿ ಪತ್ರಿಕೆಯ ರವಾನೆಗೆ ಸಂಬಂಧಿಸಿದ ಅಂಚೆ ವೆಚ್ಚವೂ ಸೇರಿತ್ತು. ಮಂಗಳೂರಿನಲ್ಲಿ ಕೋತ್ವಾಲ್ ಕಟ್ಟೆಯೆದುರು ಮತ್ತು ತಾಲೂಕಾ ಕಚೇರಿಯ ಹತ್ತಿರವಿದ್ದ ಅವರ ಇಂಗ್ಲೀಷ್ ಶಾಲೆಯಲ್ಲಿ ಪತ್ರಿಕೆ ಮಾರಾಟಕ್ಕೆ ದೊರೆಯುತ್ತಿತ್ತು. ಇವ್ಯಾಂಜಲಿಕಲ್ (ಬಾಸೆಲ್) ಮಿಷನ್‌ದವರು ತರಿಸಿದ್ದ ಮುದ್ರಣ ಯಂತ್ರಕ್ಕೆ ಕಲ್ಲಚ್ಚನ್ನು ಜೋಡಿಸಿ ಪ್ರಕಟಿಸುತ್ತಿದ್ದರು. ಇದರಲ್ಲಿ ಕನ್ನಡ ಅಂಕಿಗಳನ್ನೇ ಮುದ್ರಿಸಿ ಪ್ರಕಟಿಸಿದ್ದಾರೆ. ಕಲ್ಲಚ್ಚಿನ ಮುದ್ರಣ ಸ್ವರೂಪ ಸುಂದರವಾಗಿತ್ತು. ಪತ್ರಿಕೆಯ ಒಡೆತನ ಬಾಸೆಲ್ ಮಿಷನ್‌ವರಿಗೆ ಸೇರಿದ್ದರೂ ಎಲ್ಲಿಯೂ ಅದರ ಪ್ರಸ್ತಾಪವಿರಲಿಲ್ಲ. ಅದರೆ ಪ್ರತಿ ಸಂಚಿಕೆಯ ಕೊನೆಯಲ್ಲಿ ಪತ್ರಿಕಾ ಸಂಪಾದಕರಾದ ಹರ್ಮನ್ ಮೋಗ್ಲಿಂಗ್ ಅವರ ಹೆಸರು ಪ್ರಕಟಗೊಂಡಿದೆ.



ಓದುಗರ ಬೆಂಬಲ ಹರ್ಮನ್‌ನ ನಿರೀಕ್ಷೆಗೆ ಮೀರಿತ್ತು ವಿವಿಧ ಪ್ರಾಂತ್ಯಗಳಿಂದ ಕನ್ನಡ ಭಾಷಿಕರು ಬರೆಯುತ್ತಿದ್ದ ಪತ್ರಗಳು ಮೋಗ್ಲಿಂಗ್‌ಗೆ ಅತೀವ ಆನಂದ ನೀಡುತ್ತಿದ್ದವು. ಆತನೇ ಹೇಳಿರುವ ಹಾಗೆ "ಮಂಗಳೂರು, ಮೈಸೂರು, ತುಮಕೂರು, ಬಳ್ಳಾರಿ, ಶಿವಮೊಗ್ಗ, ಹುಬ್ಬಳ್ಳಿ, ಶಿರಸಿ, ಹೊನ್ನಾವರ ಮೊದಲಾದ ಸ್ಥಳಗಳಲ್ಲಿ ಕೆಲವು ನೂರು ಜನ ಈ ಪತ್ರಿಕೆಯನ್ನು ತೆಗೆದುಕೊಳ್ಳುತ್ತಾ ಬಂದರು. ಪತ್ರಿಕೆಯೊಂದರ ಮೂಲಕ ಎಲ್ಲ ಕನ್ನಡ ಭಾಷಿಕರನ್ನು ತಲುಪುವ ಹೆಬ್ಬಯಕೆ ಅವರದಾಗಿತ್ತು. ಸುಮಾರು ಎಂಟು ತಿಂಗಳು ಮಂಗಳೂರಿನಲ್ಲಿ ಪ್ರಕಟವಾದ ಈ ಪತ್ರಿಕೆ ಬಳ್ಳಾರಿಗೆ ಮಾರ್ಚ್ 1844ರಲ್ಲಿ ವರ್ಗಾವಣೆಗೊಂಡಿತು. ನಂತರ 'ಕನ್ನಡ ಸಮಾಚಾರ'ವೆಂದು ಮರುನಾಮಕರಣಗೊಂಡಿತು. ಬಳ್ಳಾರಿಯಲ್ಲಿ ಸುಮಾರು ಹತ್ತು ತಿಂಗಳಕಾಲ ಈ ಪತ್ರಿಕೆ ಪ್ರಕಟವಾಯಿತು. ಮೋಗ್ಲಿಂಗ್‌ನಷ್ಟು ಕ್ರಿಯಾಶೀಲ ಸಮಾಚಾರ ಸಂಗ್ರಹಕಾರರು ಬಳ್ಳಾರಿಯಲ್ಲಿ ದೊರೆಯಲಿಲ್ಲ. ಮಂಗಳೂರಿನಲ್ಲಿದ್ದುಕೊಂಡು ಬಳ್ಳಾರಿಯಲ್ಲಿ ಪತ್ರಿಕೆ ನಡೆಸುವುದು ಕಷ್ಟವಾಯಿತು.

ಧಾರವಾಡ, ಮಂಗಳೂರು, ಕೊಡಗು ಹೀಗೆ 24 ವರ್ಷಗಳ ಕಾಲ ಮೋಗ್ಲಿಂಗ್‌ರು ಕನ್ನಡನಾಡಿನಲ್ಲಿದ್ದು ಅಪರೂಪದ ಸಾಧನೆ ಮಾಡಿದ್ದಾರೆ. ತಮ್ಮ ಇಳಿ ವಯಸ್ಸಿನಲ್ಲಿ ತಾಯ್ನಾಡಿನ ಬಯಕೆಯಾಗಿ ಜರ್ಮನಿಗೆ ಪ್ರಯಾಣ ಬೆಳೆಸಿ ತನ್ನ ಹುಟ್ಟೂರಿನಲ್ಲಿಯೇ 1881ರಲ್ಲಿ ಅಂದರೆ 70ನೇ ವಯಸ್ಸಿನಲ್ಲಿ ನಿಧನ ಹೊಂದಿದರು.

ಹೀಗೆ ಧರ್ಮ ಪ್ರಚಾರಕ್ಕೆ ಬಂದ ಮೋಗ್ಲಿಂಗ್ ಸಾಹಿತ್ಯ, ಪತ್ರಿಕೋದ್ಯಮದಲ್ಲಿ ಕನ್ನಡ ನಾಡಿಗೆ ನೀಡಿದ ಕೊಡುಗೆ ಅಪಾರ. ಕನ್ನಡ ಮನಸ್ಸುಗಳು ಅವರನ್ನು ಎಂದಿಗೂ ಮರೆಯಲಾರವು. ಹರ್ಮನ್‌ರಂತೆ ನಾವೂ ಕೂಡಾ ಸತತ ಅಧ್ಯಯನ, ಹೊಸತನದ ತುಡಿತ, ಸರಳ– ಶುದ್ಧ ಜೀವನ ಅಳವಡಿಸಿಕೊಳ್ಳಬೇಕಿದೆ. ಕನ್ನಡ ಭಾಷೆ, ಹಾಗೂ ಕನ್ನಡ ಅಂಕಿಗಳನ್ನು ಉಳಿಸಿಕೊಳ್ಳಬೇಕಿದೆ. ಇದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ. ■

ಜೂನ್ 21 ಅಂತರರಾಷ್ಟ್ರೀಯ ಯೋಗ ದಿನಾಚರಣೆ

# ಯೋಗ ಮತ್ತು ಆರೋಗ್ಯ





ಡಾ. ಪ್ರಕಾಶ .ಪಿ. ಪವಾಡಶೆಟ್ಟಿ

ಆಧುನಿಕ ಸಮಾಜದಲ್ಲಿ ಮಾನವನ ಜೀವನ ಶೈಲಿ ಯಾಂತ್ರಿಕವಾಗಿದೆ. ವಿಜ್ಞಾನ ಯುಗದ ಕೊಡುಗೆಗಳಾದ ಬೃಹತ್ ಕೈಗಾರಿಕೆಗಳು, ಹೆಚ್ಚುತ್ತಿರುವ ಯಂತ್ರ ವಾಹನಾದಿಗಳು, ಮಾರಕಾಸ್ತ್ರಗಳು, ಅಣು ಸ್ಫೋಟನೆಗಳು, ಪರಿಣಾಮದಿಂದ ನಿಸರ್ಗದಲ್ಲಿಯೂ ಅಸಮತೋಲನ ಉಂಟಾಗಿದೆ. ವಿಶ್ರಾಂತಿಯಿಲ್ಲದ ನಿರಂತರ ದುಡಿಮೆಯಿಂದಾಗಿ ಅನೇಕ ರೋಗ ರುಜಿನಗಳು ಮಾನಸಿಕ ಕ್ಲೇಷಗಳು ಮಾನವನನ್ನು ಬಾಧಿಸತೊಡಗಿವೆ. ನಮ್ಮ ಸಮಾಜದಲ್ಲೇ ಶೇಕಡಾ 75ಕ್ಕಿಂತಲೂ ಹೆಚ್ಚಿಗೆ ಮಾನಸಿಕ ರೋಗಗಳಿಂದ ನರಳುತ್ತಿರುವುದನ್ನು ಕಾಣಬಹುದಾಗಿದೆ. ಆಸೆ. ಆಲೋಚನೆಗಳು, ಮಿತಿಯ ಗಡಿಯನ್ನು ದಾಟಿವೆ ದ್ವಂದ್ವಗಳಿಂದ ಕೂಡಿದ ಮನಸ್ಸು, ಚಿಂತೆ, ಆತಂಕ, ಸಮಾಜವನ್ನು ಎಲ್ಲ ಕಡೆಯಿಂದ ಸುತ್ತುವರೆದಿದೆ.

ಈ ಎಲ್ಲ ಸಮಸ್ಯೆಗಳ ನಿವಾರಣೆಗಾಗಿ ಆಧುನಿಕ ಪಾಶ್ಚಾತ್ಯ ಚಿಕಿತ್ಸಾ ವಿಧಾನಗಳು ಬಳಕೆಯಲ್ಲಿದ್ದರು, ಅವು ಶಾಶ್ವತ ಪರಿಹಾರ ನೀಡದೆ ತಾತ್ಕಾಲಿಕ ಪರಿಣಾಮ ನೀಡುವುದರಿಂದ ನಮ್ಮ ಎಲ್ಲರ ಗಮನವು ಪ್ರಾಚೀನ ಪರಂಪರೆಯುಳ್ಳ ಯೋಗ ವಿಜ್ಞಾನದ ಕಡೆಗೆ ತಿರುಗಿದೆ. ನಮ್ಮ ಋಷಿ ಮುನಿಗಳು ಯೋಗ ವಿಜ್ಞಾನವನ್ನು ಬಳಸಿ, ಬೆಳಸಿ ಪೋಷಿಸಿಕೊಂಡು ಬಂದಿದ್ದಾರೆ.

**ಆರೋಗ್ಯ:** ಆರೋಗ್ಯ ಎಂದರೆ ತನ್ನನ್ನು ತಾನು ಗುಣಪಡಿಸಿಕೊಳ್ಳುವ ಸಾಮರ್ಥ್ಯ ಇರುವ ಸ್ಥಿತಿ ಜೈವಿಕ ಶಕ್ತಿ ಶರೀರ, ಮನ, ಬುದ್ಧಿಗಳ ಮೂಲಕ ಕೆಲಸ ಮಾಡುತ್ತದೆ. ಇದರ ಸುಸಂಗತಿಯೇ ಆರೋಗ್ಯ ಅದು ಸಮತೋಲನ ತಪ್ಪಿದರೆ ಅನಾರೋಗ್ಯ ನಾವು ತೆಗೆದುಕೊಂಡ ಆಹಾರ ಜೀರ್ಣವಾಗಿ ಪೋಷಕಾಂಶಗಳು ದೇಹದ ಜೀವಕೋಶಗಳನ್ನು ತಲುಪಿ ಎಲ್ಲ ಅಂಗಗಳು ಉತ್ತಮ ಕಾರ್ಯವನ್ನು ಹೊಂದಿರುವುದಲ್ಲದೆ ಬೌದ್ಧಿಕ, ಭಾವನಾತ್ಮಕ, ಸಾಮಾಜಿಕ ಆಧ್ಯಾತ್ಮಿಕ ಅಂಶಗಳನ್ನೊಳಗೊಂಡ ಪರಿಪೂರ್ಣ ಸ್ಥಿತಿಯಾಗಿದೆ.

ಆಯುರ್ವೇದದಲ್ಲಿ

**" ಸಮಧಾತುಃ ಸಮಾಗ್ನಿಃ ಸಮದೋಷಃ ಮಲಕ್ರಿಯಾಃ।**
**ಪ್ರಸನ್ನ ಆತ್ಮೇಂದ್ರಿಯ ಮನಃ ಆರೋಗ್ಯ ಇತ್ಯಭಿದೀಯತೇ॥"**

ಶರೀರದಲ್ಲಿ ಉತ್ಪನ್ನವಾಗುವ ಧಾತುಗಳು ಪ್ರಮಾಣಬದ್ಧವಾಗಿದ್ದು, ಜಠರಾಗ್ನಿ ಉತ್ತಮ ಸ್ಥಿತಿಯಲ್ಲಿದ್ದು, ವಾತ, ಪಿತ್ತ, ಕಫಗಳೆಂಬ ತ್ರಿದೋಷಗಳ ಸಮತೋಲನ ಸರಿಯಿದ್ದಾಗ ಮಲ–ಮೂತ್ರ– ಸ್ವೇದ ಮುಂತಾದವುಗಳ ಉತ್ಪತ್ತಿ ಮತ್ತು ವಿಸರ್ಜನೆ ಸುಸ್ಥಿತಿಯಲ್ಲಿರುವಾಗ ಪ್ರಸನ್ನವಾದ ಆತ್ಮ ಇಂದ್ರಿಯ ಮತ್ತು ಮನಸ್ಸುಗಳನ್ನುಳ್ಳ ಸ್ಥಿತಿಯೇ ಆರೋಗ್ಯವಾಗಿದೆ. ಯೋಗವು ರೋಗ ಪರಿಹಾರಕ. ರೋಗ ಪ್ರತಿಬಂಧಕ, ಆರೋಗ್ಯ ಪಾಲಕವೂ ಆಗಿರುವುದರ ಜೊತೆಗೆ ಮಾನವ ಕುಲಕ್ಕೆ ಸಂಜೀವಿನಿ ಆಗಿದೆ.



**ಯೋಗದ ಅರ್ಥ ಮತ್ತು ವ್ಯಾಖ್ಯೆಗಳು:** 'ಯೋಗ' ಎಂಬ ಸಂಸ್ಕೃತ ಶಬ್ದವು 'ಯುಜ್' ಎಂಬ ಧಾತುವಿನಿಂದ ಬಂದಿದೆ. ಯುಜ್ ಎಂದರೆ ಕೂಡಿಸುವುದು, ಜೋಡಿಸುವುದು, ಹೊಂದಿಸುವುದು ಎಂದಾಗುತ್ತದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ " ಸಮತ್ವಂ ಯೋಗ ಯಚ್ಯತೆ" ರಾಗ– ದ್ವೇಷ ಬೇಕು–ಬೇಡ, ಮಾನ್– ಅಪಮಾನ ಮುಂತಾದ ದ್ವಂದ್ವಗಳಲ್ಲಿ ಸಮಾನ ಭಾವವನ್ನು ಹೊಂದುವದೆ ಯೋಗ. "ಯೋಗಃ ಕರ್ಮಸು ಕೌಶಲ್ಯಮ್" ನಮ್ಮ ನಿತ್ಯ ಜೀವನದಲ್ಲಿ ಮಾಡುತ್ತಿರುವ ಕಾರ್ಯ ಚಟುವಟಿಕೆಗಳನ್ನು ಅಪಾರ ಕೌಶಲ್ಯದಿಂದ ಪೂರ್ಣಗೊಳಿಸಬೇಕು. ಯಾವುದೇ ಕೆಲಸ ಸಣ್ಣದಿರಲಿ ಅಥವಾ ದೊಡ್ಡದಿರಲಿ ನಿಷ್ಕಾಮಭಾವದಿಂದ ಪರಿಪೂರ್ಣ ಕೌಶಲ್ಯದಿಂದ ಆಚರಿಸುವದೇ ಯೋಗ ಎಂದಿದ್ದಾರೆ. ಪತಂಜಲಿ ಮುನಿಗಳು "ಯೋಗ ಚಿತ್ತವೃತ್ತಿ ನಿರೋಧಃ ಎಂದರೆ ಮನಸ್ಸಿನ ಚಂಚಲತೆಯನ್ನು ಲಯವಾಗಿಸಿ ಶಾಂತಿ ಸ್ಥಿತಿಗೆ ಹೋಗುವದೇ ಯೋಗ(ಮನಸ್ಸಿನಲ್ಲಿ ಏಳುವ ಅಲೆಗಳ ನಿರೋಧ) ಎಂದಿದ್ದಾರೆ.

ಆಧುನಿಕ ಪರಿಭಾಷೆಯಲ್ಲಿ ಹೇಳುವುದಾದರೆ ಬಿಂದು ಸಿಂಧುವಾಗುವಂತೆ ವ್ಯಷ್ಟಿಪ್ರಜ್ಞೆ ಕರಗಿ ಸಮಷ್ಟಿ ಪ್ರಜ್ಞೆಯಲ್ಲಿ ಒಂದಾಗುವುದೇ ಯೋಗ. ಸ್ವಾಮಿ ವಿವೇಕಾನಂದರು 'ಮನಸ್ಸಿನ ಮೇಲೆ ನಾವು ಪಡೆಯುವ ಪ್ರಭುತ್ವವೇ ಯೋಗ' ಯೋಗ ಮನೋಲಯದ ಸುಂದರ ಕಮಣಿಯ ಸ್ಥಿತಿಯೂ ಹೌದು ಆ ಸ್ಥಿತಿಯನ್ನು ಸಾಧಿಸುವ ಸಾಧನೆಯನ್ನು ಯೋಗವೆಂದು ಕರೆಯುತ್ತೇವೆ. ಮಾನವ ಮೂಲ ಸ್ವರೂಪದ ಸತ್–ಚಿತ್ ಆನಂದವನ್ನು ಹೊಂದುವುದೇ ಯೋಗವಾಗಿದೆ.

ಪತಂಜಲಿ ಯೋಗವು ಮನಸ್ಸಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಿದೆ. ಪತಂಜಲಿಗಳಿಂದ ಪ್ರಣೀತವಾದ ಅಷ್ಟಾಂಗ ಯೋಗವು ಬಹಳ ಪ್ರಮುಖವಾಗಿದೆ.

**ಅಷ್ಟಾಂಗ ಯೋಗ :**

1) ಯಮ
2) ನಿಯಮ
3) ಆಸನ
4) ಪ್ರಾಣಯಾಮ
5) ಪ್ರತ್ಯಾಹಾರ
6) ಧಾರಣ
7) ಧ್ಯಾನ
8) ಸಮಾಧಿ

ಯಮನಿಯಮಾಸನ ಪ್ರಾಣಯಾಮ ಪ್ರತ್ಯಾಹಾರ ಧಾರಣಾಧ್ಯಾನ ಸಮಾಧಿ ಹೀಗೆ ಸಮಾಜದಲ್ಲಿ ಒಳ್ಳೆಯ ಜೀವನವನ್ನು ನಡೆಸಲು ನೈತಿಕತೆ ಪ್ರಧಾನವಾಗಿದೆ. ಈ ನೈತಿಕತೆಯನ್ನು ಯಮದಲ್ಲಿ ನಿರೂಪಿಸಲಾಗಿದೆ. ಸತ್ಯ, ಅಹಿಂಸೆ, ಆಸ್ತೇಯ ಬ್ರಹ್ಮಚರ್ಯ, ಅಪರಿಗ್ರಹ ಇವು ದೇಶ ಕಾಲ ಜನಾಂಗಗಳಿಗೆ ಅತೀತವಾದವು ವ್ಯಕ್ತಿ ಮತ್ತು ಸಮಾಜಕ್ಕೆ ಅನ್ವಯವಾಗುವ ಆಚರಣ ತತ್ತ್ವಗಳಾಗಿವೆ.



**ಯೋಗಾಸನಗಳು :** "ಶರೀರ ಮಾಧ್ಯಮಂ ಖಲು ಧರ್ಮ ಸಾಧನಮ್' ಧರ್ಮದ ಮೊದಲ ಸಾಧನವೇ ಶರೀರ. ಧರ್ಮ,ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಪುರುಷಾರ್ಥಗಳ ಸಾಧನೆಗಳಿಗೂ ಈ ಶರೀರವೇ ಮಾಧ್ಯಮವಾಗಿದೆ. ಪತಂಜಲಿ ಮುನಿಗಳು ಅಷ್ಟಾಂಗ ಯೋಗದಲ್ಲಿ ಆಸನಗಳ ಕುರಿತು ಮೂರನೆ ಅಂಗದಲ್ಲಿ ನಿರೂಪಿಸಿದ್ದಾರೆ. ಸ್ವಾತ್ಮರಾಮರು ಹಠಯೋಗ ಪ್ರದೀಪಿಕೆಯಲ್ಲಿ ಮೊದಲನೆ ಅಂಗದಲ್ಲಿ ಆಸನಗಳ ಕುರಿತು. ತಿಳಿಸಿದ್ದಾರೆ. ಘೇರಂಡ ಮುನಿಗಳ ಘೇರಂಡ ಸಂಹಿತೆಯಲ್ಲಿ ಎರಡನೆ ಅಂಗದಲ್ಲಿ ಆಸನಗಳ ಕುರಿತು ನಿರೂಪಿಸಿದ್ದಾರೆ.

ಆಸನ ಎಂದರೆ ಭಂಗಿ, ನಿಲುವು ಎಂದಾಗುತ್ತದೆ. ಪತಂಜಲಿ ಮುನಿಗಳು 'ಸ್ಥಿರ ಸುಖಮಾಸನಂ' ಸ್ಥಿರವಾಗಿ ಸುಖಪ್ರದವಾಗಿ ದೀರ್ಘ ಕಾಲದವರೆಗೆ ಒಂದೇ ಭಂಗಿಯಲ್ಲಿ ಶರೀರವನ್ನಿರಿಸಿಕೊಳ್ಳುವದೇ ಆಸನವಾಗಿದೆ. "ಪ್ರಯತ್ನ ಶೈಥಿಲ್ಯಾನಂಥ ಸಮಾಪತ್ತಿಭ್ಯಾಮ" ಆಸನದ ಅಂತಿಮ ಹಂತದಲ್ಲಿ ಪ್ರಯತ್ನವನ್ನು ಹಿಂತೆಗೆದುಕೊಳ್ಳುವದರಿಂದ ಆಸನವು ಸಿದ್ಧಿಸುತ್ತದೆ.

ಯೋಗ ಶಾಸ್ತ್ರವು ಜೀವರಾಶಿಗಳಷ್ಟೇ ಆಸನಗಳಿವೆ ಎಂದು ಹೇಳುತ್ತದೆ. ಶಾಸ್ತ್ರ ಗ್ರಂಥಗಳು 32 ಆಸನಗಳೆಂದು ಮತ್ತು 84 ಆಸನಗಳೆಂದು ಉಲ್ಲೇಖಿಸುತ್ತವೆ. ಜನಸಾಮಾನ್ಯರು ದಿನನಿತ್ಯದಲ್ಲಿ ಸುಮಾರು 15 ರಿಂದ 20 ಆಸನಗಳನ್ನು ಸಾಧನೆ ಮಾಡಿದರೆ ಸಾಕಾಗುತ್ತದೆ. ಆಸನಗಳನ್ನು ಮುಖ್ಯವಾಗಿ ಮೂರು ಪ್ರಕಾರವಾಗಿ ವಿಂಗಡನೆ ಮಾಡಬಹುದಾಗಿದೆ.









- **ಧ್ಯಾನಕ್ಕೆ ಉಪಯುಕ್ತವಾದ ಆಸನಗಳು**
- **ವಿಶ್ರಾಂತಿದಾಯಕ ಆಸನಗಳು**
- **ಶರೀರದ ಆರೋಗ್ಯವನ್ನು ವೃದ್ಧಿಸುವ ಆಸನಗಳು**

**ಧ್ಯಾನಕ್ಕೆ ಉಪಯುಕ್ತವಾದ ಆಸನಗಳು :** ಈ ಆಸನದಲ್ಲಿ ಶರೀರದ ಚಲನವಲನಗಳು ಕಡಿಮೆಯಾಗಿ ಉಸಿರಾಟದಲ್ಲಿ ಸ್ಥಿರತೆ ಕಂಡು ಬರುತ್ತದೆ. ಬೆನ್ನುಮೂಳೆಯನ್ನು ನೇರವಾಗಿಟ್ಟುಕೊಳ್ಳುವದರಿಂದ ಮೆದುಳಿನ ಕಾರ್ಯ ಚಟುವಟಿಕೆಗಳು ಪೂರ್ಣ ಪ್ರಮಾಣದಲ್ಲಿ ವ್ಯವಸ್ಥಿತಗೊಂಡು ಮನಸ್ಸನ್ನು ಕೇಂದ್ರಿಕರಿಸಲು ಸಹಾಯಕವಾಗುತ್ತದೆ. ಉದಾ: ಪದ್ಮಾಸನ, ವಜ್ರಾಸನ, ಸಿದ್ಧಾಸನ, ಸ್ವಸ್ತಿಕಾಸನ, ಸುಖಾಸನ

**ವಿಶ್ರಾಂತಿದಾಯಕ ಆಸನಗಳು :** ಈ ಆಸನದಿಂದ ಶರೀರದಲ್ಲಿ ಆಯಾಸ ಕಡಿಮೆಯಾಗಿ ಕ್ರಿಯಾಶೀಲತೆ, ಹಗುರತೆ, ವಿಶಾಲತೆ ಕಂಡು ಬರುತ್ತದೆ. ಹೃದಯದ ಕಾಯಿಲೆ, ಅಧಿಕ ರಕ್ತದೊತ್ತಡ, ಮಾನಸಿಕ ವ್ಯಾಧಿಗಳಿದ್ದವರು ಈ ಆಸನದಿಂದ ಸಾಕಷ್ಟು ಲಾಭವನ್ನು ಪಡೆಯಬಹುದಾಗಿದೆ. ಉದಾ: ಮಕರಾಸನ, ಶವಾಸನ, ವಿಶ್ರಾಮಾಸನ, ತಾಡಾಸನ.

**ಶರೀರದ ಆರೋಗ್ಯವನ್ನು ವೃದ್ಧಿಸುವ ಆಸನಗಳು :** ಶರೀರದ ವಿವಿಧ ಭಾಗಗಳ ಸ್ನಾಯುಗಳನ್ನು ಕ್ರಿಯಾಶೀಲವಾಗುವಂತೆ ಉತ್ತೇಜನ ನೀಡುತ್ತದೆ. "ಬೆನ್ನುಮೂಳೆಯ ಮೃದುತ್ವವೆ ಯೌವ್ವನದ ಸಂಕೇತ" . ಹಿಗ್ಗುವಿಕೆ, ಕುಗ್ಗುವಿಕೆ, ಹಿಂದಕ್ಕೆ, ಮುಂದಕ್ಕೆ, ಎಡಕ್ಕೆ, ಬಲಕ್ಕೆ, ತಿರುಚುವಿಕೆಯಿಂದ ಶರೀರದಲ್ಲಿ ಜಡತ್ವ ನಿವಾರಣೆಯಾಗಿ ಲವಲವಿಕೆ ಉಂಟಾಗುತ್ತದೆ. ಉದಾ: ಉಷ್ಟ್ರಾಸನ, ಪಶ್ಚಿಮೋತ್ತಾನಾಸನ, ವಜ್ರಾಸನ, ವಕ್ರಾಸನ, ಸರ್ವಾಂಗಾಸನ, ಶಿರ್ಷಾಸನ ಮುಂತಾದ ಯೋಗ ಸಾಧನೆಗಳನ್ನು ಮಾಡುವುದರಿಂದ ಅನೇಕ ಲಾಭಗಳನ್ನು ಪಡೆಯಬಹುದಾಗಿದೆ ಶರೀರದ ಎಲ್ಲಾ ಅಂಗಾಂಗಳು ಸಾಮರಸ್ಯದಿಂದ ಕೆಲಸ ನಿರ್ವಹಿಸುತ್ತವೆ. ಶರೀರ ಯಾವಾಗಲೂ ವಿಶ್ರಾಂತಿಯ ಸ್ಥಿತಿಯಲ್ಲಿರುತ್ತದೆ. ದೇಹದ ಚಲನವಲನೆಗಳಿಂದಾಗಿ ಉಸಿರಾಟದ ಹೊಂದಾಣಿಕೆಯಾಗಿ ಚೈತನ್ಯ ಉಂಟಾಗುತ್ತದೆ. ಜೀರ್ಣಾಂಗಗಳ ಕಾರ್ಯ ಹೆಚ್ಚು ಕ್ರಿಯಾಶೀಲವಾಗಿ ನಡೆಯುತ್ತದೆ. ಶರೀರದಲ್ಲಿ ನಿರ್ನಾಳ ಗ್ರಂಥಿಗಳ ಪಾತ್ರ ಪ್ರಮುಖವಾದದ್ದಾಗಿದೆ. ಶರೀರದ ಬೆಳವಣಿಗೆ ಶರೀರದ ಸಂರಕ್ಷಣೆ ಅಪಘಾತಗಳನ್ನು ಸಹಿಸುವ ಶಕ್ತಿ ಹೆಚ್ಚಾಗುತ್ತದೆ. ಹೀಗೆ ಹೆಚ್ಚಿನ ಚಟುವಟಿಕೆಗಳು ಕ್ರಿಯಾಶೀಲವಾಗಿ ಎಲ್ಲ ಚಟುವಟಿಕೆಗಳ ಮೇಲೆ ಸಾಮರಸ್ಯವನ್ನು ಪಡೆಯುತ್ತವೆ.

**ಪ್ರಾಣಯಾಮ :** ಮನಸ್ಸು ಒಂದು ವಿಶಿಷ್ಟ ಶಕ್ತಿಯೂ ಹೌದು, ವಿಚಿತ್ರವೂ ಹೌದು. ಅನೇಕ ಸಾರಿ ಕಾಯಿಲೆಗಳು ಭಾವನೆಯಿಂದಾಗಿ ಉಂಟಾಗುವ ಮನಸ್ಸಿನ ಸೆಳೆತ, ಬಿಗಿತ ತಳಮಳ ಇವುಗಳಿಂದಾಗಿ ಹಲವು ವಿವಿಧ ಕಾಯಿಲೆಗಳು ಕ್ರಮೇಣವಾಗಿ ಉದ್ಭವಿಸುತ್ತವೆ. ನಮ್ಮ ಪರಿಸರದಲ್ಲಿ ನಡೆಯುವಂಥ ಯಾವದೇ ಪ್ರಚಲಿತ ವಿದ್ಯಮಾನಕ್ಕೆ, ನಾವು ಹೊಂದಿಕೊಳ್ಳದಿದ್ದಾಗ ಅದರ ಪ್ರತಿಕ್ರಿಯೆ, ಶರೀರ ಮತ್ತು ಮನಸ್ಸಿನ ಮೇಲೆ ಉಂಟಾಗುತ್ತದೆ.

ನಮ್ಮ ಮನಸ್ಸು ಮಾತು ಕೃತಿಗಳಲ್ಲಿ ಸಾಮರಸ್ಯವಿದ್ದಾಗ ಅಂತರಾತ್ಮ ಶುದ್ಧವಾಗಿ ಆತ್ಮವಿಶ್ವಾಸ ಮೂಡುತ್ತದೆ. ಹೀಗೆ ಮನಸ್ಸು ಮತ್ತು ಉಸಿರಾಟದ ಹೊಂದಾಣಿಕೆಯನ್ನು ಪ್ರಾಣಯಾಮದ ಮೂಲಕ ಕ್ರಮಬದ್ಧತೆಗೆ ಒಳಪಡಿಸಲಾಗುತ್ತದೆ. 'ಪ್ರಾಣಸ್ಯ ಆಯಾಮಃ ಪ್ರಾಣಾಯಾಮ' ಪ್ರಾಣ ಎಂದರೆ ಚೈತನ್ಯ ಶಕ್ತಿಯಾಗಿದೆ. ಸ್ಥೂಲವಾಗಿ ಪ್ರಾಣವನ್ನು ಉಸಿರಿನಿಂದ ಗುರುತಿಸುತ್ತೇವೆ. ಪ್ರಾಣ ಎಂದರೆ 'ಉಸಿರು' ಆಯಾಮ ಎಂದರೆ 'ನಿಯಂತ್ರಿಸು' ಎಂದಾಗುತ್ತದೆ. ಪ್ರಾಚೀನ ಮಹರ್ಷಿಗಳು ಪ್ರಾಣವನ್ನು ವಶಕ್ಕೆ ತಗೆದುಕೊಳ್ಳಲು ಉಸಿರನ್ನು ಮಾಧ್ಯಮವನ್ನಾಗಿ ಬಳಸಿದ್ದಾರೆ. ಈ ಶರೀರದಲ್ಲಿ ಹರಿಯುವ ಪ್ರಾಣ ಶಕ್ತಿಯ ಮಾರ್ಗಗಳಿಗೆ ನಾಡಿಗಳೆಂದು ಕರೆಯುತ್ತಾರೆ. ಮನುಷ್ಯನ ದೇಹದಲ್ಲಿ 72 ಸಾವಿರ ನಾಡಿಗಳಿವೆ ಎಂದು ಯೋಗಶಾಸ್ತ್ರ ಉಲ್ಲೇಖಿಸುತ್ತದೆ.

ಜನಸಾಮಾನ್ಯರು ಪ್ರಾಣಾಯಾಮವನ್ನು ಸತತವಾಗಿ ಶಾಸ್ತ್ರಬದ್ಧವಾಗಿ ಸಾಧನೆ ಮಾಡುವದರಿಂದ ಮನೋದೈಹಿಕ ತೊಂದರೆಗಳೆಲ್ಲವನ್ನು ದೂರ ಮಾಡಲು ಸಾಧ್ಯವಾಗುತ್ತದೆ. ಹಠಯೋಗದಲ್ಲಿ 8 ವಿಧವಾದ ಕುಂಭಕ ಸಹಿತ ಪ್ರಾಣಯಾಮಗಳನ್ನು ಉಲ್ಲೇಖಿಸಲಾಗಿದೆ. ಅವುಗಳಲ್ಲಿ ನಾಡಿ ಶೋಧನ ಪ್ರಾಣಾಯಾಮವು ಅತ್ಯಂತ ಉಪಯುಕ್ತವಾಗಿದೆ. ಪ್ರಾಣಾಯಾಮದಲ್ಲಿ ಹಲವಾರು ಪ್ರಕಾರಗಳಿದ್ದರೂ ಅವುಗಳ ಗುರಿ ಒಂದೇ ಆಗಿದೆ. ಜನಸಾಮಾನ್ಯರು ಯೋಗ ಗುರುಗಳ ಮಾರ್ಗದರ್ಶನದಲ್ಲಿ ಶಾಸ್ತ್ರೋಕ್ತವಾಗಿ ನಾಡಿಶೋಧನ ಪ್ರಾಣಯಾಮವನ್ನು ಪ್ರತಿನಿತ್ಯ ಸಾಧನೆ ಮಾಡುವದರಿಂದ ಅನೇಕ ಲಾಭಗಳು ದೊರೆಯುತ್ತವೆ. ಉಸಿರಾಟದ ದೋಷಗಳು ನಿವಾರಣೆಯಾಗಿ ಕ್ರಮಬದ್ಧತೆ ಉಂಟಾಗುತ್ತದೆ. ಉಸಿರಾಟದ ಕ್ರಮ ನಿಧಾನವಾಗಿ ಜೀವಕೋಶಗಳಿಗೆ ಆಮ್ಲಜನಕ ಹೆಚ್ಚಿನ ಪ್ರಮಾಣದಲ್ಲಿ ದೊರೆತು ಅವುಗಳ ಆರೋಗ್ಯ ಹೆಚ್ಚಾಗುತ್ತದೆ. ಮನಸ್ಸಿನ ಚಂಚಲತೆಯನ್ನು ನಿವಾರಿಸಿ ಏಕಾಗ್ರತೆಯನ್ನು ಹೆಚ್ಚಿಸಲು ಪ್ರಾಣಾಯಾಮ ಸಹಾಯಕವಾಗುತ್ತದೆ.

**ಪ್ರತ್ಯಾಹಾರ** : ಬಂದ ಮತ್ತು ಮುದ್ರೆಗಳಿಂದ ನರ ಮತ್ತು ಸ್ನಾಯುಗಳ ಮೇಲೆ ಹಿಡಿತ, ಪಂಚ ಪ್ರಾಣಗಳ ಸಮಾಗಮ, ಮಿದುಳಿನ ಚಟವಟಿಕೆಗಳಿಗೆ ಕ್ರಿಯಾಶೀಲತೆ ದೊರೆಯುತ್ತವೆ. ಇಂದ್ರೀಯಗಳು ಬಾಹ್ಯ ವಸ್ತುಗಳತ್ತ ಹರಿಯದಂತೆ ತಡೆಹಿಡಿದು ಇಚ್ಛಾಶಕ್ತಿಯನ್ನು ಅಂತರಮುಖವಾಗಿ ಪ್ರವಹಿಸುವಂತೆ ಮಾಡುವದೆ ಪ್ರತ್ಯಾಹಾರ. ಒಂದು ನಿರ್ದಿಷ್ಟ ವಸ್ತುವಿನಲ್ಲಿ ಪ್ರಯತ್ನದಿಂದ ಮನಸ್ಸನ್ನು ನಿಲ್ಲಿಸುವದೆ ಧಾರಣ. ಈ ಧಾರಣದಿಂದ ಆತ್ಮ ಸಾಕ್ಷಾತ್ಕಾರ ಉಂಟಾಗುತ್ತದೆ.

**ಧ್ಯಾನ–ಸಮಾಧಿ** : ಭಾರತೀಯ ಸಂಸ್ಕೃತಿಯಲ್ಲಿ ಧ್ಯಾನದ ಬಳಕೆ ಹಾಸು ಹೊಕ್ಕಾಗಿದೆ. ಹರ್ಬಟ್‌ಬೆನ್ಸನ್ ಎಂಬ ಪ್ರಖ್ಯಾತ ಮನೋವಿಜ್ಞಾನಿ ಧ್ಯಾನದ ಕುರಿತು ಸಾಕಷ್ಟು ಸಂಶೋಧನೆಗಳನ್ನು ನಡೆಸಿದ್ದಾರೆ. ಪ್ರಪಂಚದ ಹಲವು ಧರ್ಮಗಳಲ್ಲಿ ಧ್ಯಾನದ ಕುರಿತು ಉಲ್ಲೇಖಗಳಿವೆ. ಬೌದ್ಧ, ಇಸ್ಲಾಂ, ತಾವೋಜಿಯಿಸಮ್, ಜೋಡಾಯಿಸಂ, ಕ್ರೈಸ್ತ ಮುಂತಾದ ಧರ್ಮಗಳಲ್ಲಿಯೂ ಧ್ಯಾನವನ್ನು ಮಾಡುತ್ತಾರೆ. ರೋಮನ್ ಕ್ಯಾಥೋಲಿಕರು ಹೃದಯದ ಪ್ರಾರ್ಥನೆ ಎನ್ನುವ ವಿಶಿಷ್ಟ ಬಗೆಯ ಧ್ಯಾನವನ್ನು ಮಾಡುತ್ತಾರೆ. ಧ್ಯಾನದಿಂದ ಮೆದುಳಿನಲ್ಲಿ ಮುಖ್ಯವಾದ ಬದಲಾವಣೆ ಉಂಟಾಗುತ್ತದೆ. ಮೆದುಳಿನಲ್ಲಿರುವ ಸಾಧಾರಣ ಅಲೆಗಳು ತಮ್ಮ ಲಕ್ಷಣಗಳನ್ನು ಬದಲಿಸಿಕೊಳ್ಳುತ್ತವೆ.

ಸಾಮಾನ್ಯವಾಗಿ ಮನುಷ್ಯರು ಜಾಗ್ರತಾವಸ್ಥೆಯಲ್ಲಿದ್ದು, ಚಟುವಟಿಕೆಯಲ್ಲಿದ್ದರೆ ಇಇಜಿ ಯಂತ್ರವು ಮೆದುಳಿನ ಅಲೆಯನ್ನು ದಾಖಲು ಮಾಡುತ್ತದೆ. ಇದನ್ನು ಬೀಟಾ ರಿದಮ್ ಎನ್ನುವರು. ಧ್ಯಾನ ಮಾಡುವ ವ್ಯಕ್ತಿಯ ಮೆದುಳಿನ ಅಲೆಗಳು ಬದಲಾವಣೆಗೊಂಡು ಬೇರೆ ರೀತಿಯ ಅಲೆಗಳನ್ನು ಇಇಜಿ ಯಂತ್ರವು ದಾಖಲು ಮಾಡುತ್ತದೆ. ಅದನ್ನು ಅಲ್ಫಾ ರಿದಮ್ ಎನ್ನುವರು. ಬಿಟಾ ರಿದಮ್ ಅಲೆಗಳ ಗಾತ್ರ ಹಾಗೂ ಅವು ಹುಟ್ಟುವ ಅವಧಿ ನಿಶ್ಚಿತವಾಗಿರುವದಿಲ್ಲ. ಆದರೆ ಅಲ್ಫಾ ರಿದಮ್ ಅಲೆಗಳು ನಿಶ್ಚಿತ ಆಕಾರದಲ್ಲಿದ್ದು ಪ್ರತಿ ಸೆಕೆಂಡಿಗೆ 08 ಅಲೆಗಳು ಹುಟ್ಟುತ್ತವೆ. ಇದರಿಂದಾಗಿ ಉಸಿರಾಟ ಹಾಗೂ ಹೃದಯ ಬಡಿತದ ವೇಗವು ಕಡಿಮೆಯಾಗಿ ದೇಹವು ಆಮ್ಲಜನಕವನ್ನು ಬಳಸಿಕೊಳ್ಳುವ ಪ್ರಮಾಣವು ಕಡಿಮೆಯಾಗುತ್ತದೆ. ಸಮಾಧಿ ಧ್ಯಾನದ ಮುಂದುವರಿದ ಸ್ಥಿತಿಯಾಗಿದೆ.

ಧ್ಯಾನದ ಸ್ಥಿತಿಯಲ್ಲಿಯೇ ಮನಸ್ಸು ಇದ್ದಾಗ ಸಮಾಧಿ ಸ್ಥಿತಿಗೆ ಮನಸ್ಸು ಏರುವುದು ಆಗ ಮನಸ್ಸು ಜಾಗೃತವಾಗಿದ್ದರು ಆಲೋಚಿಸುವ ಆಲೋಚನೆಯ ಜೊತೆಗೆ ಐಕ್ಯವಾಗಿಬಿಡವುದು. ದೇಹ ಮನಸ್ಸು ಬುದ್ಧಿ ಎಲ್ಲವೂ ಲೀನವಾಗಿ ನಾನು, ನನ್ನದು ಎಂಬ ಭಾವನೆಗಳೇ ಇರುವದಿಲ್ಲ. ಬುದ್ಧಿ ಶಕ್ತಿಗೆ ನಿಲುಕದ ಶಾಂತಿ ಅನುಭವಕ್ಕೆ ಬರುವದು. ಈ ಸ್ಥಿತಿಯಿಂದ ಮನಸ್ಸಿನ ಸುಪ್ತಶಕ್ತಿಗಳು ಹೊರಬರುವವು. ನೀರಿನಲ್ಲಿ ಕರಗಿದ ಉಪ್ಪಿನಂತೆ ಮನಸ್ಸು ಆತ್ಮನಲ್ಲಿ ಬೆರೆತು ಒಂದಾಗುವದೆ ಸಮಾಧಿ. ಸಮಾಧಿಯ ಸ್ಥಿತಿಯಲ್ಲಿ ಯೋಗಿಯ ಮನಸ್ಸು ಪ್ರಾಪಂಚಿಕ ವ್ಯವಹಾರಗಳಿಂದ ಬಿಡುಗಡೆಯನ್ನು

ಹೊಂದಿ ನಿರಾಲಂಬ ಸ್ಥಿತಿಯಲ್ಲಿ ನಿಲ್ಲುತ್ತದೆ.

- **ಹಗುರವಾದ ಶರೀರ**
- **ಕ್ರಮಬದ್ಧವಾದ ಉಸಿರಾಟ**
- **ಪ್ರಶಾಂತವಾದ ಮನಸ್ಸು**
- **ಭಾವನೆಗಳ ಮೇಲೆ ಹಿಡಿತ**
- **ಶ್ರಾಂತಿ ಭಾವನೆಯಿಂದ ಸಕಲಕರ್ಮಗಳನ್ನು ಮಾಡುವುದು**
- **ಸದಾ ಆನಂದಮಯ ಪ್ರಜ್ಞೆಯಿಂದಿರುವುದು.**

ಪರಿಪೂರ್ಣ ಆರೋಗ್ಯದ ಈ 6 ಅಂಶಗಳು ಯೋಗ ಸಾಧನೆಯಿಂದ ದೊರೆಯುತ್ತವೆ. ಆದ್ದರಿಂದ ಯೋಗವು ಒಂದು ಸಮಗ್ರ ಆರೋಗ್ಯ ಪದ್ಧತಿ ಆಗಿದೆ.

**"ಯೋಗಸ್ತು ದರ್ಶನಾಯ ನ ತು ಪ್ರದರ್ಶನಾಯ ಭವತಿ"** ಯೋಗವು ಆತ್ಮ ಸಾಕ್ಷಾತ್ಕಾರಕ್ಕಾಗಿದೆ. ಆದರೆ ಪ್ರದರ್ಶನಕ್ಕಾಗಿಯಲ್ಲ. ಹೀಗೆ ಯೋಗ ಅನುಷ್ಠಾನದ ಸ್ಥಿತಿ, ಬಹಿರಂಗ ಸಾಧನೆಯಿಂದ ಅಂತರಂಗ ಸಾಧನೆ, ಅಂತರಂಗ ಸಾಧನೆಯಿಂದ ಅಂತರಾತ್ಮ ಸಾಧನೆಯಲ್ಲಿ ಕೊನೆಗೊಳ್ಳುತ್ತದೆ.

ಆಸನಗಳಿಂದ ಶರೀರಕ್ಕೆ ದೃಢತೆ ಮತ್ತು ಸ್ಥಿರತೆ ಆತ್ಮವಿಶ್ವಾಸ, ಪ್ರಾಣಾಯಾಮದಿಂದ ಉಸಿರಾಟದ ವ್ಯವಸ್ಥೆಯನ್ನು, ಬಂಧಗಳಿಂದ ನರ ಹಾಗೂ ಸ್ನಾಯುಗಳ ಮೇಲೆ ನಿಯಂತ್ರಣ, ಮುದ್ರೆಗಳಿಂದ ಇಂದ್ರಿಯ ನಿಗ್ರಹ, ಷಟ್ ಕ್ರಿಯೆಗಳಿಂದ ಸರ್ವ ಅಂಗಗಳನ್ನು ಶುದ್ಧೀಕರಿಸಿ, ಶಾಂತವಾದ ಮನಸ್ಸಿನಿಂದ ಧ್ಯಾನ ಮಾಡುವುದರಿಂದ ಸಂಕೀರ್ಣ ಪರಿಸರದಲ್ಲಿಯು ವ್ಯಕ್ತಿಯ ವ್ಯಕ್ತಿತ್ವದ ಶರೀರ, ಮನಸ್ಸು, ಬುದ್ಧಿ, ಭಾವನೆ, ಅಧ್ಯಾತ್ಮಿಕ ಹಂತಗಳಲ್ಲಿ ಪೂರ್ಣವಿಕಾಸ ಉಂಟಾಗಿ ಒಟ್ಟು ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಯನ್ನು ಅಭಿವೃದ್ಧಿಪಡಿಸಲು ಯೋಗ ವಿಜ್ಞಾನ ಸಹಕಾರಿಯಾಗಿದೆ.

ವೇಗದಿಂದ ಅತಿ ವೇಗದತ್ತ ಸಾಗುತ್ತಿರುವ ಇಂದಿನ ಸಮಾಜದಲ್ಲಿ ಅಷ್ಟಾಂಗ ಯೋಗವನ್ನು ಅಳವಡಿಸಿಕೊಂಡು ಸುಖ, ಶಾಂತಿ, ನೆಮ್ಮದಿ ಮತ್ತು ಸಂತೃಪ್ತಿಯ ಜೀವನವನ್ನು ನಡೆಸಿ ತನ್ಮೂಲಕ ಇಡೀ ಸಮಾಜ, ದೇಶ, ವಿಶ್ವವನ್ನು ನಿಜವಾದ ಆರೋಗ್ಯದತ್ತ ಕೊಂಡೊಯ್ಯಬಹುದಾಗಿದೆ.




# ಭಾರತ ಸಂವಿಧಾನ
## ಮೂಲಭೂತ ಕರ್ತವ್ಯಗಳು

1. ಪ್ರತಿಯೊಬ್ಬರು ಸಂವಿಧಾನಕ್ಕೆ ನಿಷ್ಠರಾಗಿರಬೇಕು. ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು ಹಾಗೂ ರಾಷ್ಟ್ರ ಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸಬೇಕು. ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆ ಭಾರತ ದೇಶದ ಪ್ರತಿಷ್ಠೆಯ ದ್ಯೋತಕಗಳು. ಇವುಗಳನ್ನು ಯಾವುದೇ ಕಾರಣಕ್ಕೂ ವಾಣಿಜ್ಯ ಉದ್ದೇಶಗಳಿಗೆ ಬಳಕೆ ಮಾಡುವಂತಿಲ್ಲ. ಅಲ್ಲದೆ ರಾಷ್ಟ್ರಧ್ವಜಕ್ಕೆ ಮತ್ತು ರಾಷ್ಟ್ರಗೀತೆಗೆ ಅವಮಾನ ಮಾಡುವುದು ಶಿಕ್ಷಾರ್ಹ ಅಪರಾಧವಾಗುತ್ತದೆ.
2. ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ಕೊಟ್ಟ ಉದಾತ್ತ ಆದರ್ಶಗಳನ್ನು ಮನನಗೊಳಿಸುವುದು ಮತ್ತು ಅದರಂತೆ ನಡೆದುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. (ಉದಾಹರಣೆ: 1857ರ ಸಿಪಾಯಿದಂಗೆ, ಗಾಂಧೀಜಿಯವರ ದಂಡಿ ಸತ್ಯಾಗ್ರಹ, ಜಲಿಯನ್ ವಾಲಾಬಾಗ್ ಮಾರಣ ಹೋಮ, ಸ್ವದೇಶಿ ಚಳುವಳಿ, ಭಾರತ ಬಿಟ್ಟು ತೊಲಗಿ ಚಳುವಳಿ, ಅಸಹಕಾರ ಚಳುವಳಿ ಇತ್ಯಾದಿ)
3. ಎಲ್ಲ ಭಾರತೀಯರು ರಾಷ್ಟ್ರದ ಸಾರ್ವಭೌಮತ್ವ, ಏಕತೆ, ಅಖಂಡತೆ ಮತ್ತು ನಿಷ್ಠೆಯನ್ನು ಎತ್ತಿ ಹಿಡಿಯಬೇಕು.
4. ದೇಶದ ರಕ್ಷಣೆಗೆ ಸಂಬಂಧಿಸಿದಂತೆ ಅವಶ್ಯಕತೆ ಬಿದ್ದಾಗ ರಾಷ್ಟ್ರದ ಸೇವೆಯಲ್ಲಿ ತೊಡಗಿಸಿಕೊಳ್ಳುವುದು.
5. ಭಾರತೀಯರು ಅವರು ಯಾವುದೇ ಧರ್ಮದವರಾಗಿರಲೀ, ಯಾವುದೇ ಭಾಷಿಕರಾಗಿರಲೀ, ಅಥವಾ ಪ್ರದೇಶದವರಾಗಿರಲೀ, ಪ್ರತಿಯೊಬ್ಬರು ಸಾಮರಸ್ಯವನ್ನು ಮತ್ತು ಭಾತೃತ್ವವನ್ನು ಪ್ರೇರೇಪಿಸಬೇಕು. (ಮಹಿಳೆಯರ ಆತ್ಮಗೌರವಕ್ಕೆ ಚ್ಯುತಿ ಬರುವಂಥ ಎಲ್ಲಾ ಆಚರಣೆಗಳನ್ನು ತ್ಯಜಿಸುವುದು; ಮಹಿಳೆಯರ ಅಪಹರಣ, ವರದಕ್ಷಿಣೆ ಕಿರುಕುಳ, ಸಜೀವ ದಹನ, ಮಹಿಳೆಯರ ಬಗ್ಗೆ ತಿರಸ್ಕಾರ ಭಾವ ಇತ್ಯಾದಿ ಆಚರಣೆಗಳು ನಿಲ್ಲಬೇಕು.)
6. ನಮ್ಮ ಸಮಷ್ಟಿ ಸಂಸ್ಕೃತಿಯ ಚಾರಿತ್ರಿಕ ಮೌಲ್ಯಗಳನ್ನು ಗೌರವಿಸುವುದರ ಜತೆಗೆ ಅವುಗಳನ್ನು ಕಾಪಾಡಿಕೊಂಡು ಬರುವುದು (ನಮ್ಮ ಸಂಸ್ಕೃತಿ, ನಮ್ಮ ಭಾಷೆ, ನಮ್ಮ ಸಂಗೀತ, ನಮ್ಮ ಉಡುಗೆ ತೊಡುಗೆಗಳ ಕುರಿತಾಗಿ ಗೌರವ, ಪಾಶ್ಚಿಮಾತ್ಯ ಸಂಸ್ಕೃತಿಯ ಅಂಧಾನುಕರಣೆಯನ್ನು ತ್ಯಜಿಸಿ, ನಮ್ಮ ಜೀವನ ಕ್ರಮದ ಮೌಲ್ಯಗಳನ್ನು ಎತ್ತಿ ಹಿಡಿಯುವುದು
7. ಅರಣ್ಯಗಳು, ಜಲ ರಾಶಿಗಳು, ಅಂದರೆ ಕೆರೆ, ಕಟ್ಟೆ, ನದಿ, ಸರೋವರಗಳು, ಅರಣ್ಯ ಜೀವಿಗಳು ಇವುಗಳನ್ನೆಲ್ಲ ಒಳಗೊಂಡಂತೆ ಪರಿಸರವನ್ನು ಕಾಪಾಡಿಕೊಳ್ಳುವುದಲ್ಲದೆ, ಅದನ್ನು ಉಳಿಸಿ ಬೆಳೆಸುವುದು (ಉದಾಹರಣೆಗೆ; ದಂತಕ್ಕಾಗಿ ಆನೆಗಳನ್ನು ಬೇಟೆಯಾಡುವುದು, ಚರ್ಮಕ್ಕಾಗಿ ಕಾಡು ಮೃಗಗಳನ್ನು ಕೊಲ್ಲುವುದು, ಪಶು ಪಕ್ಷಿಗಳನ್ನು ಬೇಟೆಯಾಡುವುದು, ಪರಿಸರಕ್ಕೆ ಹಾನಿ ಮಾಡುವುದು ಇತ್ಯಾದಿ)
8. ವೈಜ್ಞಾನಿಕ ಮನೋಧರ್ಮವನ್ನು, ಮಾನವೀಯತೆಯನ್ನು, ಅನ್ವೇಷಿಕ ಪ್ರವೃತ್ತಿ ಮತ್ತು ಸುಧಾರಣೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕು.
9. ಸಾರ್ವಜನಿಕ ಆಸ್ತಿಯನ್ನು ಕಾಪಾಡುವುದು ಮತ್ತು ಹಿಂಸಾ ಪ್ರವೃತ್ತಿಯನ್ನು ತ್ಯಜಿಸುವುದು. (ಇತ್ತೀಚಿನ ದಿನಗಳಲ್ಲಿ ಯಾವುದೇ ಚಳವಳಿಯಾಗಲೀ, ಯಾರ ಮೇಲೆ ಸಿಟ್ಟಿರಲಿ, ಬಸ್ಸುಗಳಿಗೆ ಬೆಂಕಿ ಹಚ್ಚುವುದು, ಕಟ್ಟಡಗಳ ಗಾಜುಗಳನ್ನು ಪುಡಿ ಮಾಡುವುದು, ಹಿಂಸಾಚಾರದಲ್ಲಿ ತೊಡಗುವುದು ಕಂಡು ಬರುತ್ತದೆ. ಇಂಥ ಕೃತ್ಯಗಳು ಸಭ್ಯವಲ್ಲ)
10. ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳ ಪರಿಧಿಯಲ್ಲಿ ಉತ್ಕೃಷ್ಟತೆ ಅಥವಾ ಮೇಲ್ಮೆಯನ್ನು ಸಾಧಿಸುವುದಕ್ಕೆ ಶ್ರಮಿಸುವುದು. ಇದರಿಂದ, ರಾಷ್ಟ್ರ ನಿರಂತರವಾಗಿ ಉದ್ಯಮಶೀಲತೆಯ ಮತ್ತು ಸಾಧನೆಯ ಮಟ್ಟಗಳನ್ನು ಎತ್ತರೆತ್ತರಕ್ಕೆ ತೆಗೆದುಕೊಂಡು ಹೋಗಲು ಅನುವಾಗುತ್ತದೆ.
11. ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ನೀಡುವುದು ತಂದೆ– ತಾಯಿಗಳು ಅಥವಾ ಪೋಷಕರಾದವರ ಕರ್ತವ್ಯ. 6 ರಿಂದ 14ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವುದು ಕಡ್ಡಾಯವಾಗಿದೆ.

Published by : The Director, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Lavanya Mudrana, #19, Vidyapeeta Circle, Banashankari 1st Stage, Bangalore - 560 050